ಆ) ಶೇಕಡವಾರು ಗಳಿಸಿದ ಅಂಕಗಳ ಆಧಾರದ ಮೇಲೆ ಶಿಕ್ಷಕರ ನೇಮಕಾತಿ ಆಯ್ಕೆ ಮಾಡಲಾಗುತ್ತಿದೆ. ನೇಮಕಾತಿ ನಿಯಮಗಳನ್ವಯ ಗರಿಷ್ಠ ವಯೋಮಿತಿ ಸಾಮಾನ್ಯ ವರ್ಗಕ್ಕೆ 40 ವರ್ಷ, ಹಿಂದುಳಿದ ವರ್ಗಕ್ಕೆ 43 ವರ್ಷ ಹಾಗೂ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ 45 ವರ್ಷಗಳು ಇದ್ದು ಎಲ್ಲಾ ವರ್ಗದ ಅಭ್ಯರ್ಥಿಗಳಿಗೂ ಸಾಕಷ್ಟು ಅವಕಾಶಗಳು ಇದೆ.

ಹಲವಾರು ವಯೋಮಿತಿ ಮೀರಿದ್ದ ಅಭ್ಯರ್ಥಿಗಳು ಉದ್ಯೋಗ ಪಡೆಯುವುದರಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಸಂಬಂಧದಲ್ಲಿ ಪ್ರತಿ ವರ್ಷ ಸರಾಸರಿ 7,600 ಅಭ್ಯರ್ಥಿಗಳು ಮತ್ತು 6,000 ಅಭ್ಯರ್ಥಿಗಳು ಕ್ರಮವಾಗಿ ಟಿ.ಸಿ.ಹೆಚ್ ಮತ್ತು ಬಿ.ಇಡಿ. ತರಬೇತಿ ಪಡೆಯುತ್ತಿರುವುದನ್ನು ಸಹ ಗಮನಿಸಲಾಗಿದೆ. ಪ್ರತಿ ವರ್ಷ ಸರಾಸರಿ 10,000 ಶಿಕ್ಷಕರನ್ನು ಪ್ರಾಥಮಿಕ ಶಾಲೆಗಳಿಗೂ ಹಾಗೂ 2,000 ಶಿಕ್ಷಕರನ್ನು ಪ್ರೌಢ ಶಾಲೆಗಳಿಗೂ ನೇಮಕ ಮಾಡಲಾಗುತ್ತಿದೆ.

ಇ) ಶೈಕ್ಷಣಿಕ ಹಿತ ದೃಷ್ಟಿಯಿಂದ ಮೆರಿಟ್ ಆಧಾರದ ಮೇಲೆಯೇ ನೇಮಕಾತಿ ಮಾಡಬೇಕೆಂಬುದು ಸರ್ಕಾರದ ಸ್ಪಷ್ಟ ನಿಲುವು.

ನಿಲುವಳಿ ಸೂಚನೆ

ನೀರಾವರಿ, ಲೋಕೋಪಯೋಗಿ ಹಾಗೂ ಇತರೇ ಇಲಾಖೆಗಳಲ್ಲಿ ಕಾಮಗಾರಿಗಳಿಗೆ ಸಂಬಂಧ ಪಟ್ಟಂತೆ ಬಿಲ್‌ಗಳು ಪಾವತಿಯಾಗದೇ ಇರುವ ಬಗ್ಗೆ

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಉಪಾಧ್ಯಕ್ಷರೆ, ನಾನು ತಂದಿರುವ ನಿಲುವಳಿ ಸೂಚನೆ ಏನೆಂದರೆ 1997-98ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನವನ್ನು ಬಿಡುಗಡೆ ಮಾಡದಿರುವುದರಿಂದ ರಾಜ್ಯದಲ್ಲಿ ನೀರಾವರಿ, ಲೋಕೋಪಯೋಗಿ, ಇತರ ಇಲಾಖೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದರೂ ಸಹ ಸಂಬಂಧಪಟ್ಟ ಬಿಲ್‌ಗಳನ್ನು ಪಾವತಿ ಮಾಡದೇ ಇದ್ದು, ರಾಜ್ಯ ಸರ್ಕಾರ ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿದೆ, ಇದರಿಂದಾಗಿರುವ ತೊಂದರೆಯನ್ನು ಚರ್ಚಿಸುವ ಬಗ್ಗೆ ಒಂದು ಪ್ರಸ್ತಾವನೆಯನ್ನು ಇಟ್ಟಿದ್ದೇನೆ. ಇಲ್ಲಿ ಮುಖ್ಯವಾದ ಉದ್ದೇಶ ಏನೆಂದರೆ, ನಾನು ಸುಮಾರು 4-5 ದಿವಸಗಳ ಹಿಂದೆ ಸರ್ಕಾರದ ಖಜಾನೆ ಖಾಲಿಯಾಗಿದೆ, ಸರ್ಕಾರ ಬಿಲ್‌ಗಳನ್ನು ಪಾವತಿ ಮಾಡಬೇಕಾಗಿತ್ತೋ ಅದನ್ನು ಕೂಡ ಪಾವತಿ ಮಾಡುತ್ತಿಲ್ಲ. ಖಜಾನೆಯಲ್ಲಿರುವ ಚೆಕ್ಕುಗಳೂ ಕೂಡ ಯಾವುದೂ ಪೋಸ್ಟ್ ಆಗಿಲ್ಲ. ಎರಡು ಲಕ್ಷಕ್ಕಿಂತ ಮೇಲ್ಪಟ್ಟ ಯಾವುದೇ ಚೆಕ್ಕುಗಳನ್ನು ಆನರ್ ಮಾಡದೇ ವಾಪಸ್ ಕಳುಹಿಸತಕ್ಕಂಥದ್ದು ಇದೆ. ಈ ಎಲ್ಲಾ ಅಂಶಗಳನ್ನು ನಾನು ಸರ್ಕಾರದ ಗಮನಕ್ಕೆ ತರಬೇಕು ಎನ್ನುವ ಉದ್ದೇಶದಿಂದ ಒಂದು ಹೇಳಿಕೆ ಕೊಟ್ಟಿದ್ದೆ. ಆಗ ಸನ್ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ವ್ಯಂಗ್ಯವಾಗಿ ಮತ್ತೊಂದು ಹೇಳಿಕೆ ಕೊಟ್ಟಿದ್ದಾರೆ. ಅದು ಏನೆಂದರೆ, ಸರ್ಕಾರದ ಖಜಾನೆ ಖಾಲಿ ಇಲ್ಲ. ಸರ್ಕಾರದ ಖಜಾನೆ ತುಂಬಿದೆ. ಬಹುಶಃ ಖರ್ಗೆಯವರ ಖಜಾನೆ ಖಾಲಿಯಾಗಿರಬಹುದು, ಇಲ್ಲವೆಂದರೆ ಅವರ ಪಕ್ಷದ ಖಜಾನೆ ಖಾಲಿಯಾಗಿದೆ ಎಂದು ಅವರು ಯಥಾಪ್ರಕಾರ, ತಮ್ಮದೇ ಧಾಟಿಯಲ್ಲಿ ವ್ಯಂಗ್ಯವಾಗಿ ಅವರು ಚೆನ್ನಗಿರಿ ತಾಲ್ಲೂಕಿನ ಶೈಲಿಯಲ್ಲಿ

ಮಾತನಾಡಿದ್ದಾರೆ. ಇದನ್ನು ಅವರು ಪ್ರಾಮಾಣಿಕವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಹೊರಕಡೆ ಉತ್ತರ ಕೊಡುವುದೇ ಬೇರೆ. ನೀವು ಬೇಕಾದರೆ ವಾಸ್ತವಿಕವಾಗಿ ಹಣಕಾಸಿನ ಪರಿಸ್ಥಿತಿ ಏನಿದೆ ಎಂಬುದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿ. ಆಯವ್ಯಯದಲ್ಲಿ ನೀರಾವರಿಗೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಎಷ್ಟು ಬಿಡುಗಡೆ ಮಾಡಿದಿರಿ, ಎಷ್ಟು ಬಿಲ್ ಪೆಂಡಿಂಗ್ ಇದೆ? ಅದೇ ರೀತಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ? ಎಷ್ಟು ಬಿಲ್‌ಗಳು ಬಾಕಿ ಇದೆ? ಅದೇ ರೀತಿ ಸಣ್ಣ ನೀರಾವರಿ, ಮಧ್ಯಮ ನೀರಾವರಿ, ಹಾಗೂ ಉಳಿದಂಥ ಬೇರೆ ಬೇರೆ ಇಲಾಖೆಗಳಲ್ಲಿ ಎಷ್ಟು ಹಣವನ್ನು ನಿಗದಿ ಮಾಡಿದ್ದೀರಿ? ಅದಕ್ಕೆ ಆಯವ್ಯಯದಲ್ಲಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ತಮಗೆ ಸಾಧ್ಯವಾಯಿತಾ? ಸಾಧ್ಯವಾಗಿಲ್ಲವೆಂದರೆ ಇದಕ್ಕೆ ಏನು ಕಾರಣ? ಸಂಪನ್ಮೂಲಗಳ ಸಂಗ್ರಹಣಾ ಯಾವುದೇ ಇಲಾಖೆಗಳಲ್ಲಿ ಮುತುವರ್ಜಿವಹಿಸಿ ಹೆಚ್ಚಿನ ಕೆಲಸ ಮಾಡಿದಾಗ, ಹೆಚ್ಚಿನ ಹಣದ ಪಾವತಿ ಇದೇ ವರ್ಷ ಮಾಡಿಕೊಡಿ ಎಂದು ಕೇಳಿದರೆ ಇದು ನನ್ನ ತಪ್ಪೇ? ನೀವು ಹೇಳಿಕೊಳ್ಳಬಹುದು. ಅದು ಏನೆಂದರೆ, ತರಾತುರಿಯಲ್ಲಿ ಕೆಲಸ ಜಾಸ್ತಿ ಮಾಡಿಸಿದ್ದೇವೆ, ಅಭಿವೃದ್ಧಿ ಕೆಲಸ ಆಗಬೇಕು ಎನ್ನುವ ದೃಷ್ಟಿಯಿಂದ ಮಾಡಿದ್ದೇವೆ ಇದಕ್ಕಾಗಿ ಬಿಲ್‌ಗಳು ಪೆಂಡಿಂಗ್ ಇದೆಯೇ ಹೊರತು, ನಾವು ನಿಗದಿ ಮಾಡಿದ ಹಣವನ್ನು ಕಡಿಮೆ ಮಾಡಿಲ್ಲ, ಅದನ್ನು ಬಿಡುಗಡೆ ಮಾಡಿದ್ದೇವೆ ಎಂದು ತಾವು ಹೇಳಿಕೊಳ್ಳಬಹುದು. ಆದರೆ ಇಲ್ಲಿ ಏನಾಗಿದೆ ಎಂದರೆ, ನಿಗದಿ ಮಾಡಿರುವ ಹಣವನ್ನೂ ಕೂಡ ಖರ್ಚು ಮಾಡತಕ್ಕಂಥ ಯೋಗ್ಯತೆ ತಮಗೆ ಇಲ್ಲ ಎಂದಾಗ, ನೀವು ಎಷ್ಟರಮಟ್ಟಿಗೆ ನಿಮ್ಮ ಆಯವ್ಯಯ ಇದೆ ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ಇದಕ್ಕೆ ಒಂದು ಶ್ವೇತಪತ್ರವನ್ನು ತಾವು ಹೊರಡಿಸಬೇಕಾಗುತ್ತದೆ. ಹಣಕಾಸಿನ ವಿಚಾರದಲ್ಲಿ ಪ್ರತಿ ಇಲಾಖೆಗೆ ಎಷ್ಟು ಹಣವನ್ನು ನಿಗದಿಪಡಿಸಿದ್ದೀರಿ? ಎಷ್ಟು ಖರ್ಚು ಮಾಡಿದ್ದೀರಿ? ಎಷ್ಟು ಬಿಲ್‌ಗಳು ಪಾವತಿ ಮಾಡಲು ಪೆಂಡಿಂಗ್ ಇದೆ ಮತ್ತು ತಾವು ನಿಗದಿಪಡಿಸಿದ ಹಣಕ್ಕಿಂತಲೂ ಹೆಚ್ಚಿಗೆ ಖರ್ಚು ಮಾಡಿದಂಥ ಪೆಂಡಿಂಗ್ ಬಿಲ್ ಎಷ್ಟು? ಇಲ್ಲಿ ಎರಡು ತರಹದ ಅಂಶಗಳನ್ನು ನಾವು ಕಾಣಬಹುದು. ಮೊದಲನೆಯದಾಗಿ, ತಾವು ನಮೂದು ಮಾಡಿ ನಿಗದಿಪಡಿಸಿದ ಹಣ ಎಷ್ಟು? ಅದಕ್ಕೆ ತಕ್ಕಂತೆ ಖರ್ಚು ಆಗಿರುವುದು, ಎಷ್ಟು? ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಖರ್ಚಾಗಿದ್ದರೆ ಆ ಪೆಂಡಿಂಗ್ ಬಿಲ್‌ಗಳು ಯಾವುದು? ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿ ತಾವು ಒಂದು ಸ್ಪಷ್ಟವಾದ ಶ್ವೇತಪತ್ರವನ್ನು ಹೊರಡಿಸಬೇಕಾಗುತ್ತದೆ. ನೇರವಾಗಿ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕರ್ನಾಟಕ ಕಂಟ್ರಾಕ್ಟರ್ಸ್ ಅಸೋಸಿಯೇಷನ್ನಿನವರು ಇವತ್ತು ಬೆಂಗಳೂರಿನಲ್ಲಿ ನಮಗೆ ಬಿಲ್ ಸಿಕ್ಕಿಲ್ಲ ಎಂದು ಬೆದರಿಸಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಹಾಗೂ ಗುಬ್ಬಿ, ತುಮಕೂರಿನಲ್ಲಿ ಕೂಡ ಬಾಕಿ ಪಾವತಿಗಾಗಿ ಹೇಮಾವತಿ ಕಛೇರಿಗೆ ಬೀಗ ಹಾಕಿದ್ದಾರೆ. ಕೋಲಾರದಲ್ಲಿ ಗುತ್ತಿಗೆದಾರರಿಂದ ಲೋಕೋಪಯೋಗಿ ಕಛೇರಿಗೆ ಬೀಗ ಹಾಕಿದ್ದಾರೆ. ಮಂಡ್ಯದಲ್ಲಿ ಬಿ.ಸಿ. ನಾಲೆಗೆ ಸಂಬಂಧಪಟ್ಟ ಬಿಲ್ ಪಾವತಿಸಿಲ್ಲ ಎಂದು ಧರಣಿ ಕುಳಿತಿದ್ದಾರೆ. ಇನ್ನೂ 2-4-98ರ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿ ಪ್ರಕಾರ 5 ಕೋಟಿ, 50 ಲಕ್ಷ ರೂ. "Contractors demand early settlement - Dharna". ಇದರ ಜೊತೆಗೆ ರಾಯಚೂರಿನಲ್ಲಿ ಕೂಡ ಗುತ್ತಿಗೆದಾರರು ನೀರಾವರಿ ಕಚೇರಿಗೆ ಬೀಗ ಹಾಕಿಸಿದ್ದಾರೆ. ಕೆಲವು ಕಂಟ್ರಾಕ್ಟ್‌ದಾರರು ಬಿಲ್ಡಿಂಗ್

ಕೆಲಸವನ್ನು ಪೂರ್ಣಗೊಳಿಸಿದ್ದಾರೆಂದು ಅಲ್ಲಿ ಅವರಿಗೆ ಸನ್ಮಾನ ಮಾಡಲು ಕರೆದರೂ ಕೂಡ ಕಂಟ್ರಾಕ್ಟರ್‌ದಾರರು ಅಲ್ಲಿಗೆ ಬರದೆ ತಮ್ಮ ಬಿಲ್ಲಿನ ಹಣ ಪಾವತಿ ಮಾಡಿದರೆ ಸಾಕು, ತಮಗೆ ಯಾವ ಸನ್ಮಾನವು ಬೇಕಾಗಿಲ್ಲವೆಂದು ವಿಕ್ಟೋರಿಯ ಆಸ್ಪತ್ರೆ ಎದುರುಗಡೆ ಕುಳಿತುಕೊಂಡು ಪ್ರತಿಭಟಿಸುತ್ತಿದ್ದಾರೆ. ಹಾಗೆಯೇ ಅನೇಕ ಕಡೆ ಇವತ್ತಿನ ದಿವಸ ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದಕ್ಕೆ ಹಣ ಕೊಡತಕ್ಕಂಥ ಶಕ್ತಿ ನಿಮ್ಮಲ್ಲಿ ಇಲ್ಲ. ಇನ್ನೊಂದುಕಡೆ ನಿಗದಿ ಪಡಿಸಿದ ಹಣ ಬಿಡುಗಡೆ ಮಾಡತಕ್ಕಂಥ ತಾಕತ್ತು ನಿಮ್ಮಲ್ಲಿಲ್ಲ. ಮೂರನೆಯದಾಗಿ, ನೀವು ರಿಸೋರ್ಸಸ್ ಮೊಬಿಲೈಸ್ ಮಾಡುತ್ತೇವೆಂದು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೀರಿ, ಆದರೆ ಅಷ್ಟು ಉದಾಹರಣೆ ಸಾಕು. ಆದರೆ ಬೇರೆ ಏನೂ ನಾನು ಕೇಳುತ್ತಿಲ್ಲ. ಆದರೆ ಇವತ್ತು ನೀವು ನಮ್ಮ ಖಜಾನೆ ತುಂಬಿದೆ ಎಂದು ಯಾವ ಆಧಾರದಮೇಲೆ ಹೇಳಿದ್ದೀರಿ ? ಒಂದು ವೇಳೆ ನಿಮ್ಮ ಖಜಾನೆ ತುಂಬಿದ್ದರೆ, ಯು.ಕೆ.ಪಿ. ಕಾಮಗಾರಿಗೆ ಕೊಡತಕ್ಕಂಥ600 ಕೋಟಿ ರೂಪಾಯಿ ಇನ್ನೂ ಬಿಡುಗಡೆ ಆಗಿಲ್ಲವೆಂದು ನಿಮ್ಮ ಮಂತ್ರಿಗಳು ಹೇಳುತ್ತಿರಲಿಲ್ಲ. ಇವತ್ತು ನಿಮ್ಮ ಖಜಾನೆ ಭರ್ತಿ ಇದ್ದಿದ್ದರೆ ನಾನು ತಿಳಿದುಕೊಂಡಿರುವಂತೆ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ 135 ಕೋಟಿ ರೂಪಾಯಿಗಳಷ್ಟು ಬಿಲ್ ಪೆಂಡಿಗ್ ಇದೆ. ಅದರಲ್ಲಿ ನಿಗದಿಪಡಿಸಿರುವಂತಹದು ಸುಮಾರು 80 ಕೋಟಿ ರೂಪಾಯಿ, ಉಳಿದ 45 ಕೋಟಿ ರೂಪಾಯಿಗಳಷ್ಟು ಎಕ್ಸಸ್ ಖರ್ಚು ಮಾಡಿರುವಂಥದ್ದನ್ನು ಬಿಟ್ಟುಬಿಡಿ, ಆದರೆ 80 ಕೋಟಿ ರೂಪಾಯಿ ನೀವು ಕಮಿಟ್‌ಮೆಂಟ್ ಮಾಡಿರುವುದು. ಗೋಅಹೆಡ್ ಎಂದು ಬಜೆಟ್‌ನಲ್ಲಿ ಹೇಳಿದಾಗ ಅವರು ಕೆಲಸ ಮಾಡಿದ್ದಾರೆ. ಅದರ ಪ್ರಕಾರ ಈ ಇಲಾಖೆಗೆ ಸುಮಾರು 35 ಕೋಟಿ ಮತ್ತು ಸಣ್ಣ ಮತ್ತು ಮಧ್ಯಮ ನೀರಾವರಿ ಇಲಾಖೆಗಳಲ್ಲಿ ಸುಮಾರು 150 ಕೋಟಿ ಹಾಗೂ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ನೀರಾವರಿ ಕೆಲಸಕ್ಕೆ 300 ಕೋಟಿ ರೂಪಾಯಿ ಖರ್ಚು ಮಾಡಿದ್ದು, ಆದರೆ ಈಗ ಅಲ್ಲಿ ಬಿಲ್ ಪಾವತಿ ಮಾಡತಕ್ಕಂಥದ್ದು ಹಾಗೆ ಇದೆ. ಬೇರೆ ಸಣ್ಣಪುಟ್ಟ ಇಲಾಖೆಗಳನ್ನು ಸೇರಿಸಿಕೊಂಡರೆ ಸುಮಾರು 100 ಕೋಟಿ ರೂಪಾಯಿ ಮೇಲೆ ಬಿಲ್ ಪಾವತಿ ಮಾಡುವಂಥದ್ದು ಹಾಗೆ ಇದೆ. ಹೀಗೆ ಎಲ್ಲಾ ಲೆಕ್ಕ ತೆಗೆದುಕೊಂಡರೆ ಸುಮಾರು 900 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಇವತ್ತು ನೀವು ಪಾವತಿ ಮಾಡತಕ್ಕಂಥ ಹಣ ಉಳಿದಿದೆ. ಇದಕ್ಕಾಗಿ ಬಜೆಟೆಡ್ ಪ್ರಾವಿಷನ್‌ನಲ್ಲಿ ಸುಮಾರು 750 ರಿಂದ 800 ಕೋಟಿ ರೂಪಾಯಿಗಳಷ್ಟು ಇದೆ. ಬಜೆಟೆಡ್ ಹಣಕ್ಕಿಂತ ಹೆಚ್ಚು ಖರ್ಚುಮಾಡಿರುವುದು ಸುಮಾರು 100 ಕೋಟಿ ರೂಪಾಯಿಗಳ ಮೇಲೆ ಹೋಗಬಹುದು, ಅದನ್ನು ನಾನು ಕೇಳುತ್ತಿಲ್ಲ. ಅದನ್ನು ಈ ವರ್ಷ ಅಥವಾ ಮುಂದಿನ ವರ್ಷ ಕೊಡಿ, ಏಕೆಂದರೆ ಹಣಕ್ಕೆ ಇಲ್ಲಿ ಬೆಂಬಲ ಇರಲಿಲ್ಲ ಅಥವಾ ನೀವು ಕೂಡ ಬಜೆಟ್‌ನಲ್ಲಿ ಹಾಕಿದ್ದಿಲ್ಲ, ಆದ್ದರಿಂದ ಅದನ್ನು ಖರ್ಚು ಮಾಡಿರಬಹುದು. ಅದನ್ನು ಈ ವರ್ಷ ಪ್ರಾವಿಷನ್ ಮಾಡಿ ಕೊಡಬಹುದು. ಆದರೆ ಯಾವುದಕ್ಕೂ ನೀವು ಪ್ರಾವಿಷನ್ ಮಾಡಿಕೊಂಡಿರತಕ್ಕಂಥ ಹಣವನ್ನು ಬಿಡುಗಡೆ ಮಾಡಿಲ್ಲ ಎಂದರೆ ನಿಜವಾಗಿಯೂ ಸರ್ಕಾರ ದಿವಾಳಿ ಎದ್ದಿದೆ ಮತ್ತು ಖಜಾನೆಯಲ್ಲಿ ಹಣ ಇಲ್ಲ. ಸಂಗ್ರಹಣೆ ಮಾಡಿರುವುದರಲ್ಲಿ ಮಿಸ್ ಕ್ಯಾಲಕ್ಯೂಲೇಷನ್ ಆಗಿದೆಯೋ ಅಥವಾ ನೀವು ಎಷ್ಟು ಅಪೇಕ್ಷೆ ಮಾಡಿದ್ದೀರೋ ಅಷ್ಟು ನಿಮಗೆ ಸಿಕ್ಕಿಲ್ಲ ಎಂಬುದಕ್ಕೆ ಇದೊಂದೇ ಉದಾಹರಣೆ ಸಾಕು. ಇದನ್ನು ಯಾವರೀತಿ ತಪ್ಪಿಸಬೇಕೆಂದು ತಾವು ಇನ್ನೊಂದು ಪ್ರಯತ್ನವನ್ನೂ ಕೂಡ ಮಾಡಿದ್ದೀರಿ. ಆರ್ಥಿಕ

ಇಲಾಖೆಯಿಂದ ತಾವು ಒಂದು ಸುತ್ತೋಲೆಯನ್ನು ಕಳುಹಿಸಿದ್ದೀರಿ. ಅದು ಏನೆಂದರೆ, The Government in Finance Department has issued a Circular on 17-1-98 directing the concerned to present the bills pertaining to financial year 1997-98 sufficiently in advance. FD 2 TPC 97, ಅದರ ಪ್ರಕಾರ ತಾವು ನಾಲ್ಕೈದು ಪಾಯಿಂಟ್‌ಗಳನ್ನು ಈ ರೀತಿ ಹೇಳಿದ್ದೀರಿ. To avoid irregular payments without scrutiny at the Treasury because when the bills are submitted in March end there will not be sufficient time to scrutinise the bills.

2) To ensure that the expenditure shall be within the grants available, ಗ್ರಾಂಟಿನೊಳಗೆ ಖರ್ಚುಮಾಡಿದ ಹಣವನ್ನೂ ಕೂಡ ಬಿಡುಗಡೆ ಮಾಡಿಲ್ಲ, ಆದರೆ ಈ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿ, ಹಣವನ್ನು ಬಿಡುಗಡೆ ಮಾಡಬಾರದೆಂದು ಖಜಾನೆಗೆ ಸಲಹೆಯನ್ನು ಕೊಟ್ಟು ಇವತ್ತು ಎರಡು ಲಕ್ಷ ರೂಪಾಯಿಗಳಿಗಿಂತ ಮೇಲೆ ಇರತಕ್ಕಂಥ ಯಾವುದೇ ಚೆಕ್ ಆನರ್ ಆಗುತ್ತಿಲ್ಲ. ಕೆಲವು ಸಂದರ್ಭದಲ್ಲಿ ಅದಕ್ಕಿಂತ ಕಡಿಮೆ ಇದ್ದಾಗ ಕೂಡ ಸಂಬಂಧಪಟ್ಟ ಅಧಿಕಾರಿಗಳು ಫೋನ್ ಮಾಡಿ ಹೇಳಿದರೆ ಮಾತ್ರ ಖಜಾನೆಯಿಂದ ಪಾಸ್ ಮಾಡುತ್ತಾರೆ, ಇಲ್ಲದಿದ್ದರೆ ಅದೂ ಕೂಡ ಮಾಡುವುದಿಲ್ಲ. ಇವತ್ತು ಇಷ್ಟೊಂದು ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದರೂ ಕೂಡ ನಮ್ಮಲ್ಲಿ ಸಾಕಷ್ಟು ಹಣ ಇದೆ ಮತ್ತು ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇವೆಂದು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ. ಮೂರನೆಯದು. To ensure that during the financial year the Officers does not draw money from the consolidated fund and keep them in PD Account with the intention to avoid the lapse of fund; ಪಿ.ಡಿ. ಅಕೌಂಟ್‌ನಲ್ಲಿ ಅವರು ಇಟ್ಟುಕೊಳ್ಳುತ್ತಾರೆ ಮತ್ತು ಕನ್‌ಸ್ಸಾಲಿಡೆಟೆಡ್ ಫಂಡ್‌ನಲ್ಲಿ ಡ್ರಾ ಮಾಡಿ ಎಂದು ಇವತ್ತು ಸುತ್ತೋಲೆಯನ್ನು ಇಷ್ಯೂ ಮಾಡಿದ್ದೀರಿ. ಇವತ್ತು ಬಿಲ್ ಸಬ್‌ಮಿಟ್ ಮಾಡಿದ್ದರು, ಚೆಕ್‌ಪಾಸ್ ಆಗದೇ ಇರತಕ್ಕಂಥ ಎಷ್ಟೋ ಚೆಕ್‌ಗಳು ಇವೆ. ಇವತ್ತು ಯಾವುದೇ ಇಲಾಖೆಯ ಬಿಲನ್ನು ಖಜಾನೆಗೆ ಕಳುಹಿಸಿದರೆ ಅಲ್ಲಿ ವಿಥ್‌ಹೆಲ್ಡ್ ಆಗುತ್ತಿದೆ. ಆದರೆ ಇಲ್ಲಿಂದ ಓರಲ್ ಇನ್‌ಸ್ಟ್ರಕ್ಷನ್ ಹೋಗುವವರೆಗೆ ಯಾವುದೇ ಟೋಕನ್ ಆಗಲಿ ಅವರು ಇಷ್ಯೂ ಮಾಡುವುದಿಲ್ಲ ಮತ್ತು ಚೆಕ್ ಕೂಡ ಪಾಸ್ ಮಾಡುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಎಲ್ಲೋ ಒಂದು ಕಡೆ ತೊಂದರೆ ಆಗುತ್ತಿದೆ. ಇದನ್ನು ಪರಿಶೀಲನೆ ಮಾಡದಿದ್ದರೆ ಇದೇ ರೀತಿ ಕೋಟಿಗಟ್ಟಲೆ ಹಣ ಆಕ್ಯುಮುಲೇಟೆಡ್ ಆಗಿ ಕೊನೆಗೆ ಓರಿಜನಲ್ ಬಜೆಟ್ ಎಷ್ಟು ಇರುತ್ತದೆ, ಅಷ್ಟೇ ಬಾಕಿ ಉಳಿಯತಕ್ಕಂಥ ಸಾಧ್ಯತೆ ಇರುತ್ತದೆ. ನಿಮಗೆ ಬರಬೇಕಾಗಿರತಕ್ಕಂಥ ಹಣ ಏಕೆ ಬಂದಿಲ್ಲ? ಎಲ್ಲಿ ಕೆಟ್ಟಿದೆ ಎಂಬುದನ್ನು ನೋಡಬೇಕಾಗುತ್ತದೆ. ಅಥವಾ ಗ್ರಾಂಟ್‌ಗಿಂತಲೂ ಹೆಚ್ಚು ಎಷ್ಟು ಕೆಲಸ ಮಾಡಿಸಿದ್ದೀರಿ? ಇವತ್ತು ನಿಗದಿ ಮಾಡಿರತಕ್ಕಂಥ ಹಣವನ್ನು ನೀವು ಏಕೆ ಬಿಡುಗಡೆ ಮಾಡಿಲ್ಲ? ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕನಿಷ್ಠಪಕ್ಷ 60 ರಿಂದ 70 ಕೋಟಿ ರೂಪಾಯಿಗಳಷ್ಟು ಬಜೆಟೆಡ್ ಹಣವನ್ನು ಕೂಡ ನೀವು ರಿಲೀಸ್ ಮಾಡಿಲ್ಲ. ಬಹುಶಃ ಎಕ್ಸಸ್ ಅಮೌಂಟ್ ಸುಮಾರು 135 ಕೋಟಿ ರೂಪಾಯಿಗಳಷ್ಟು ಇರಬಹುದು. ಆದರೆ ಪಿ.ಡಬ್ಲ್ಯೂ.ಡಿ. ಯಲ್ಲಿ ಕನಿಷ್ಟ ಪಕ್ಷ ಸುಮಾರು 80 ರಿಂದ

85 ಕೋಟಿ ರೂಪಾಯಿ ಬಜೆಟ್‌ನಲ್ಲಿದೆ ಮತ್ತು ಇದಕ್ಕೆ ನಬಾರ್ಡ್‌ನಿಂದ ಕೊಟ್ಟಿರುವ ಹಣವನ್ನು ಕೊಟ್ಟಿದ್ದೀರಿ. ಆದರೆ ಸರ್ಕಾರ ಕೊಡಬೇಕಾದ ಹಣವನ್ನು ಕೊಟ್ಟಿಲ್ಲ. ನಾಲ್ಕನೇ ಕಂಡೀಶನ್ ಏನೆಂದರೆ To avoid drawing of funds on AC bills from the Treasury on the last date of the year to avoid lapse of grants against the provisions. ಇಲ್ಲಿ ಲ್ಯಾಫ್ಸ್ ಆಫ್ ಗ್ರಾಂಟ್ ಆಗುವ ಪ್ರಶ್ನೆಯೇ ಇಲ್ಲ. ಕೆಲವು ಎಸ್‌ಸಿಪಿಯಲ್ಲಿ ಮಾತ್ರ ಲ್ಯಾಪ್ಸ್ ಆಗಬಹುದು. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಇರುತ್ತದೆ ಎಂದು ಹೇಳುತ್ತೀರಿ, ಅಂದರೆ ಇದನ್ನು ಡೈವರ್ಟ್ ಮಾಡಿದರೆ ಪಿ.ಡಿ. ಅಕೌಂಟ್‌ನಲ್ಲಿ ಇಟ್ಟಿರುವ ಹಾಗೆ ಇರುತ್ತದೆ. ಕೆಲವು ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣಕ್ಕೆ ನಾವು ಮ್ಯಾಚಿಂಗ್ ಗ್ರಾಂಟ್ ಕೊಡದಿದ್ದರೆ ಅದರಲ್ಲಿ ಸಾಕಷ್ಟು ಹಣ ಲ್ಯಾಫ್ಸ್ ಆಗುತ್ತದೆ. ಈಗಾಗಲೇ ಮಲಪ್ರಭ ನೀರಾವರಿ ಬಗ್ಗೆ ಈ ರೀತಿ ಆಗಿರುವುದು ಪತ್ರಿಕೆಯಲ್ಲಿ ಕೂಡ ಬಂದಿದೆ, ತಾವು ನೋಡಿರಬಹುದು ಮತ್ತು ಅದರ ಬಗ್ಗೆ ತಾವು ಹೇಳಿದ್ದೀರಿ. ಸುಮಾರು 30 ಕೋಟಿ ರೂಪಾಯಿ ಬರತಕ್ಕಂಥದ್ದಕ್ಕೆ ಸರ್ಕಾರದ ವತಿಯಿಂದ ಮ್ಯಾಚಿಂಗ್ ಕಾಂಟ್ರಿಬ್ಯೂಷನ್ ಖರ್ಚುಮಾಡದೆ, ಕೇಂದ್ರಸರ್ಕಾರಕ್ಕೆ ಎಕ್ಸ್‌ಪೆಂಡಿಚರ್ ಕೊಡದೆ ಇದ್ದ ಕಾರಣ ಇಲ್ಲಿ ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಆದರೆ ಉಳಿದ 15 ಕೋಟಿ ರೂಪಾಯಿಗಳನ್ನು ಇನ್ನು ಬಿಡುಗಡೆ ಮಾಡಲಿಲ್ಲ. ಹಿಂದಿನ ವರ್ಷಕ್ಕೆ ಹಾಕಿ ಅದನ್ನು ಇಷ್ಟು ಮಾಡುತ್ತಾರೋ ಅಥವಾ ಮಾಡದೇ ಇರುತ್ತಾರೋ? ಅದು ಲ್ಯಾಫ್ಸ್ ಆಯಿತು. ಇದು ಹೊಸ ವರ್ಷ, ಹಿಂದಿನದು ಮಾರ್ಚ್‌ಕ್ಕೆ ಹೋಯಿತು ಎಂದು ಹೇಳಿ ಪುನಃ ಈ ವರ್ಷ ಅಂದರೆ 1998-99ಕ್ಕೆ ನೋಡುತ್ತೇವೆಂದು ಹೇಳುತ್ತಾರೋ ಗೊತ್ತಿಲ್ಲ. ಹೀಗೆ, ಇದು ಒಂದೇ ಅಲ್ಲ. ಇದೇರೀತಿ ಮಲೆನಾಡು ಅಭಿವೃದ್ಧಿ ಮಂಡಲಿಯಾಗಿದೆ, ಇದೇ ರೀತಿ ಬಯಲು ಸೀಮೆ ಅಭಿವೃದ್ಧಿ ಮಂಡಲಿ ಆಗಿದೆ. ಎಲ್ಲೆಲ್ಲಿ ಆ ಹಣವನ್ನು ನಿಗದಿ ಪಡಿಸಿದ್ದರೋ ಆ ಹಣವನ್ನು ಖರ್ಚು ಮಾಡಿಲ್ಲ. ಮತ್ತು ಈ ಇನ್‌ಸ್ಟ್ರಕ್ಷನ್ ಕೊಡತಕ್ಕಂಥ ಅವಶ್ಯಕತೆ ಏಕೆ ಬಂತೋ ನನಗೆ ಗೊತ್ತಾಗುತ್ತಿಲ್ಲ. To avoid drawing of funds on AC bills from the Treasury on the last date of the year, to avoid lapse of grants against the provisions of KFC, ಅಂದರೆ ಗ್ರ್ಯಾಂಟ್ ಲ್ಯಾಫ್ಸ್ ಆಗುವ ಪ್ರಶ್ನೆಯೇ ಇಲ್ಲ. ನೀವು ಹಣವನ್ನು ರಿಲೀಸ್ ಮಾಡುತ್ತಿಲ್ಲವೆಂದು ಅಂದಾಗ ಲ್ಯಾಫ್ಸ್ ಆಗುವ ಪ್ರಶ್ನೆ ಎಲ್ಲಿಂದ ಬರುತ್ತದೆ? ಇಂತಹ ಒಂದು ಮಲೆನಾಡು ಅಭಿವೃದ್ಧಿ ಮಂಡಲಿಯಾಗಲಿ, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಆಗಲೀ ನಿಮಗೆ ಲ್ಯಾಪ್ಸ್ ಆಗುವ ಪ್ರಶ್ನೆ ಇಲ್ಲ. ನೇರವಾಗಿ ಅದು ಅವರ ಅಕೌಂಟ್‌ನಲ್ಲಿ ಜಮಾ ಆಗುತ್ತದೆ. ಅವರು ಯಾವಾಗ ಬೇಕಾದರೂ ಹಣವನ್ನು ರಿಲೀಸ್ ಮಾಡಿಕೊಳ್ಳಬಹುದು. ಆ ಕೆಲಸಕ್ಕೆ ಆ ಹಣವನ್ನು ಕೊಡಬಹುದು. ಇಷ್ಟೊಂದು ಇದ್ದರೂ ಕೂಡ, ಏಕೆ ಇವತ್ತು ನಿಮ್ಮ ಖಜಾನೆಯಲ್ಲಿ ಹಣ ತುಂಬಿ ಎಂದು ಹೇಳುತ್ತೀರಿ ಇದು ಎಲ್ಲಾ ಇವರಿಗೆ ಗೊತ್ತಿಲ್ಲ. ಸಾಕಷ್ಟು ಹಣವನ್ನು ನಾವು ಸಂಗ್ರಹಣೆ ಮಾಡಿದ್ದೇವೆ. ಅಭಿವೃದ್ಧಿ ಮಾಡುವ ಕೆಲಸ ಬಹುಶಃ ಇವರಿಗೆ ಅದು ಕಾಣುತ್ತಿಲ್ಲ ಎಂದು ಹೇಳಿದರು. ಅವರು ಯಾವಾಗಲೂ ಹೇಳುತ್ತಿರುತ್ತಾರೆ. ನಿಮ್ಮ ಪಕ್ಷ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳದೆ ಇದ್ದ ಕಾರಣ ಇವತ್ತು ಸೋಲಿಗೆ ಕಾರಣವಾಯಿತು ಎನ್ನುವ ಮಾತು ಹೇಳಿದಾಗ ಜನತಾದಳ ಅಂದರೆ ನಿಮಗೆ ಏನು ಗೊತ್ತು? ಅದು ದೇವರು ಇದ್ದ ಹಾಗೆ, ದೇವರು ಏನು ಕಣ್ಣಿಗೆ ಕಾಣುತ್ತದಯೋ ಒಂದು

ಹೇಳುತ್ತಾರೆ. ಹಾಗೆಯೇ ಅಭಿವೃದ್ಧಿ ಕೆಲಸಗಳೂ ಕೂಡ ಯಾರಿಗೂ ಕಾಣುತ್ತಾ ಇಲ್ಲ. ನೀವು ದೇವರನ್ನು ಜನತಾದಳಕ್ಕೆ ಹೋಲಿಸಿಕೊಂಡು ಆ ಅಭಿವೃದ್ಧಿ ಕೆಲಸವನ್ನು ನೋಡಿದಾಗ ಆ ಹಣವನ್ನು ಬಿಡುಗಡೆ ಮಾಡಿದ್ದು ನೋಡಿದಾಗ ಅದು ಎಲ್ಲಿದೆ ಎಂದು ಹುಡುಕಬೇಕಾಗುತ್ತದೆ. ಅದನ್ನು ನಿಮ್ಮ ಜೊತೆಯಲ್ಲಿ ಹುಡುಕಬೇಕಾಗುತ್ತದೋ ಅಥವಾ ಮತ್ತಾರ ಜೊತೆಯಲ್ಲಿ ಹುಡುಕಬೇಕಾಗುತ್ತದೋ ಅದು ನನಗೆ ಗೊತ್ತಿಲ್ಲ. ಕನಿಷ್ಟ ಪಕ್ಷ ನಾಗೇಗೌಡರು ಹೇಳಿದ್ದಾದರೂ ಒಪ್ಪುತ್ತೀರೋ ಇಲ್ಲವೋ ನನಗೆ ಗೊತ್ತಿಲ್ಲ. ಕಾರ್ಯದಲ್ಲಿ ಏನಾದರೂ ಕೊರತೆ ಉಂಟಾಯಿತಾ ಅಥವಾ ತಾವು ಆಯವ್ಯಯವನ್ನು ಮಂಡಿಸುವಾಗ ಖೋತಾ ಆಯವ್ಯಯವನ್ನು ಏನಾದರೂ ತೋರಿಸಿದ್ದೀರಾ? ಏಕೆಂದರೆ, ಈ ವರ್ಷ 196 ಕೋಟಿ ಇದ್ದರೆ ಹೋದ ವರ್ಷ 94 ಕೋಟಿ ರೂ.ಗಳನ್ನು ತಾವು ತೋರಿಸಿದ್ದೀರಿ. ಆದರೆ ನಿಜವಾಗಿ ನೋಡಿದಾಗ, ನಾನು ಇದನ್ನು ಹೇಳಬೇಕಾಗಿಲ್ಲ. ಏಕೆಂದರೆ ಮಾನ್ಯ ನಾಗೇಗೌಡರು ಇಲ್ಲಿ ಕಾಣುತ್ತಿಲ್ಲ. ಅವರು ಮುಂದೆ ಇಲ್ಲಿ ಕುಳಿತುಕೊಳ್ಳಲಿ, ಏಕೆಂದರೆ ಅವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಅದು ಏನೆಂದರೆ, "For the third successive year, the State Government has failed to spend the targetted fund for the World Bank Aided Upper Krishna Project. The Government planned to spend Rs. 1,249 crores in 1997-98 but the actual spending was only Rs. 771 crores." ಯಾರು ಇಲ್ಲಿ ಪದೇ ಪದೇ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆಂದು ಬಡಿದುಕೊಳ್ಳುತ್ತಿದ್ದರೋ ಅವರೇ ಇದನ್ನು ಹೇಳಿದ್ದಾರೆ. ನಾವು ಈ ಮಾತನ್ನು ಹೇಳಿದಾಗ ಖಜಾನೆಯಲ್ಲಿ ದುಡ್ಡಿಲ್ಲ, ಆದ್ದರಿಂದ ಇದನ್ನು ಪಾವತಿ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದಿರಿ. 500 ಕೋಟಿ ರೂ.ಗಳನ್ನು ಬಿಡುಗಡೆ ಮಾಡತಕ್ಕಂಥದ್ದು ಮಾಡಿಲ್ಲ ಎಂದು ಹೇಳಿದರೆ ನೀವು ಇದನ್ನು ಹಾಸ್ಯದಿಂದ ನಿಮ್ಮ ಖಜಾನೆ ಖಾಲಿಯಾಗಿದೆ, ಕಾಂಗ್ರೆಸ್ ಪಕ್ಷದ ಖಜಾನೆ ಖಾಲಿಯಾಗಿದೆ ಎಂದು ವ್ಯಂಗ್ಯವಾಗಿ ಮಾತನಾಡುತ್ತೀರಿ. ಇವತ್ತು ನಾನು ಕೇಳಬೇಕಾಗುತ್ತದೆ ಈ ಮಾತನ್ನು ಯಾರು ಸ್ವಾಮಿ ಹೇಳಿದ್ದು? ಇವತ್ತು ನೀವು ಒಪ್ಪಿಗೊಂಡಮೇಲೆ ಖರ್ಚು ಮಾಡುವುದಕ್ಕೆ ಶಕ್ತಿ ಇಲ್ಲವೆಂದಾಗ, 1249 ಕೋಟಿ ರೂ. ಬಜೆಟೆಡ್ ಅಮೌಂಟ್. ಅನೇಕ ಸಾರಿ ಏನಾಗುತ್ತದೆ ಎಂದರೆ, 100 ಕೋಟಿ ರೂ. ಪ್ರಾವಿಷನ್ ಇದ್ದರೆ, 120 ಕೋಟಿ ರೂ.ಗಳಷ್ಟು ಕೆಲಸ ಮಾಡಿರುತ್ತಾರೆ. 20 ಕೋಟಿ ರೂ.ಗಳ ಹೆಚ್ಚಿನ ಬಿಲ್ ಪೆಂಡಿಂಗ್ ಇರುತ್ತದೆ. ಇದರ ಬಗ್ಗೆ ನಾನು ಕೇಳುತ್ತಿಲ್ಲ. ಇದು ಅನೇಕ ಇಲಾಖೆಗಳಲ್ಲಿ ನಡೆಯುತ್ತಿದೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) ; ಹಣಕಾಸಿನ ಮಂತ್ರಿಗಳು ಅದರ ಬಗ್ಗೆ ಉತ್ತರವನ್ನು ಕೊಡುತ್ತಾರೆ. ನಾನು ದೇವರ ಬಗ್ಗೆ ಹೇಳಿದ್ದು ಇನ್ನೊಂದು ಅರ್ಥದಲ್ಲಿ. ಜನತಾದಳದ ಬಗ್ಗೆ ಅಲ್ಲ. ದೇವರನ್ನು ಕಾಣುವ ಇಂದ್ರಿಯ ನಿನಗೆ ಇಲ್ಲದಿದ್ದರೆ, ಇಂದ್ರಿಯ ಇಲ್ಲವೆಂದು ಒಪ್ಪಿಕೋ ದೇವರು ಇಲ್ಲವೆಂದು ವಾದಿಸಬೇಡ ಎಂದು ಹೇಳಿದ್ದೆ. ನಾನು ವ್ಯಂಗ್ಯ ಎನ್ನುವುದಕ್ಕಿಂತ, ಕೆಲವು ಸಲ ಅದರಲ್ಲಿ ಬಹಳ ಅರ್ಥ ಇರುತ್ತದೆ. ಮಾನ್ಯ ವೀರಪ್ಪ ಮೊಯ್ಲಿಯವರು ಸಾಹಿತಿಗಳು. ವ್ಯಂಗ್ಯ ಎಂದರೆ ಎಲ್ಲವೂ ಹಗುರವಾಗಿ ಎಂದು ಅಲ್ಲ. Sarcasm is one of the best way of criticism, and *sarcasm* is not everybody's game,.. ಮಾನ್ಯ ಖರ್ಗೆಯವರು ನಮ್ಮ ಖಜಾನೆಯಲ್ಲಿ ದುಡ್ಡು ಇಲ್ಲವೆಂದು

ಯಾವಾಗ ಬಂದು ನೋಡಿದರು? ನಾವು ಅವರಿಗೆ ಬೀಗವನ್ನು ಕೊಟ್ಟಿಲ್ಲ, ಅವರನ್ನು ನಮ್ಮ ಹತ್ತಿರ ಎಂದು ಸೇರಿಸಿಲ್ಲ, ನಾವು ಅವರನ್ನು ನೋಡುವುದಕ್ಕೂ ಬಿಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಅವರ ಕಾಲದಲ್ಲಿ ಅಭ್ಯಾಸ ಹಾಗಿತ್ತು ಅದಕ್ಕಾಗಿ ಅವರು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದು ಯಾವಾಗ ಗೊತ್ತಾಗಿದ್ದು ಎಂದರೆ ಖಜಾನೆ ಬೀಗ ಹಾಕುತ್ತಾರಲ್ಲಾ ಅವರೇ ಬಂದು ಹೇಳಿದವರು. ಅಲ್ಲಿ ಖಜಾನೆ ಖಾಲಿಯಾಗಿದೆ ಎಂದು.

ಶ್ರೀ ಜೆ.ಹೆಚ್. ಪಟೇಲ್ : ಅವರು ನಮ್ಮ ಖಜಾನೆಯನ್ನು ನೋಡಿಲ್ಲ. ನಾನು ಹೇಳುವುದು ಅವರ ಖಜಾನೆ ಖಾಲಿ ಇರಬಹುದು. ಅಥವಾ ಅವರ ಪಕ್ಷದ ಖಜಾನೆ ಖಾಲಿ ಇರಬೇಕು. ನಾನು ಹೇಳಿದ್ದು ಏಕೆಂದರೆ, ಮಾನ್ಯ ಉಪಾಧ್ಯಕ್ಷರೆ ಇವತ್ತು ದೇಶದಲ್ಲಿ ಪ್ರಾಮಾಣಿಕರ ಖಜಾನೆ ಖಾಲಿಯಾಗಿದೆ, ಹಾಗೆ ಅವರದು ಇರಬಹುದೆಂದು ನಾನು ಹೇಳಿದ್ದು. ಉಳಿದದ್ದು ಬೇರೆ ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇತ್ತೀಚಿಗೆ ಏನಾಗಿದೆ ಎಂದರೆ ವಾನಪ್ರಸ್ತಾಶ್ರಮದಿಂದ ಸನ್ಯಾಸಾಶ್ರಮಕ್ಕೆ ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಖರ್ಗೆಯವರೆ, ಯಾರೇ ಬಂದರೂ ಅವರು ಸನ್ಯಾಸಾಶ್ರಮಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ನೀವು ತಪ್ಪು ತಿಳಿದುಕೊಂಡಿದ್ದೀರಿ. ನೀವು ಹೀಗೆ ಆದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗ್ರಹಸ್ತಾಶ್ರಮವಾದ ನಂತರ ವಾನಪ್ರಸ್ತಾಶ್ರಮವಾದ ಮೇಲೆ ಸನ್ಯಾಸಾಶ್ರಮ.

ಶ್ರೀ ಎಸ್. ಸುರೇಶ್ ಕುಮಾರ್ : ತಮಗೆ ಸನ್ಯಾಸಾಶ್ರಮದ ಮೇಲೆ ಅಷ್ಟೊಂದು ಕೋಪ ಏಕೆ ಇದೆ. ಅದರ ಜೊತೆ ತಾವು ಕಂಪೇರ್ ಮಾಡುತ್ತಿದ್ದೀರಲ್ಲಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇತ್ತೀಚಿಗೆ ಏನಾಗಿದೆ ಎಂದರೆ, ನಮ್ಮ ಮುಖ್ಯಮಂತ್ರಿಗಳು ಶಬರಿಮಲೆ, ಆಮೇಲೆ ತಿರುಪತಿಗೆ ಹೋಗಿ ಬಂದಿದ್ದಾರೆ ದೇವರಿಗೆ ಅವರ ಜೀವನದಲ್ಲಿ ಒಟ್ಟು ಅವರ ಆಯುಷ್ಯದ 67-68 ವರ್ಷ ಎಂದೂ ಹೋಗಿರಲಿಲ್ಲ. ಇದು ಈ ಒಂದು ವರ್ಷದಲ್ಲಿ ಪ್ರಾರಂಭವಾಗಿದೆ. ಅದಕ್ಕೆ ಈಗ ಅವರ ಎಲ್ಲಾ ಇಂದ್ರಿಯಗಳು ಕೆಲಸ ಮಾಡುತ್ತಿವೆ ಎಂದು ನನಗೆ ಸಂಶಯ ಹತ್ತಿದೆ. ನನಗೆ ಅವರು ಏನು ಹೇಳಿದರು, ನಮ್ಮ ಯಾವ ಇಂದ್ರಿಯ ಕೆಲಸವನ್ನೂ ಮಾಡುತ್ತಿಲ್ಲವೆನ್ನುವ ಮಾತನ್ನು ಹೇಳಿದರು. ಬಹುಶಃ ಈಗ ಅವರ ಎಲ್ಲಾ ಇಂದ್ರಿಯಗಳೂ ಕೆಲಸ ಮಾಡುತ್ತಿರಬಹುದು. ಅದಕ್ಕಾಗಿ ಒಂದು ಹೊಸ ಜ್ಞಾನ ಹುಟ್ಟಿ ಅವರಿಗೆ ಗೊತ್ತಾಗಿ ಇವತ್ತು ಎಲ್ಲಾ ದೇವರುಗಳಿಗ ಸುತ್ತುತ್ತಿದ್ದಾರೆ. ಏನು ಖರ್ಚ ಉಳಿಯಲೆಂದು ಸುತ್ತುತ್ತಿದ್ದಾರೋ ಅಥವಾ ಹೊಸ ಜ್ಞಾನ ಪಡೆದುಕೊಳ್ಳಬೇಕು ಅಥವಾ ಹೊಸ ಅನುಭವ ಪಡೆದುಕೊಳ್ಳಬೇಕೆನ್ನುವ ದೃಷ್ಟಿಯಿಂದ ತಿರುಗುತ್ತಿದ್ದಾರೋ ನನಗೆ ಗೊತ್ತಿಲ್ಲ. ಇನ್ನು ಸಂಖ್ಯೆ ಬಹಳ ಕಡಿಮೆ ಇದೆ. ಇನ್ನು ಕೆಲವು ಜನರನ್ನು ಶಬರಿಮಲೆಯಲ್ಲಿ ಬಿಟ್ಟು ಬಂದಿದ್ದಾರೆ. ಅದಕ್ಕಾಗಿ ಇವತ್ತು ಬಹಳಷ್ಟು ಅವರ ಹಾಜರಾತಿ ಕಡಿಮೆ ಇದೆ. ಅನಂತನಾಗ್‌ರವರು ಬರಲಿಲ್ಲವೆಂದು ಕಾಣುತ್ತದೆ. ಬಂದಿದ್ದಾರಾ, ಬಂದಿಲ್ಲ, ಈಗ ಎದ್ದು ಹೋದರಾ....

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಉತ್ಪ್ರೇಕ್ಷೆಗೆ ನಾನು ಹೇಳುತ್ತಿಲ್ಲ. ಶಬರಿಮಲೆಗೆ ಹೋಗಿರಲಿಲ್ಲವೆಂದರೆ ಹೋಗಿ ನೋಡಬೇಕು. ಮಾನ್ಯ ಉಪಾಧ್ಯಕ್ಷರೆ, ತಿರುಪತಿ ಅದು ಶ್ರೀಮಂತರ ದೇವರು. ಎಲ್ಲಾ ಹಣವನ್ನು ಕಾಣಿಕೆ ಹಾಕಿ ಹರಕೆ ಕೊಡುವುದಕ್ಕೆ ಹೋಗುತ್ತಾರೆ. ಅಲ್ಲಿ ಒಂದೆರಡು ಸಲ ನೋಡಿ, ಆ ಹಣದ ವಿಜೃಂಭಣೆ ನೋಡಿ, ಬಹಳ ದೊಡ್ಡ ದೇವರು ಎಂದು ಹೇಳಿ ಆಮೇಲೆ ಶಬರಿಮಲೆಗೆ ಹೋಗುವಂತೆ ಒಬ್ಬ ಕಮ್ಯುನಿಶ್ಟ್ ಮುಖಂಡರು ಹೋಗಿ ನೋಡಬೇಕು ಎಂದು ಹೇಳಿದರು; ಹೋಗಿ ನೋಡಿದೆ. ಮೊಯ್ಲಿಯವರು ನೋಡಿರಲಿಕ್ಕಿಲ್ಲ. ಅಷ್ಟೊಂದು ಕತ್ತಲ ಕಾಡಿನಲ್ಲಿ 10-6 ಸಾವಿರ ಜನ, ದರ್ಶನಕ್ಕೆ ಬರುವವರು 20 ಲಕ್ಷ ಜನರು ಅಲ್ಲಿ ಇದ್ದಾರೆ. ಅಲ್ಲಿ ಬೆಳಕು ಇಲ್ಲ, ಅಲ್ಲಿ ಒಂದು ಪಂಪಾ ನದಿ ಹರಿಯುತ್ತದೆ. ಅವರು ಅಲ್ಲಿ ಸ್ವಲ್ಪ ಅಕ್ಕಿಯನ್ನು ತೆಗೆದುಕೊಂಡು ಬೇಯಿಸಿಕೊಳ್ಳುತ್ತಾರೆ. people in distress, very poor people.... ನಾನು ಮೊನ್ನೆ ರಾತ್ರಿ ಆ ಕಾಡಿನಿಂದ ಕೆಳಗೆ ಬರುವಾಗ ಒಂದೂವರೆ ಲಕ್ಷ ಜನರು ಕಾಡಿನಲ್ಲಿ ಮಲಗಿದ್ದರು. ಅದು ಏನು ವಿಶ್ವಾಸವೋ, ಅವರಿಗೆ ಏನು ರಕ್ಷಣೆ ಇದೆ ನನಗಂತೂ ಗೊತ್ತಿಲ್ಲ. ಆ ರಹಸ್ಯ ನನಗೆ ಅರ್ಥವಾಗಲಿಲ್ಲ. ಬಡವರು, ಕಷ್ಟದಲ್ಲಿರುವವರು ಆ ದೇವರ ಹೆಸರು ಹೇಳಿಕೊಂಡು ಅಲ್ಲಿಯೇ ಇರುತ್ತಾರೆ. ಅವರಿಗೆ ಯಾವ ತರಹ ರಕ್ಷಣೆ ಇಲ್ಲ. ಆಗ ಅದನ್ನೆಲ್ಲಾ ನೋಡಿದಾಗ, ಇಂತಹ ವೈಜ್ಞಾನಿಕ ಮನೋಬುದ್ಧಿ ಇದ್ದರೂ ಅದರ ರಹಸ್ಯ ಏನು? ಇನ್ನು ಉಳಿದದ್ದು ನನಗೆ ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಏನು ರಹಸ್ಯ ಇದೆ ಎಂದು ನಮಗೆ ಬೇಕಾಗಿಲ್ಲ. ಅವರಿಗೆ ಕಂಡಿರಬಹುದು, ತಮಗೆ ಅಲ್ಲಿ ಏನು ಕಂಡಿರುತ್ತದೆ?

ಶ್ರೀ ವಾಟಾಳ್ ನಾಗರಾಜ್ : ತಾವು ಅಲ್ಲಿಗೆ ಹೋಗುವುದಕ್ಕೆ ಪ್ರಾರಂಭ ಮಾಡಿದ್ದೀರಲ್ಲಾ ನಿಮ್ಮ ಅನುಭವ ಏನು? ಒಂದು ಹೊಸ ಚಿಂತನೆ, ಬೆಳಕು ಚೆಲ್ಲಿದ್ದೀರಾ? ತಾವು ದೇವರಿಗೆ ಹೋಗುವುದು ಬಹಳ ಸಂತೋಷ. ನಾವು ಹೋಗಬಾರದೆಂದು ಅಡ್ಡಿಪಡಿಸುವುದಿಲ್ಲ. ಅದು ಅವರವರ ಇಚ್ಛೆ. ನೀವು ಇದುವರೆಗೆ ನಿಮ್ಮ ಸಮಾಜವಾದದ ಸಿದ್ಧಾಂತದಲ್ಲಿ ಅನೇಕ ಭಾರಿ ಇಂತಹ ವಿಚಾರಗಳನ್ನು ಒಪ್ಪುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ತಾವು ಕುಂಕುಮ ಹಚ್ಚಿ ಕೊಳ್ಳುವುದಕಕ್ಕೆ ಪ್ರಾರಂಭ ಮಾಡಿದ್ದೀರಿ. ದೇವರಿಗೆ ಹೋಗುವುದಕ್ಕೆ, ಪೂಜೆ ಪುನಸ್ಕಾರ ಮಾಡುವುದಕ್ಕೆ ಪ್ರಾರಂಭ ಮಾಡಿದ್ದೀರಿ, ಅದರಿಂದ ನನ್ನ ಅಭ್ಯಂತರ ಏನೂ ಇಲ್ಲ. ಅದರಿಂದ ತಮಗೆ ಏನು ಪ್ರೇರಣೆಯಾಗಿದೆ ತಾವು ಈ ಸಭೆಯ ಮುಂದೆ ಹೇಳಿದರೆ ನಮಗೂ ಸ್ವಲ್ಪ ಪ್ರೇರಣೆ ಬರಲಿ ಎಂದು ಕೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಸಬ್ಜೆಕ್ಟ್ ಡೈವರ್ಟ್ ಆಗಬಾರದೆಂದು ನಾನು ಸುಮ್ಮನಿದ್ದೆ. ದೇವರ ಸುದ್ಧಿ ಮಾತನಾಡುವುದಕ್ಕೆ ಹೋದರೆ ಅವರ ಮಾತನಾಡುವ ವಿಷಯ ಬಹಳ ಹಿಂದಕ್ಕೆ ಹೋಗುತ್ತದೆ. ಮಾನ್ಯ ವಾಟಾಳರೇ, ಈ ಮೂಢಭಕ್ತಿ, ದೇವರಲ್ಲಿ ವಿಶ್ವಾಸ, ಜೀವನದಲ್ಲಿ ಮನುಷ್ಯನಿಗೆ ಬರತಕ್ಕಂಥ ನಂಬಿಕೆಗಳು ಹೇಗೆ ಎನ್ನುವುದರ ಬಗ್ಗೆ ಒಂದು ಪ್ರೈವೇಟ್ ಆಗಿ ಒಂದು ವಿಷಯವನ್ನು ತಂದರೆ ನಾನು ತಮಗೆ ಹೇಳಬಲ್ಲೆ. ಸಮಾಜವಾದಿಗಳು ಎಂದರೆ ಅವರು ನಾಸ್ತಿಕರಲ್ಲ. ನಾಸ್ತಿಕರಿರಬಹುದೆಂದು ಬಹಳ ಜನ ತಪ್ಪು ತಿಳಿದುಕೊಂಡಿದ್ದಾರೆ.

1.30 ಪಿ.ಎಂ

ಸಮಾಜವಾದಿಗಳು ಅಂದರೆ ಸಮಾಜದ ಒಂದು ವ್ಯವಸ್ಥೆಯನ್ನು ಹೇಗೆ ನಡೆಸಿಕೊಂಡು ಹೋಗಬೇಕೆಂದು ಅವರಿಗೊಂದು ಗುರಿ ಇರುತ್ತದೆ. ವಿಜ್ಞಾನಿಗಳೆಲ್ಲಾ ನಾಸ್ತಿಕರಲ್ಲ. ಐನ್‌ಸ್ಟಿನ್ ಅಂಥವನು ನಾಸ್ತಿಕನಲ್ಲ. ಅವನೂ ಅಸ್ತಿಕನೇ. ಆದುದರಿಂದ ಅಸ್ತಿಕತೆ ಮತ್ತು ನಾಸ್ತಿಕತೆ ಬಗ್ಗೆ 50 ವರ್ಷದ ಕೆಳಗೆ ಇದ್ದವರು ದೇವರಿಲ್ಲ ಅಂದರೆ ಅವರಿಗೆ ಹೃದಯ ಇದೆ, 50 ವರ್ಷದ ನಂತರ ದೇವರಿಲ್ಲ ಅಂದರೆ ಅವರಿಗೆ ಬುದ್ದಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ನೀವು ದೇವರಿದ್ದಾನೆ ಎಂಬ ತೀರ್ಮಾನಕ್ಕೆ ಬಂದಿದ್ದೀರಿ, ಸಂತೋಷ. ಆ ತೀರ್ಮಾನಕ್ಕೆ ಬಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. 50 ವರ್ಷದ ಹಿಂದೆ ದೇವರಿಲ್ಲ ಎಂದು ಹೇಳುತ್ತಿದ್ದರು. ಈಗ ದೇವರಿದ್ದಾನೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಮುಖ್ಯಮಂತ್ರಿಗಳು ದೇಶ ಸಂಚಾರ ಮಾಡಿದರು. ಶಬರಿಮಲೆಗೆ ಹೋದರು. ನಾನೂ ಹೋಗಿದ್ದೆ. ಅಲ್ಲಿ ಹೋಗಿ ನೋಡಿ ಬಂದಾಗ ಇದು ಏನು ಭಕ್ತಿ ರಹಸ್ಯ ಎಂದು ಅವರ ಹಾಗೆ ನನಗೂ ಯೋಚನೆ ಆಗಿತ್ತು. ವೇದಾಂತದಲ್ಲಿ ಒಂದು ಮಾತು ಇದೆ. ದೇವರ ಬಗ್ಗೆ, ದೇವರ ಹತ್ತಿರ ಹೋಗುವುದಕ್ಕೆ ದೇವರ ವಿಷಯವನ್ನು ತಿಳಿಯುವುದಕ್ಕೆ ಪ್ರಯತ್ನ ಮಾಡಿ ಯಾವ ಅನುಭೂತಿಯನ್ನು ಪಡೆದ ಸಂತರಾದರೂ ಕಡೆಗೆ ಮುಕ್ತಿಯ ಮಾತು ಏನೆಂದರೆ ನೇತಿ ಎಂದು. ನಾನು ಕಂಡದ್ದು ಅಷ್ಟೇ ಅಲ್ಲ. ಇದರ ಆಚೆಗೆ ಇನ್ನೊಂದು ಸತ್ಯ ಇದೆ. ಅದು ಸತ್ಯ. ನಾ + ಇತಿ = ನೇತಿ. ಮಾನ್ಯ ಜೆ.ಹೆಚ್.ಪಟೇಲರು ಸಧ್ಯಕ್ಕೆ ನೇತಿ ಎಂಬ ಸ್ಥಿತಿಗೆ ಬಂದಿದ್ದಾರೆ. ಇದು ಒಳ್ಳೆಯ ಲಕ್ಷಣ, ಒಳ್ಳೆಯ ಪಕ್ವತೆಯ ಲಕ್ಷಣ. ಇದು ಮುಂದೆ ಹೋಗಿ ಅವರು ತೂರ್ಯಾವಸ್ಥೆಗೆ ಮುಟ್ಟಿದರ ಆಶ್ಚರ್ಯಪಡಬೇಕಾದುದೇನೂ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಅವರು ಆ ಕ್ಷೇತ್ರದಿಂದಲೇ ಬರುತ್ತಾರೆ. ಎಲ್ಲವೂ ಕೂಡ ಲೊಳಲೊಟ್ಟೆ. ಶ್ರೀಪುರಂದರ ದಾಸರು ಅದನ್ನೇ ಹೇಳಿದರು. ಉತ್ತಮ ಪ್ರಭುತ್ವವೂ ಆ ಲೊಳಲೊಟ್ಟೆ ಎಂದು ಹೇಳುತ್ತಾರೆ. ಆದುದರಿಂದ ನೇತಿ ಎಂಬುದು ಏನಿದೆ ಅದೂ ಕೂಡ ಕೊನೆಗೆ ಲೊಳಲೊಟ್ಟೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ತಾವು ಅನುಸರಿಸುತ್ತಿಲ್ಲ. ಎಲ್ಲವೂ ಲೊಳಲೊಟ್ಟೆ ಎಂದು ಏನು ಹೇಳಿದ್ದಾರೆ ಶ್ರೀ ಪುರಂದರ ದಾಸರು ಅದನ್ನು ತಾವು ಅನುಸರಿಸುತ್ತಿಲ್ಲವಲ್ಲಾ.

ಶ್ರೀ ಎಂ. ಪಿ. ಪ್ರಕಾಶ್ : ಸನ್ಯಾಸಾಶ್ರಮದ ಉತ್ತುಂಗ ಸ್ಥಿತಿ ಲೊಳಲೊಟ್ಟೆ ಆಗುವುದು. ಆದುದರಿಂದ ಆ ಪ್ರಯತ್ನವೂ ಕೂಡ ಲೊಳಲೊಟ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರ ಅಡ್ವೈಸ್ ಬೇಗನೆ ಹೋಗಲಿ, ಸನ್ಯಾಸಿ ಆಗಲಿ ಎಂದು. ಪರವಾಗಿಲ್ಲ, ನಿಮ್ಮಲ್ಲಿ ಅಂಥ ಹಿತೈಷಿಗಳು ಇದ್ದಾರೆ. ಆದರೆ ಈಗ ಪ್ರಶ್ನೆ ಅದಲ್ಲ. ನೀವು ಹೋಗುವುದಕ್ಕೆ ಅಥವಾ ನೋಡಿಕೊಂಡು ಬರುವುದಕ್ಕೆ ನಮ್ಮ ಆಕ್ಷೇಪಣೆ ಇಲ್ಲ. ನೀವು ಯಾವ ಸಂದರ್ಭದಲ್ಲಿ ಯಾವ ಉದ್ದೇಶದಿಂದ ಹೋಗಿದ್ದೀರೆಂದು ಗೊತ್ತು. ಏನಾಗುತ್ತದೆಂದರೆ, ನಿಮ್ಮ ಮುಖ್ಯ ಮಂತ್ರಿಗಳ ಬಾಯಿಂದ

ಯಾವುದೇ ಒಂದು ಮಾತು ಹೊರಗೆ ಬಿದ್ದರೆ, ಕೋಟ್ಯಾಂತರ ಜನರು ಈ ಮಾತಿನ ಕಡೆಗೆ ನೋಡುತ್ತಾರೆ. ಆದರಲ್ಲಿ ನಿಮ್ಮಂಥವರು ಯಾರು, ನಿಮ್ಮ ರಾಜಕೀಯ ಹಿನ್ನೆಲೆ ಏನಿದೆ ಅದನ್ನು ನೋಡಿ ಜನ ನಿಮ್ಮ ಮಾತನ್ನು ತೂಕ ಮಾಡುತ್ತಾರೆಯೇ ಹೊರತು ಸುಮ್ಮನೆ ಎಂಬುದು ಬೇರೆ. ಜನರು, ಶ್ರೀ ಜೆ. ಹೆಚ್. ಪಟೇಲ್ ಅಂಥವರೂ ಕೂಡ ಬದಲಾಗಿದ್ದಾರೆಯೇ? ನಾವು ಯಾರನ್ನು ರ್ಯಾಷನಲಿಸ್ಟ್ ಎಂದು ತಿಳಿದುಕೊಂಡಿದ್ದೇವೆ, ಯಾರು ಸೈಂಟಿಫಿಕ್ ತತ್ವದ ಮೇಲೆ ನಂಬಿಕೆ ಇಟ್ಟು ಇಲ್ಲಿಯವರೆಗೆ ಸಮಾಜದ ವಿಚಾರಗಳನ್ನು, ವಿಚಾರಧಾರೆಗಳನ್ನು ಜನರ ಮುಂದೆ ಇಡುತ್ತಿದ್ದರು, ಅಥವಾ ನಿಸರ್ಗದ ನಿಯಮಗಳು ಏನಿವೆ ಅದರ ವಿರುದ್ಧ ಹೋಗದೆ ಆ ನಿಸರ್ಗದ ನಿಯಮದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು ಅಂಥ ವ್ಯಕ್ತಿಗಳೂ ಕೂಡ ಇವತ್ತು ಯಾವುದು ಅಸ್ತಿತ್ವದಲ್ಲಿ ಇಲ್ಲ, ಅಂಥ ವಿಚಾರದಲ್ಲಿ ನಂಬಿಕೆ ಬಂದಿದೆ ಅಂದಾಗ ನಮ್ಮಂಥವರ ಪಾಡು ಏನು ಎಂದು ಲಕ್ಷಾಂತರ ಜನರು ಇದನ್ನು ಯೋಚನೆ ಮಾಡುತ್ತಾರೆ ಎಂಬುದನ್ನು ತಾವು ಮರೆಯಬಾರದು. ನಾನು ಸಹಜವಾಗಿ ಹೋಗಿದ್ದೆ. ಅವಕಾಶ ಸಿಕ್ಕಿತು 4 ಜನರು ಬಂದು ಕರೆದುಕೊಂಡು ಹೋದರು, ನಾನು ಹೋಗಿದ್ದೆ ಎಂಬುದು ಬೇರೆ. ಈಗ ಅದರ ಬಗ್ಗೆ ವ್ಯಾಖ್ಯಾನ ಮಾಡುವುದು ಬೇಡ. ಆದರೆ ನೀವು ಇಟ್ಟಂಥ ನಂಬಿಕೆ, ನಿಮ್ಮ ವಿಚಾರಧಾರೆ, ಅದರ ಮೇಲೆ ಜನರು ಹಿನ್ನಲೆಯನ್ನು ವಿಚಾರ ಮಾಡಿಕೊಂಡು ತುಲನೆ ಮಾಡುತ್ತಾರೆಯೇ ಹೊರತು ಕೇವಲ ಸಂದರ್ಭಾನುಸಾರ ಮಾತನಾಡುವುದಕ್ಕೆ ಲಕ್ಷ ಕೊಡುವುದಿಲ್ಲ. ಆಗ ಏನಾಗುತ್ತದೆ? ನಿಮ್ಮ ಯಾವುದೇ ಮಾತಿಗೆ ಬೆಲೆ ಬರುವುದಿಲ್ಲ ಎಲ್ಲಾ ಮಾತನ್ನು ಅಷ್ಟಕ್ಕೆ ತೆಗೆದುಕೊಳ್ಳುತ್ತಾರೆ. ಅವರು ಹೇಳುವುದು ಒಂದು, ನಡೆದುಕೊಳ್ಳುವುದು ಒಂದು, ಮಾತನಾಡುವುದು ಒಂದು ಎಂಬುದು ಬರುತ್ತದೆ. ಆದುದರಿಂದ ದಯವಿಟ್ಟು ಇನ್ನು ಮೇಲಾದರೂ ಕೂಡ ಇಂಥ ವಿಚಾರಗಳಲ್ಲಿ ಯಾವ ವಿಚಾರಕ್ಕೆ ತಾವು ಸಾಕಷ್ಟು ಶ್ರಮಪಟ್ಟಿದ್ದೀರಿ ಅಥವಾ ಆ ದಾರಿಯಲ್ಲಿ ನಡೆದುಕೊಂಡು ಬಂದಿದ್ದೀರಿ , ಆದರೆ ಕೊನೆಯ ಹಂತದಲ್ಲಿ ಏತಕ್ಕೆ ಆ ಕಡೆ ಈ ಕಡೆ ಮಾಡುತ್ತಿರೆಂದು ಗೊತ್ತಾಗುತ್ತಿಲ್ಲ. ನಿಮ್ಮ ಅಚಲ ಭಾವನೆ ಏನಿದೆ?

ಶ್ರೀ ಜೆ.ಹೆಚ್. ಪಟೇಲ್ : ದಯವಿಟ್ಟು ಕ್ಷಮಿಸಿ . ನನ್ನ ವಿಚಾರಗಳು ಬದಲಾಗಿಲ್ಲ. ಸಮಾಜವಾದಿ ಅಂದರೆ ನಾಸ್ತಿಕನಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನಾಸ್ತಿಕ ಎಂದು ಹೇಳಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಕೆಲವರು ನಾನು ನಾಸ್ತಿಕ ಎಂದು ತಿಳಿದುಕೊಂಡಿದ್ದಾರೆ. ಸಮಾಜವಾದಿಗಳು ನಾಸ್ತಿಕರು ಎಂಬ ಭ್ರಮೆ ಇದೆ. ಶ್ರೀ ಜಯಪ್ರಕಾಶ್ ಅವರು ನಾಸ್ತಿಕರಾಗಿರಲಿಲ್ಲ. ಡಾ: ಲೋಹಿಯಾ ಅವರು ನಾಸ್ತಿಕವಾಗಿದ್ದರು, ಬಟ್ರೆಂಡರೆಸಲ್ ಅವರು ಒಬ್ಬರೇ ಜಗತ್ತಿನ ಇತಿಹಾಸದಲ್ಲಿ ನಾಸ್ತಿಕರಾಗಿ ಉಳಿದದ್ದು. ಆದುದರಿಂದ ನಾನು ನಾಸ್ತಿಕನಾಗಿದ್ದೆ ಎಂಬ ತಪ್ಪು ಭಾವನೆ ಏಕೆ? ನಾನು ನಾಸ್ತಿಕನಾಗಿರಲಿಲ್ಲ. ಆದರೆ ಇದರ ಬಗ್ಗೆ ಕುತೂಹಲ. ಕುತೂಹಲ ಕೊನೆಯವರೆಗೆ ಇರಬೇಕು: ಮತ್ತು ಅದನ್ನು ಹುಡುಕುತ್ತಾ ಇರಬೇಕು. ಅದರ ಸಂಶೋಧನೆ ನಡೆಯುತ್ತಾ ಇರಬೇಕು. ಅವನನ್ನು ಕಂಡ ದಿವಸ ನೀನಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ವೇದಾಂತಗಳನ್ನು ಕೇಳಿಕೊಂಡು ಕೂರುವುದಕ್ಕೆ ಸಮಯ ಇಲ್ಲ. ಏಕೆಂದರೆ ಅವರು ಸಾರಿ ಹೇಳುತ್ತಾರೆ, ನಾನು ಡಾ: ಲೋಹಿಯ ಅವರ ಶಿಷ್ಯ ಎಂದು.

ಡಾ: ಲೋಹಿಯ ಅವರ ಶಿಷ್ಯ ಆದಮೇಲೆ ಅವರಲ್ಲಿರತಕ್ಕ ಕೆಲವು ಗುಣಗಳನ್ನು ವಿಚಾರಗಳನ್ನು ಒಪ್ಪಿಕೊಂಡಿದ್ದಾರೆಂದು ತಿಳಿದುಕೊಂಡಿದ್ದೆ. ಆದರೆ ಈಗ ವ್ಯತ್ಯಾಸ ಮಾಡಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಸಮಾಜವಾದದ ಸಿದ್ಧಾಂತದ ಬಗ್ಗೆ ಶ್ವೇತಪತ್ರ ಇಡುತ್ತಿದ್ದಾರೆ. ಈಗ ವಿಷಯಾಂತರವಾಗುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ವಿಚಾರಗಳಿಗೆ ಹೋಗದೆ ನಾನು ಇಷ್ಟು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಇವತ್ತು ಸರ್ಕಾರದವರು ಹಣಕಾಸಿನ ವಿಷಯದಲ್ಲಿ ಒಂದು ಶ್ವೇತಪತ್ರವನ್ನು ಪ್ರಕಟ ಮಾಡಬೇಕು. ನಾನು ಏನು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ, ಏನು ಅನೇಕ ಇಲಾಖೆಗಳಲ್ಲಿ ಬಿಲ್ಲುಗಳು ಪೆಂಡಿಂಗ್ ಇವೆ, ಅಭಿವದ್ಧಿ ಕೆಲಸ ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ನಲ್ಲಿ ನಿಂತುಹೋಗಿದೆ ಮತ್ತು ಬೇರೆ ಕಡೆ ಹಣ ಬಿಡುಗಡೆ ಆಗದೇ ಎಲ್ಲಾ ಕಂಟ್ರಾಕ್ಟರುಗಳು ಕೆಲಸವನ್ನು ನಿಲ್ಲಿಸಿದ್ದಾರೆ. ಆಮೇಲೆ ಟ್ರಜರಿಯಲ್ಲಿ, ನೀವು ಇಲ್ಲಿಂದ ಬಿಲ್ ಪಾಸ್ ಮಾಡಿದರೂ ಕೂಡ ಅವರಿಗೆ ಸೂಚನೆಗಳನ್ನು ಕೊಟ್ಟು ಎರಡು ಲಕ್ಷದ ಮೇಲೆ ಹಣ ಬಿಡುಗಡೆ ಮಾಡಬಾರದೆಂದು ಹೇಳಿದ್ದೀರಿ. ಅದರಿಂದಾಗಿ 5 ಲಕ್ಷ, 10 ಲಕ್ಷ ಎಷ್ಟೇ ಹಣ ಇರಲಿ ಅದು ಬಿಡುಗಡೆ ಆಗುತ್ತಿಲ್ಲ. ಅವರು ಏನು ಹೇಳಿದ್ದಾರೆ ತಮ್ಮ ಸೂಚನೆಯಲ್ಲಿ ಎಂಬುದನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ. ತಮ್ಮ ಹಣಕಾಸಿನ ಇಲಾಖೆಯಲ್ಲಿ ಹೋದಂಥ ಸುತ್ತೋಲೆ ಏನಿದೆ ಎಂದರೆ, "All the Secretaries of the Administrative Departments of the Government, Heads of Departments and Drawing Officers are requested to adhere to this Circular. This is necessary to avoid any type of deviation from the budgetary norms. In case the drawing officers present the bill to the Treasury without observing the instructions contained in this circular, the Treasury Officers are informed to return the bills with the observation quoting the provisions of Article 25 of Karnataka Financial Code." ಸುತ್ತೋಲೆ ಸಂ: ಎಫ್‌ಡಿ-2 ಪಿಸಿಸಿ : 97 ತಾರೀಖು 17-1-98. ಈಗಾಗಲೇ ನಾನು ಇದನ್ನು ಕೋಟ್ ಮಾಡದಿದ್ದೇನೆ. ಈ ಸುತ್ತೋಲೆ ಪ್ರಕಾರ ಇವತ್ತು ಟ್ರೆಜರಿಯಲ್ಲಿ ಹಣ ಬಿಡುಗಡೆ ಆಗುತ್ತಿಲ್ಲ, ಮತ್ತು ಇದರಿಂದ ಎಲ್ಲಾ ಜನರಿಗೆ ತೊಂದರೆಯಾಗುತ್ತಿದೆ. ಆದರೆ ಖಜಾನೆಯಲ್ಲಿ ದುಡ್ಡಿಲ್ಲವೆಂದು ತಿಳಿದುಕೊಂಡು ಇವತ್ತಿನ ದಿವಸ ಅವರು ಹಣ ಬಿಡುಗಡೆ ಮಾಡುತ್ತಿಲ್ಲ. ದಯಮಾಡಿ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆ ಕೊಡಬೇಕು ಮತ್ತು ಇದರ ಬಗ್ಗೆ ಒಂದು ಶ್ವೇತಪತ್ರವನ್ನು ಸದನದ ಮುಂದೆ ಇಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೆ, ಸಾಮಾನ್ಯವಾಗಿ ಇಲ್ಲಿಯ ಪದ್ಧತಿ ಪ್ರಕಾರ ಪ್ರಮುಖವಾದ ನಿಲುವಳಿ ಸೂಚನೆಯನ್ನು ತಂದಾಗ ಬೇರೆಯವರು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ. ನಾನೂ ಕೂಡ ಅದನ್ನು ಕಳುಹಿಸಿಕೊಟ್ಟಿದ್ದೆ, ತಾವು ತಡವಾಯಿತು ಅಂದಿರಿ. ದಯಮಾಡಿ ಮಾನ್ಯ ಮುಖ್ಯ-ಮಂತ್ರಿಗಳಾಗಲಿ, ಹಣಕಾಸಿನ ಸಚಿವರಾಗಲಿ,

ಮಾನ್ಯ ಪ್ರತಿಪಕ್ಷದ ನಾಯಕರಾದಂಥ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನಿಲುವಳಿ ಸೂಚನೆಯ ಮೂಲಕ ತಂದಿರುವುದನ್ನು ಹಗುರವಾಗಿ ತೆಗೆದುಕೊಳ್ಳಬೇಡಿ. ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಒಂದು ಶ್ವೇತ ಪತ್ರವನ್ನು ತಾವು ಸಭೆಯ ಮುಂದೆ ಇಟ್ಟರೆ ವಾಸ್ತವಿಕ ಸತ್ಯಾಂಶ ಏನು, ನಮಗೆ ಬಂದಿರುವ ಮಾಹಿತಿ ಎಷ್ಟರಮಟ್ಟಿಗೆ ಸರಿ ಇದೆ, ಜನರು ಮಾತನಾಡುವುದು ಎಷ್ಟು ಸರಿ ಇದೆ, ಯಾವುದಕ್ಕೆ ಆದ್ಯತೆ ಕೊಟ್ಟಿದ್ದೀರಿ, ಯಾವುದಕ್ಕೆ ಆದ್ಯತೆ ಕೊಟ್ಟಿಲ್ಲ ಎಂಬುದು ಗೊತ್ತಾಗುತ್ತದೆ. ಇಲಾಖೆಗಳಲ್ಲಿ ಆ ಬಜೆಟರಿ ಪ್ರಾವಿಷನ್ ಇದ್ದರೂ ಸಹ ಮಾರ್ಚ್ 31ರೊಳಗೆ ಕೆಲಸ ಮಾಡಿದ್ದರೂ ಸಹ ಬಿಲ್ ಪಾವತಿಯಾಗದೆ ಮುಂದಿನ ಪ್ರಗತಿಗೆ ಧಕ್ಕೆಯಾಗುತ್ತದೆ, ಅಭಿವೃದ್ಧಿಕಾರ್ಯಕ್ಕೆ ತೊಂದರೆಯಾಗುತ್ತದೆ ಎಂಬುದರ ಬಗ್ಗೆ ಚರ್ಚೆ ಮಾಡಿ ಸರಿಯಾದ ಸಲಹೆ ಕೊಡುವುದಕ್ಕೆ ಅಧಿಕಾರಿಗಳಿಗೆ ಸರಿಯಾದ ಮಾರ್ಗದರ್ಶನ ಮಾಡುವುದಕ್ಕೆ ಬಹುಶಃ ಈ ಕಾರ್ಯಕಲಾಪ ಸದನದಲ್ಲಿ ಚರ್ಚೆಯಾಗಿರುವುದು ಉಪಯುಕ್ತವಾಗಬಹುದೆಂದು ತಿಳಿದುಕೊಂಡಿದ್ದೇನೆ. ನಾನು ಒಂದೇ ಒಂದು ವಿಷಯವನ್ನು ನೇರವಾಗಿ ಹೇಳುತ್ತೇನೆ. ಹೋದವರ್ಷ ಇದೇ ಸಂದರ್ಭದಲ್ಲಿ ಇಲ್ಲಿ ಚರ್ಚೆ ಆಯಿತು. ಇಡೀ ಕರ್ನಾಟಕ ರಾಜ್ಯದಲ್ಲಿ ಆಸ್ಫಾಲ್ಟ್ ಸ್ಟಾಕ್ ಇಲ್ಲದೆ ರಸ್ತೆಗಳ ಕಾಮಗಾರಿ ಕೆಲಸ ನಿಂತು ಹೋಯಿತು. ಆಗ ಮುಂಚೆಯೇ ಅಡ್ವಾನ್ಸ್ ಕೊಟ್ಟು ನೀವು ಖರೀದಿ ಮಾಡುವುದಕ್ಕಾಗಲಿಲ್ಲ. ದುಡ್ಡು ಕೊಡದೆ ಆಸ್ಫಾಲ್ಟ್ ಕೊಡುತ್ತಿಲ್ಲ, ಹಳೆಯ ಬಾಕಿ ಪಾವತಿ ಮಾಡದೆ ಯಾರೂ ಮುಂದೆ ಬರುತ್ತಿಲ್ಲ. ಮುಂದೆ ಇದು ಆಗದಂತೆ ನೋಡಿಕೊಳ್ಳುತ್ತೇವೆಂದು ತಾವು ಹೇಳಿದ್ದು ರೆಕಾರ್ಡ್‌ನಲ್ಲಿದೆ. ಇನ್ನು ಒಂದು ತಿಂಗಳಿಗೆಲ್ಲಾ ಮಳೆಗಾಲ ಪ್ರಾರಂಭವಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಬಹುತೇಕ ಎಲ್ಲಾ ಕಡೆ ಆಸ್ಫಾಲ್ಟ್ ಮಾಡುವುದಕ್ಕೆ ಕಂಟ್ರಾಕ್ಟರುಗಳು ಕೆಲಸಗಾರರು ಸಿದ್ಧರಿದ್ದರೂ ಒಂದೆರಡು ಕಿಲೋಮೀಟರ್ ಕೆಲಸ ಪ್ರಾರಂಭವಾಗಿದ್ದರೂ ಸಹ ಆಸ್ಫಾಲ್ಟ್ ಇಲ್ಲದೆ ಇಡೀ ರಾಜ್ಯದಲ್ಲಿ ರಸ್ತೆಗಳ ಕೆಲಸ ನಿಂತುಹೋಗಿದೆ. ಇನ್ನು ಒಂದು ತಿಂಗಳಲ್ಲಿ ಮಳೆಗಾಲ ಪ್ರಾರಂಭವಾದರೆ ಮುಂದಿನಸಾರಿ ಮತ್ತೆ ಕನ್‌ಸಾಲಿಡೇಷನ್ ಮಾಡಿ, ಜೆಲ್ಲಿ ಸಂಗ್ರಹ ಮಾಡಿ ಪ್ರಾವಿಷನ್ ಮಾಡಿ ಮತ್ತೆ ಕೋಟಿಗಟ್ಟಲೆ ಹಣ ಖರ್ಚು ಮಾಡಬೇಕಾಗುತ್ತದೆ. ಪ್ರತಿ ಕಿಲೋಮೀಟರ್ 3-3 1/2 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ಒಂದು ದುಸ್ಥಿತಿ ಬರುತ್ತದೆ. ನಾನು ಎಲ್ಲಿಯವರೆಗೆ ಎಂದರೆ ಒಬ್ಬ 36 ಜನ ಬಿ.ಜೆ.ಪಿ. ಶಾಸಕರುಗಳ ಪ್ರಮುಖವಾಗಿ ಚೀಫ್ ಸೆಕ್ರೆಟರಿ, ಚೀಫ್ ಇಂಜನಿಯರ್ ಅವರಿಗೆ ಫೋನ್ ಮಾಡಿದ್ದೆ 'ಸ್ವಾಮಿ ಇದು ಏನು ಸ್ಥಿತಿ?' ಎಂದು ಅಲ್ಲಿ ಹೊಸದಾಗಿ ಯಾರೋ ಬಂದಿದ್ದಾರೆ. ಯಾರೋ 20-25 ಜನರನ್ನು ಕರೆದುಕೊಂಡು ಬಂದು ಮಾಡುತ್ತಾ ಇರುತ್ತಾನೆ. ಕೆಲಸ ಆಗದೆ ಅವರು ವಾಪಸ್ಸು ಹೋದರೆ, ಅವರನ್ನು ಹುಡುಕಿಕೊಂಡು ಬರುವುದಕ್ಕೆ 15-20 ದಿವಸ, ಒಂದು ತಿಂಗಳು ಬೇಕಾಗುತ್ತದೆ. ಈ ಕಾರಣದಿಂದ ಕೆಲಸಗಾರರು ಸಿಗುವುದಿಲ್ಲ. ಶಿಕಾರಿಪುರದಲ್ಲಿ ಕೆಲಸ ನಡೆಯುತ್ತಿತ್ತು. ಎಲ್ಲಿಂದಲಾದರೂ ನಾಲ್ಕೈದು ಲೋಡ್ ಕಳುಹಿಸಿಕೊಡಿ ಎಂದು ನಾನು ಪಿ.ಡಬ್ಲ್ಯೂ.ಡಿ. ಸೆಕ್ರೆಟರಿ ಅವರಿಗೆ, ಚೀಫ್ ಇಂಜಿನಿಯರ್ ಅವರಿಗೆ ಫೋನ್ ಮಾಡಿದರೂ ಪ್ರಯೋಜನವಾಗಲಿಲ್ಲ. ಏಳೆಂಟು ದಿವಸ ರಜೆ ಬಂತು, ಒಂದು ಲೋಡ್ ಕೂಡ ಬರಲಿಲ್ಲ. ಇದರಿಂದಾಗಿ ಕೆಲಸ ನಿಂತು ಹೋಯಿತು. ನನ್ನ ತಾಲ್ಲೂಕಿನಲ್ಲಿ ನನ್ನ ಸ್ವಂತ ಅನುಭವವನ್ನು ನಾನು ಹೇಳುತ್ತಾ ಇರುವುದು. ನಾನು ಅವತ್ತು ಅವರ ಹತ್ತಿರ ಮಾತನಾಡಿದಮೇಲೆ

ನನ್ನಲ್ಲಿ ಮಾಹಿತಿ ಇರುವಂಥಾದ್ದು ಸುಮಾರು 76 ಕೋಟಿ ರೂಪಾಯಿ 31ನೇ ಮಾರ್ಚ್‌ಗೆ ಬಜೆಟ್ ಪ್ರಾವಿಷನ್ ಇರುವಂಥಾದ್ದು, ಪಿ.ಡಬ್ಲ್ಯೂ.ಡಿ.ಗೆ ಬಿಲ್ ಪಾವತಿ ಮಾಡಿಲ್ಲ. ನಾನು ಮಾನ್ಯ ಸಿದ್ಧರಾಮಯ್ಯ ಅವರನ್ನು, ಹಣಕಾಸು ಸಚಿವರನ್ನು ಕೇಳುತ್ತೇನೆ. ಸಿಟ್ಟು ಏಕೆ ಮಾಡುತ್ತೀರಿ?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ) : ಸಿಟ್ಟಲ್ಲ. ನೀವು ಯಾವಾಗಲೂ ಸಿಟ್ಟಿನಲ್ಲಿ ಇರುತ್ತೀರಿ. ಅದಕ್ಕೆ ಹಾಗೆ ನಿಮಗೆ ಕಾಣಿಸುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ತಮ್ಮ ಕ್ಷೇತ್ರದಲ್ಲಿ ಹಣಕಾಸು ಬಿಡುಗಡೆ ಮಾಡುತ್ತೀರಿ. ಆ ಭಾಗದ ಜನ ನೆಮ್ಮದಿಯಿಂದ ಇದ್ದಾರೆ. ನಾವು ಒದ್ದಾಡುತ್ತಿದ್ದೇವೆ. ನಾವು ನಮ್ಮ ನೋವನ್ನು ಹೇಳುತ್ತಿದ್ದೇವೆ. ನಾನು ಅಂಕಿಅಂಶಗಳನ್ನು ಕೊಡುತ್ತೇನೆ. ಅಧ್ಯಕ್ಷರೇ, ನಾನು ಸಿದ್ಧರಾಮಯ್ಯ ಎಂದು ಹೆಸರು ಹೇಳಿದೆ. ದಯವಿಟ್ಟು ಕ್ಷಮಿಸಿ. ತಾವು ಅದನ್ನು ಹೇಗೆ ತೆಗೆದುಕೊಂಡಿರೋ ಗೊತ್ತಿಲ್ಲ. ನಾನು ಹೇಳುತ್ತಾ ಇರುವಂಥಾದ್ದು ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ 31ನೇ ಮಾರ್ಚ್‌ಗೆ ಬಜೆಟ್ ಪ್ರಾವಿಷನ್ ಇರುವಂಥಾದ್ದು ಬಿಲ್ ಪಾವತಿಯಾಗಿಲ್ಲವಲ್ಲಾ, ನೀವು ಎಂದಾದರೂ ಕಂಡಿದ್ದೀರಾ ಸ್ವಾಮಿ?. ಕಂಟ್ರಾಕ್ಟರುಗಳು ಗಲಾಟೆ ಮಾಡುವುದನ್ನೂ, ಪತ್ರಿಕೆಗಳಲ್ಲಿ ಹೇಳಿಕೆ ಕೊಡುವುದನ್ನು ನಾವು ನೋಡಿದ್ದೇವೆ. ಆದರೆ ಕಂಟ್ರಾಕ್ಟರ್ಸ್ ಅಸೋಸಿಯೇಷನ್‌ರವರು ಇಲಾಖೆಯ ಕಚೇರಿಗೆ ಬೀಗ ಹಾಕುವಂಥಾದ್ದು, ಸತ್ಯಾಗ್ರಹ ಮಾಡುವಂಥಾದ್ದು, ಚಳುವಳಿಗೆ ಬರುವಂಥಾದ್ದು, ಮಂತ್ರಿಗಳ ಕಾರ್ಯಕ್ರಮ ನಮಗೆ ಬೇಡ, ಮೊದಲು ಬಿಲ್ ಕೊಡಿ ಎಂದು ಹೇಳುವಂಥ ಮಟ್ಟಕ್ಕೆ ಬಂದಿದೆ ಎನ್ನುವುದಾದರೆ ಎಲ್ಲೋ ಏನೋ ತಪ್ಪಾಗಿದೆ. ಅದನ್ನು ಸರಿಪಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಆಗಬೇಕಲ್ಲಾ? ಯಾವುದಕ್ಕೆ ಹಣ ಕೊಡುತ್ತೇವೆ, ಯಾವುದಕ್ಕೆ ಹಣ ಕೊಡುವುದಿಲ್ಲ ಎಂಬುದನ್ನು ಹೇಳಿ. ಇಲ್ಲದಿದ್ದರೆ ಈ ಬಜೆಟ್‌ನ ಸ್ಯಾಂಟಿಟಿ ಹೊರಟುಹೋಗುತ್ತದಲ್ಲಾ? ದೊಡ್ಡ ದೊಡ್ಡ ಕಂಟ್ರಾಕ್ಟರ್‌ಗಳನ್ನು ಬಿಡಿ. ಆದರೆ ಇವರು ನಾಲ್ಕೈದು ರೂಪಾಯಿ ಬಡ್ಡಿಗೆ ಹಣ ತಂದು ಕೆಲಸ ಮಾಡುತ್ತಿದ್ದಾರೆ. ಆರು ತಿಂಗಳು, ಎಂಟು ತಿಂಗಳಾದರೂ ಹಣ ಪಾವತಿಯಾಗಿಲ್ಲವೆಂದರೆ ಕ್ವಾಲಿಟಿ ಆಫ್ ವರ್ಕ್ ಹಾಳಾಗಿಹೋಗುತ್ತದೆ. ನಾವು ಚಿಂತೆ ಮಾಡುತ್ತಿರುವುದು ಇದರ ಬಗ್ಗೆ. ಹೋದ ಅಧಿವೇಶನದಲ್ಲಿ ಇಲ್ಲಿ ಸತ್ಯಾಗ್ರಹ ಮಾಡಿದರು. ಬಯಲು ಸೀಮೆ ಅಭಿವೃದ್ಧಿ ಬಗ್ಗೆ....

ಶ್ರೀ ಸಿದ್ಧರಾಮಯ್ಯ : ಹಣ ಬಿಡುಗಡೆ ಆಗಿತ್ತು. ಆದರೆ ಕೆಲಸ ನಡೆದಿರಲಿಲ್ಲ ಅಷ್ಟೇನೆ. ಅಲ್ಲಿ ಕೆಲವು ಟೆಕ್ನಿಕಲ್ ಪ್ರಾಬ್ಲಮ್‌ಗಳಾಗಿ, ಅದು 7 ಕೋಟಿ ಚಿಲ್ಲರೆ ಇತ್ತು. ಅದರಲ್ಲಿ 5 ಕೋಟಿ ಚಿಲ್ಲರೆ ಕೋಟಿ ಡಿಸೆಂಬರ್‌ವರೆಗೆ ಬಿಡುಗಡೆ ಆಗಿಹೋಗಿಬಿಟ್ಟಿತ್ತು. ಉಳಿದಿದ್ದನ್ನೂ ಕೂಡ ನಂತರ ಬಿಡುಗಡೆ ಮಾಡಿಬಿಟ್ಟೆವು. ಕೆಲಸ ಆಗಿಲ್ಲ ಎನ್ನತಕ್ಕಂಥಾದ್ದು ಅಷ್ಟೇ ಇತ್ತು ಹೊರತು ಬೇರೆ ಏನೂ ಇಲ್ಲ. ಇದಕ್ಕೆ ಉತ್ತರವನ್ನು ಹೋದಸಾರಿ ಕೊಟ್ಟಿದ್ದೇನೆ. ಈಗಲೂ ಕೂಡ ಕೊಡುತ್ತಿದ್ದೇನೆ. ಹಣ ಬಿಡುಗಡೆ ಆಗಿರಲಿಲ್ಲ ಎನ್ನತಕ್ಕಂಥ ಅಂಶವನ್ನು ಗಮನಕ್ಕೆ ತಂದಿರಲಿಲ್ಲ. 5 ಕೋಟಿ 55 ಲಕ್ಷ ರೂಪಾಯಿ ಹಣ ಬಿಡುಗಡೆ ಆಗಿತ್ತು. ಬಜೆಟ್ ಪ್ರಕಾರ ಇದ್ದಂಥಾದ್ದು ಏಳು ಕೋಟಿ ಚಿಲ್ಲರೆ. ರಿವೈಸ್ಡ್ ಎಸ್ಟಿಮೇಟ್ ನಲ್ಲಿ ಸ್ವಲ್ಪ ಕಡಿಮೆಯಾಗಿ ಉಳಿದ ಹಣವನ್ನೂ ಕೂಡ ನಾವು ಕೊಟ್ಟಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿದ ಪ್ರಕಾರ ತಾವು ದಯವಿಟ್ಟು ಗಮನಿಸಿ. ನನ್ನ ಹತ್ತಿರ ಅಂಕಿಅಂಶ ಇದೆ. ಬಯಲುಸೀಮೆಯಲ್ಲಿ ಬಜೆಟರಿ ಪ್ರಾವಿಷನ್ ಇದ್ದದ್ದು 7 ಕೋಟಿ. ಕಳೆದ ಅಧಿವೇಶನದಲ್ಲಿ ಚರ್ಚೆ ಮಾಡುವಂಥ ಕಾಲದಲ್ಲಿ ನೀವು ಬಿಡುಗಡೆ ಮಾಡಿದ ಹಣ ಮೂರೂವರೆ ಕೋಟಿ. ಉಳಿದ ಹಣವನ್ನು 31ನೇ ಮಾರ್ಚ್ ಒಳಗೆ ಬಿಡುಗಡೆ ಮಾಡುತ್ತೇವೆ ಎಂದು ಹೇಳಿ ಸತ್ಯಾಗ್ರಹ ಕುಳಿತಿದ್ದಾಗ ಈ ಮನೆಯಲ್ಲಿ ತಾವು ಪ್ರಾಮಿಸ್ ಮಾಡಿದ್ದೀರಿ. ನೀವು ನಿಮ್ಮ ದಾಖಲೆಯನ್ನು ತೆಗೆಸಿ ನೋಡಿ. ಆದರೆ ನೀವೇ ಹೇಳಿದ ಪ್ರಕಾರ ಮೂರೂವರೆ ಕೋಟಿ ಬಿಡುಗಡೆ ಆಗಿದ್ದರೂ ಸಹ ಕೆಲಸ ಆಗಿಲ್ಲವೆಂದರೆ ಏನರ್ಥ? ಮೂರೂವರೆ ಕೋಟಿ ನೀವು ಬಿಡುಗಡೆ ಮಾಡಿದ್ದು, ಹಣ ಇದ್ದರೂ ಸಹ ಕೆಲಸ ಮಾಡಿಲ್ಲವೆಂದರೆ ಸರ್ಕಾರ ಬದುಕಿದೆ ಎಂದು ಹೇಳಬೇಕೇ? ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಆಮೇಲೆ ಉಳಿದ ಹಣವನ್ನು ಮಾರ್ಚ್‌ನಲ್ಲಿ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದಿರಿ. ನಾನು ನಮ್ಮ ಹುಬ್ಬಳ್ಳಿ ಶಾಸಕ ಶೆಟ್ಟರ್ ಜೊತೆಯಲ್ಲಿ ಮಾತನಾಡುತ್ತಿದ್ದೆ. ಇವತ್ತೂ ಸಹ ಅವರ ಸ್ಥಿತಿ ಏನು ಎಂಬುದನ್ನು ಅವರು ಹೇಳುತ್ತಿದ್ದಾರೆ. ಇನ್ನು ಮಲೆನಾಡು ಬಗ್ಗೆ ಇನ್ನೂ ಹೆಚ್ಚು ಕೊಡಿ ಎಂದು ನಾವು ಹೇಳಿದ್ದೆವು. ನೀವು ಪ್ರಾವಿಷನ್ ಮಾಡಿದ್ದು 30 ಕೋಟಿ. ಇವತ್ತು 16 ಕೋಟಿಯನ್ನೂ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ ಅಂತ ಹೇಳುತ್ತಿದ್ದೀರಿ. ಕೇವಲ 14 ಕೋಟಿ ಮಾತ್ರ ಬಿಡುಗಡೆ ಮಾಡಿದ್ದೀರಿ. ಅಂದರೆ ಮಲೆನಾಡಿನಲ್ಲಿ ಕೊಟ್ಟಿದ್ದೇ30 ಕೋಟಿ.40 ಕೋಟಿ ಮಾಡಬೇಕೆಂದು ಒತ್ತಾಯಮಾಡುತ್ತಿದ್ದಾಗ ನೀವು ಖರ್ಚು ಮಾಡಿರುವುದೇ 14 ಕೋಟಿ ಮಾತ್ರ. ಇನ್ನು 16 ಕೋಟಿಯನ್ನು ನೀವು ಬಿಡುಗಡೆ ಮಾಡಿಲ್ಲ. ಅಂದರೆ ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ನೀವು ಇರಿಗೇಷನ್ ತೆಗೆದುಕೊಳ್ಳಿ ಮೈನರ್ ಇರಿಗೇಷನ್, ಮೇಜರ್ ಇರಿಗೇಷನ್ ತೆಗೆದುಕೊಳ್ಳಿ, ಪಿ.ಡಬ್ಲ್ಯೂ.ಡಿ. ಯನ್ನು ತೆಗೆದುಕೊಳ್ಳಿ, ಮಲೆನಾಡು ತೆಗೆದುಕೊಳ್ಳಿ, ಬೇರೆ ಯಾವುದೇ ಇಲಾಖೆಯನ್ನು ತೆಗೆದುಕೊಳ್ಳಿ, ನೀವು ಹಣ ಬಿಡುಗಡೆ ಮಾಡಲಿಲ್ಲ ಎನ್ನುವುದಾದರೆ ಬಹುಶಃ ಒಂದು ನಮಗೂ ನಿಮಗೂ ಗೊತ್ತು. ಎರಡು ತಿಂಗಳ ಕಾಲ ನಾವು ಚುನಾವನೆ ಗಲಾಟೆಯಲ್ಲಿ ಇದ್ದೆವು. ನಿಮಗೆ ಸೂಚನೆ ಇತ್ತು. ಅಧಿಕಾರಿಗಳೂ ಹೇಳಿದ್ದರು ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿರುವುದರಿಂದ ಯಾವುದೇ ಅಭಿವೃದ್ಧಿ ಕಾರ್ಯ ಮಾಡುವಹಾಗಿಲ್ಲ ಎಂದು. ಅಧಿಕಾರಿಗಳು ಅದರ ಕಡೆಗೆ ಗಮನ ಕೊಡುವುದಕ್ಕೆ ಆಗಲಿಲ್ಲ. ಅಧಿವೇಶನದಲ್ಲಿ ಚರ್ಚೆಯಾಯಿತು. ಈಗ ಮತ್ತೆ ಮುಗಿಸಿಕೊಂಡು ಬರುತ್ತಿದ್ದೇವೆ. ಎಪ್ರಿಲ್ 15ನೇ ತಾರೀಖಿಗೆ ನಾವು ಇಲ್ಲಿ ಬರಬೇಕಾದರೆ ಉಸಿರಾಡುವ ಸ್ಥಿತಿ ಇರಬೇಕಲ್ಲಾ? ಈ ಕಡೆ, ಆ ಕಡೆ ಇರುವ ಶಾಸಕರು ಯಾರನ್ನಾದರೂ ಕೇಳಿ. ಹಣ ಬಿಡುಗಡೆಯಾಗಿದೆ, ಕಂಟ್ರಾಕ್ಟರ್‌ಗಳು ನೆಮ್ಮದಿಯಿಂದ ಕೆಲಸ ಮಾಡುತ್ತಿದ್ದಾರೆ, ನಾವು ನಮ್ಮ ಕ್ಷೇತ್ರಕ್ಕೆ ಹೋಗಿಬರಬಹುದು ಎನ್ನುವ ವಾತಾವರಣ ಇದೆಯೆಂದು ನಿಮ್ಮ ಪಕ್ಷದ ಹತ್ತು ಜನರು ಹೇಳಿದರೆ ನಾನು ಸಂತೋಷಪಡುತ್ತೇನೆ. ಈಗ ನಾವು ಚರ್ಚೆ ಮಾಡುತ್ತಾ ಇರುವುದು, ಎಷ್ಟರಮಟ್ಟಿಗೆ ನಿಮ್ಮ ಸರ್ಕಾರಕ್ಕೆ ಅಲಸ್ಯ ಇದೆ ಎಂದರೆ, ಮುಖ್ಯಮಂತ್ರಿಯವರು ಚರ್ಚೆಯನ್ನೇ ಪ್ರಾರಂಭ ಮಾಡಿಬಿಡೋಣ ಎಂದರು. ಅದು ಬೇರೆ ಕಾರಣಕ್ಕೋಸ್ಕರ ಅಧಿವೇಶನವನ್ನು ಕರೆಯುತ್ತಿರುವುದು. ಅದು ಜಗತ್ತಿಗೇ ಗೊತ್ತಿರುವಂಥಾದ್ದು. ಇದು

ಅಲಸ್ಯ ಎಲ್ಲಿಯವರೆಗೆ ಎಂದರೆ, ನಾಳೆ ಗ್ರಾಮೀಣಾಭಿವೃದ್ಧಿ ಚರ್ಚೆ ಮಾಡಬೇಕು ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಯಿತು. ಇವತ್ತಿಗೂ ನಮಗೆ ಮಾಹಿತಿ ಸಿಗುತ್ತಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಅನ್ಯುಯಲ್ ರಿಪೋರ್ಟ್ ಪ್ರಿಂಟಿಗೆ ಕೊಟ್ಟಿದ್ದೇವೆ. ಎರಡು ದಿವಸ ತಡವಾಗಿ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ನಿಮ್ಮ ಇಲಾಖೆ ಎಂದು ಅಲ್ಲ. ಒಂದು ಸರ್ಕಾರ ಚರ್ಚೆ ಪ್ರಾರಂಭವಾಗುವುದು ನಾಳೆಗೆ ಎಂದು ಇದ್ದರೂ ಸಹ ನಿಮ್ಮ ಅಧಿಕಾರಿಗಳು, ಸಂಬಂಧಪಟ್ಟವರು ವಾರ್ಷಿಕ ವರದಿಯನ್ನು ಇನ್ನೂ ಸಿದ್ಧಪಡಿಸಿಲ್ಲವೆಂದರೆ, ನಾವೇನು ಆಕಾಶದಿಂದ ಇಳಿದುಬಂದಿರುವಂಥ, ಎಲ್ಲಾ ಮಾಹಿತಿಯೂ ಗೊತ್ತಿರುವಂಥ ಶಾಸಕರು ಇಲ್ಲಿದ್ದೇವೇನು? ಆನ್ಯುಯಲ್ ರಿಪೋರ್ಟ್ ಇದ್ದರೆ ಅದನ್ನು ಓದಿ ಎಲ್ಲಿ ಏನು ಕೊರತೆಗಳಿವೆ, ಅದನ್ನು ಸರ್ಕಾರದ ಗಮನಕ್ಕೆ ತಂದು ಅಧಿಕಾರಿಗಳಿಗೆ ಹೇಳಿ ಆ ಕೆಲಸ ನೀವು ನೋಡಿಕೊಳ್ಳಬೇಕು ಎಂದು ಹೇಳುವಂಥ ವ್ಯವಸ್ಥೆ ಇದ್ದಾಗ ಎಲ್ಲಾ ಇಲಾಖೆಗಳ ಆನ್ಯುಯಲ್ ರಿಪೋರ್ಟ್ಸ್ ನಮ್ಮಲ್ಲಿ ಇಲ್ಲವೆಂದು ಹೇಳುವುದಾದರೆ ಬಹುಶಃ ನೀವು ಯಾವುದೋ ಲೋಕದಲ್ಲಿ ಗೊಂದಲದಲ್ಲಿ ಇದ್ದೀರಿ ಎಂದಾಗುತ್ತದೆ. ಆಕಸ್ಮಾತ್ ಇದು ಸಿಗಲಿಲ್ಲ ಎಂದು ತಿಳಿದು, ನಾನು ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಮಾಡಿಲ್ಲವೆಂದು ಆರೋಪ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಆನ್ಯುಯಲ್ ರಿಪೋರ್ಟ್ ಪ್ರಿಂಟಿಗೆ ಕೊಟ್ಟಿದ್ದೇವೆ. ಎರಡು ದಿವಸ ತಡವಾಗಿ ತೆಗೆದುಕೊಳ್ಳಬೇಕು ಎಂದು ನಾನು ಯೋಚನೆ ಮಾಡಿದ್ದೆ. ಹಿಂದೆ ನಮ್ಮ ಇಲಾಖೆಯ ವಿಷಯಾನುಕ್ರಮಣ ಪಟ್ಟಿಯಲ್ಲಿ 53-54ನೇ ವಿಷಯಗಳು ಎಂದು ಇತ್ತು. ಆದರೆ ನಿನ್ನೆ ದಿವಸ ಇದನ್ನು ನಿರ್ಣಯ ಮಾಡತಕ್ಕಂಥ ಸಮಿತಿಯಲ್ಲಿ ಇದು ನಾಳೆಯೇ ಚರ್ಚೆಗೆ ಬರುತ್ತದೆ ಎಂದು ಆಯಿತು. ಮಾನ್ಯ ವಿಶ್ವೇಶ್ವರ ಹೆಗಡೆಯವರು ಪ್ರಸ್ತಾಪ ಮಾಡಿದಾಗಲೂ ಆನ್ಯುಯಲ್, ರಿಪೋರ್ಟ್‌ಗೆ ಮೂರು ದಿವಸ ಬೇಕಾಗುತ್ತದೆ ಎಂದು ಕೇಳಿದ್ದೇವೆ. ಆಕಸ್ಮಾತ್ ಅದು ಇಲ್ಲದಿದ್ದರೂ ಕೂಡ ನನ್ನ ಹತ್ತಿರ ಇರತಕ್ಕಂಥ ವರದಿಗಳನ್ನು ಕಳುಹಿಸಿಕೊಡುತ್ತೇನೆ ಎಂದು ಹೇಳಿ. ನಿಮಗೂ ಕೂಡ ನಾವು ಭಿನ್ನಹ ಮಾಡಿಕೊಳ್ಳಬೇಕೆಂದು ನಾನು ಯೋಚನೆ ಮಾಡಿದ್ದೆ. ತಾವು ಹೇಳಿದ್ದುದು ನಿಜ. ವಾರ್ಷಿಕ ವರದಿ ಇಲ್ಲದಿದ್ದರೆ ಚರ್ಚೆಮಾಡುವುದಕ್ಕೆ ತಡವಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗನ್ನು ಈಗತಾನೇ ಮುಗಿಸಿಕೊಂಡು ಬಂದಿದ್ದೇವೆ. ಪ್ರತಿಪಕ್ಷದ ನಾಯಕರು, ಆಡಳಿತ ಪಕ್ಷದ ಉಪಮುಖ್ಯಮಂತ್ರಿಗಳು ಇದ್ದರು. ಎಲ್ಲಿಯಾದರೂ ನಮ್ಮ ಶಾಸಕರಿಗೆ ಇದರ ಮಹತ್ವ ಉಪಯುಕ್ತತೆ ಆಗಬೇಕು ಎನ್ನುವುದಾದರೆ ನಾವು ಯಾವುದನ್ನು ತೆಗೆದುಕೊಳ್ಳಬೇಕು ಎಂದು ನಮಗೆ ಗೊತ್ತಿಲ್ಲ. ನಾಳೆ ದಿವಸ ಯಾವುದು ಆನ್ಯುಯಲ್ ರಿಪೋರ್ಟ್ ಇಡಲಾಗಿದೆ, ಯಾವುದನ್ನು ಚರ್ಚೆ ಮಾಡಬೇಕು ಎಂದು ನಮಗೆ ಮಾಹಿತಿ ಇಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ಇದು ಮಂತ್ರಿಗಳ ಕೆಲಸ ಎಂದು ನಾನು ಹೇಳುವುದಿಲ್ಲ. ಎಲ್ಲೋ ಒಂದು ಕಡೆ ನಿಮ್ಮ ಅಧಿಕಾರಿಗಳು ಕೈಕಟ್ಟಿಕೊಂಡು ಕುಳಿತಿದ್ದಾರೆ. ಇದಕ್ಕೆ ಏನು

ಮಹತ್ವ ಕೊಡಬೇಕೋ ಅದನ್ನು ಅವರು ಕೊಡುತ್ತಿಲ್ಲ. ಅಷ್ಟೇ ಹೊರತು ಬೇರೆ ಏನೂ ಇಲ್ಲ. ನಿಮ್ಮ ಒಂದೇ ಇಲಾಖೆ ಎಂದು ಅಲ್ಲ. ಇತ್ತೀಚೆಗೆ ಸರ್ಕಾರದಲ್ಲಿ ಹೇಗೆ ಆಲಸ್ಯ ಬಂದಿದೆ ಎಂದರೆ ಗಮನ ಕಡಿಮೆಯಾಗಿದೆ. ನಿಮ್ಮ ರಾಜಕೀಯ ಇತರ ಚಟುವಟಿಕೆಗಳಲ್ಲಿ ನೀವು ತಲ್ಲೀನರಾಗಿರುವಂಥಾದ್ದು, ಗೊಂದಲದಲ್ಲಿ ಸಿಕ್ಕಿಕೊಂಡು ನರಳುತ್ತಿರುವಂಥಾದ್ದು, ನಿಮ್ಮ ಕೈಗೆ ಸಿಕ್ಕಿ ರಾಜ್ಯದ ಜನ ಒದ್ದಾಡುತ್ತಿರುವಂಥಾದ್ದು, ಉಸಿರು ಕಟ್ಟತಕ್ಕಂಥ ಪರಿಸ್ಥಿತಿ ಇರುವಂಥಾದ್ದು ಇರುವಾಗ ಮುಖ್ಯಮಂತ್ರಿಗಳಂತೂ ಇದಕ್ಕೆ ಏನಾದರೂ ವೇದಾಂತದ ಮಾತನ್ನು ಹೇಳಿ ಇದನ್ನು ತಣ್ಣಗೆ ಮಾಡಿ ಸಮಾಧಾನಪಟ್ಟುಕೊಳ್ಳುವಂಥಾದ್ದನ್ನು ಇದೆ. ಈ ಪ್ರವೃತ್ತಿ ಈ ಸರ್ಕಾರಕ್ಕೆ ಶೋಭೆ ತರುವಂಥಾದ್ದು ಅಲ್ಲ. ಎಷ್ಟು ದಿವಸ ಇರುತ್ತೀರಿ, ಅಷ್ಟು ದಿವಸ ಸ್ವಲ್ಪ ಕಳಕಳಿಯಿಂದ ಪೊಲಿಟಿಕಲ್ ವಿಲ್ ಇಟ್ಟುಕೊಂಡು ಕೆಲಸ ಮಾಡಿ. ಹೇಗೋ ನಡೆಯುತ್ತಿದೆ, ಜಾತ್ರೆ ನಾಲ್ಕು ದಿವಸ ನಡೆಯುತ್ತದೆ ಎಂದರೆ ನಮ್ಮದೇನೂ ಅಭ್ಯಂತರ ಇಲ್ಲ. ನಾನು ನೇರವಾಗಿ ಹೇಳುತ್ತಿದ್ದೇನೆ. ದಯಮಾಡಿ ಮಾನ್ಯ ಹಣಕಾಸು ಸಚಿವರು ಹಣಕಾಸಿನ ಸ್ಥಿತಿಗತಿಗಳು ಏನಿದೆ, ಎಂದು ತಾವು ಕೊಟ್ಟರೆ ನಾವು ನಮ್ಮ ಸಲಹೆಗಳನ್ನು ಕೊಡುತ್ತೇವೆ. ಇದಕ್ಕೆ ಆದ್ಯತೆ ಕೊಡಿ, ಇದಕ್ಕೆ ಬೇಡವೆಂದು ಸಲಹೆ ಕೊಡುತ್ತೇವೆ. ನಾಗೇಗೌಡರು, ಮಾನ್ಯ ನೀರಾವರಿ ಸಚಿವರು ಹೇಳುವುದಂತೂ ನಮಗೆ ಅರ್ಥವಾಗುವುದಿಲ್ಲ. ನಾವು ಎಲ್ಲಾ ರಿಪೋರ್ಟನ್ನು ತರಿಸಿಕೊಂಡಿದ್ದೇವೆ. ಅಧಿವೇಶನ ಆದಮೇಲೆ ಏನಾದರೂ ಕೃಷ್ಣಾ ಬೇಸಿನ್‌ಮೇಲೆ ತರಾತುರಿಯಿಂದ ಕೆಲಸ ಪ್ರಾರಂಭವಾಯಿತು ಎಂದರೆ ಅದೂ ಕೂಡ ಇಲ್ಲ. ನೀವು ಉತ್ತರ ಕೊಡಬೇಕಾದರೆ ಅದನ್ನು ಹೇಳಿ. ನಾವು ಅದರ ಬಗ್ಗೆ ಚರ್ಚೆ ಮಾಡುವವರಿದ್ದೇವೆ. ವಿವರಗಳನ್ನು ತಾವು ಕೊಡುವವರಿದ್ದೀರಿ. ಅಂದರೆ ಏನೋ ಒಂದು ಆಲಸ್ಯವನ್ನು ಕಾಣುತ್ತಿದ್ದೇವೆ. ದಯಮಾಡಿ ಮುಖ್ಯಮಂತ್ರಿಗಳು ಈ ಆಲಸ್ಯಕ್ಕೆ ಒಂದು ತೆರೆ ಎಳೆದು ಸ್ವಲ್ಪ ಚಟುವಟಿಕೆಯಿಂದ ಸಚಿವರು, ಅಧಿಕಾರಿಗಳು ಕೆಲಸ ಮಾಡುವ ಕಡೆಗೆ ಗಮನಕೊಟ್ಟು ವಾಸ್ತವಿಕ ಸತ್ಯಸಂಗತಿ ಒಳಗೊಂಡಂತಹ ಅಂಕಿಅಂಶಗಳನ್ನು ಮಾನ್ಯ ಹಣಕಾಸಿನ ಸಚಿವರು ಕೊಟ್ಟರೆ ಒಳ್ಳೆಯದು. ಇವತ್ತು ಅಲ್ಲದಿದ್ದರೆ ನಾಳೆ ಒಂದು ವೈಟ್‌ಪೇಪರನ್ನು ಎಲ್ಲಾ ವಿವರಗಳನ್ನು ಒಳಗೊಂಡಂತೆ ಬಿಡುಗಡೆ ಮಾಡಿದರೆ ಸ್ವಲ್ಪ ಇಲ್ಲಿ ಚರ್ಚೆಗೆ ಉಪಯುಕ್ತವಾಗುತ್ತದೆ. ಇಲ್ಲದಿದ್ದರೆ ಜನ ಕೊಟ್ಟಂಥ ತೆರಿಗೆ ಹಣ ಎಲ್ಲೋ ಸೋರಿಹೋಗಿ ಯಾರದ್ದೋ ಬಾಯಿ ಸೇರಿ ವ್ಯರ್ಥವಾಗಿ ನಾವು ಯಾವುದೇ ಶಾಸಕರು ನಮ್ಮ ಕ್ಷೇತ್ರದಲ್ಲಿ ಗೌರವದಿಂದ ಓಡಾಡುವುದಕ್ಕೆ ಆಗದೇ ಇರುವಂಥ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಇದೆಲ್ಲವನ್ನೂ ಒಳಗೊಂಡಂಥ ವಿವರಗಳನ್ನು ನೀವು ಒದಗಿಸಿದರೆ ಚರ್ಚೆ ಮಾಡುವುದಕ್ಕೆ ಉಪಯೋಗವಾಗಬಹುದು. ಸನ್ಮಾನ್ಯ ಉಪಾಧ್ಯಕ್ಷರು ಇದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತೇನೆ.

+ ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಣಕಾಸು ಸಚಿವರಿಗೆ ರಾಜ್ಯದಲ್ಲಿ ಹಣಕಾಸು ಪರಿಸ್ಥಿತಿ ಏನಿದೆ ಎಂದು ಗೊತ್ತಿರುತ್ತದೆ. ಆದರೆ ಇಲ್ಲಿ ಬಹಳ ಪ್ರಾಮುಖ್ಯವಾದ ವಿಚಾರ ಇಷ್ಟು : ನೀರಾವರಿಯಲ್ಲಿ ಬಾಕಿ ಇದೆ, ಲೋಕೋಪಯೋಗಿಯಲ್ಲಿ ಬಾಕಿ ಇದೆ ಅದು ಎಷ್ಟು ಎಂಬುದಕ್ಕಿಂತ ಮೂಲಭೂತವಾದ ಪ್ರಶ್ನೆ ಏನೆಂದರೆ ಸಾಧಾರಣ ಮಾರ್ಚಿ ಅಂತ್ಯದವರೆಗೆ ನಾವು ಸರಿಯಾಗಿ ಹಣಕಾಸು ವ್ಯವಹಾರ ನಿರ್ವಹಣೆ ಮಾಡಿದ್ದರೆ ಏಪ್ರಿಲ್‌ನಲ್ಲಿ ಈ

ಪ್ರಶ್ನೆ ಉದ್ಭವವಾಗಲೇಬಾರದು. ಯಾಕೆಂದರೆ ಯಾವ ತರಹ ಮೊಬಿಲೈಜೇಶನ್ ಆಯಾ ವರ್ಷದ್ದು ಎಂದು ಹೇಳಿದರೆ, ಆರ್ಥಿಕ ವರ್ಷದ ಮಧ್ಯದಲ್ಲಿ ಇಂತಹ ಪರಿಸ್ಥಿತಿ ಕೆಲಸ ಸಲ ಬರುತ್ತದೆ, ಕೆಲವು ಬಾಕಿ ಬಿಲ್ ಇರುತ್ತದೆ, ಟ್ರೆಜರಿಯವರಿಗೆ ತಾವು ಸ್ವಲ್ಪ ರೆಗ್ಯುಲೇಟ್ ಮಾಡಬೇಕಾಗುತ್ತದೆ. ಅದನ್ನೆಲ್ಲಾ ನಾನು ಒಪ್ಪುತ್ತೇನೆ, ಸಹಜವಾಗಿ ಹಣಕಾಸಿನ ವ್ಯವಸ್ಥೆಯಲ್ಲಿ ಆಗುವ ವಿಚಾರ ಇದರಲ್ಲಿ ನನಗೆ ಒಂದು ಅರ್ಥವಾಗುತ್ತಿಲ್ಲ, ನೀವು ಯಾವುದಕ್ಕೂ ಒಂದೇ ಉತ್ತರ ಕೊಡುತ್ತೀರಿ, ನೀವು ಹೇಗೆ ಮಾಡಿದ್ದಿರಿ, ನಾವು ಹೇಗೆ ಮಾಡುತ್ತೇವೆ, ಸವಾಲ್, ಆ ಪ್ರಶ್ನೆಯಲ್ಲ, ಆದರೆ ಸೀಮಿತವಾದ ಪ್ರಶ್ನೆಯಿರುವುದು ಇಷ್ಟೇ. ಮಾನ್ಯ ಮುಖ್ಯಮಂತ್ರಿಗಳು ಗಮನಕ್ಕೆ ತೆಗೆದುಕೊಳ್ಳಬೇಕು. 97-98ರ ಹಣಕಾಸಿನ ವ್ಯವಸ್ಥೆ ಸರಿಯಾಗಿದ್ದಿದ್ದರೆ ಏಪ್ರಿಲ್‌ನಲ್ಲಿ ಇಷ್ಟೊಂದು ಬಾಕಿ ಇದೆ, ತುಮಕೂರು ನಾಲೆಯಲ್ಲಿ 47 ಕೋಟಿ ಬಾಕಿ ಇದೆ. ಬರೀ 15 ಲಕ್ಷ ಬಿಡುಗಡೆ ಮಾಡಿದ್ದಾರೆ, ವಿಸಿ ಕೆನಾಲ್‌ನಲ್ಲಿ ಬಾಕಿ ಇದೆ, ಲೋಕೋಪಯೋಗಿ ಇಲಾಖೆಯಲ್ಲಿ ಬಾಕಿ ಇದೆ. ನನ್ನ ಮೆಮೊರಿ ಪ್ರಕಾರ ನಾನೂ 27 ವರ್ಷಗಳಿಂದ ಶಾಸಕನಾಗಿ ವಿರೋಧಪಕ್ಷದ ನಾಯಕನಾಗಿ ಕೆಲಸ ಮಾಡಿದ್ದೇನೆ, ಮಾರ್ಚಿ ಫೆಬ್ರವರಿಗಳಲ್ಲಿ ಗುಲ್ಲು ಬರುತ್ತದೆ, ವರ್ಷದ ಮಧ್ಯದಲ್ಲಿ ಬರುತ್ತದೆ ಆದರೆ ಏಪ್ರಿಲ್‌ನಲ್ಲಿ ಇಷ್ಟು ಹಣ ಬಾಕಿ ಇಡುವ ಪರಿಸ್ಥಿತಿ ಬಂದಿದ್ದರೆ ಅದು ಈ ವರ್ಷ ಮಾತ್ರ. All is not well with the financial management... ಏಪ್ರಿಲ್ ತಿಂಗಳಿನಲ್ಲಿ ಇಷ್ಟು ಬಾಕಿ ಇಡಬೇಕಾದರೆ 'treasury ban' ಎಂದು ಹೇಳುವುದಕ್ಕೆ ಅನುಮಾನವೇ ಇಲ್ಲ. ಅನೇಕ ವರ್ಷಗಳಿಂದ ಪತ್ರಿಕಾ ಹೇಳಿಕೆಗಳನ್ನು ನೋಡಿಕೊಳ್ಳಿ. ಇನ್ನೊಂದು ಕಡೆ ನೋಡಿಕೊಳ್ಳಿ. ಏಪ್ರಿಲ್ ತಿಂಗಳಿನಲ್ಲಿ ಇಷ್ಟು ಗುಲ್ಲು ಆಗಬೇಕಾದರೆ ನೀವು ನಿರ್ವಹಣೆ ಸರಿಯಾಗಿ ಮಾಡದೇ ಇದ್ದುದ್ದರಿಂದ ಈ ಪ್ರಶ್ನೆ ಬಂದಿದೆ. ಇಲ್ಲದಿದ್ದರೆ ಯಾವ ಹಣಕಾಸಿನ ವರ್ಷದಲ್ಲೂ ಟ್ರೆಜರಿಗೆ ಏಪ್ರಿಲ್‌ನಲ್ಲಿ ಬ್ಯಾನ್ ಮಾಡುವುದು, ಇಷ್ಟು ಬಾಕಿ ಇಡುವುದು ಆದದ್ದೇ ಇಲ್ಲ. ಆದುದರಿಂದ ಇದೊಂದು ಗಂಭೀರವಾದ ವಿಶೇಷವಾದಂತಹ ಪರಿಸ್ಥಿತಿ. ಇವತ್ತು ವಿರೋಧಪಕ್ಷದ ನಾಯಕರು, ಈ ಕಡೆಯವರು ಪ್ರಶ್ನೆ ಎತ್ತಿದರು ಎಂದು ಇಲ್ಲ, ನೀವು ಇಂಟ್ರಾಸ್ಪೆಕ್ಷನ್ ಮಾಡಬೇಕು. ಏಕೆಂದರೆ, ಈ 17-1-98ರಂದು ಒಂದು ಸುತ್ತೋಲೆ, ಅದನ್ನು ನಮ್ಮ ನಾಯಕರು ಉದ್ಧರಿಸಿದರು. ಅದು ಏಕೆಂದರೆ ಲಾಸ್ಟ್ ಮಿನಿಟ್ ರಷ್ ಮಾಡುವುದು ಬೇಡ, ಸರ್ಕುಲರ್ ಒಳ್ಳೆಯ ಉದ್ದೇಶದಿಂದ ಕೊಟ್ಟಿದ್ದಾರೆ I am not finding fault with the circular, ಏಕೆಂದರೆ ಮಾರ್ಚಿಯಲ್ಲಿ ರಷ್ ಆಗುತ್ತದೆ, ಸರಿಯಾಗಿ ಸ್ಕ್ರೂಟಿನಿ ಮಾಡಲು ಬರುವುದಿಲ್ಲ ಆದ್ದರಿಂದ ಸರಿಯಾದ ಸ್ಕ್ರೂಟಿನಿಗೆ ಅವಕಾಶ ಬೇಕೆಂದು ತಾವು ಸುತ್ತೋಲೆ ಕೊಟ್ಟಿದ್ದೀರಿ I am not suspecting the bonafides on this, ಆದರೆ ಇದನ್ನು ನೆಗೆಟಿವ್ ವೇ ನಲ್ಲಿ ಉಪಯೋಗ ಮಾಡಿರಬೇಕು. ಒಂದು, ನೀವು ಹಣ ಒಟ್ಟು ಮಾಡಿರಬಹುದು, ಆದರೆ ಬಿಲ್‌ನ ಸಲ್ಲಿಕೆ ಏನಾಗುತ್ತದೆ ಅಂದರೆ ಎಷ್ಟೇ ಮಾಡಿದರೂ ಕೂಡ ಮಾರ್ಚಿಯಲ್ಲಿ ರಷ್ ಇದ್ದೇ ಇರುತ್ತದೆ. I think it must not have happened like that, ಇಲ್ಲ ಅಂದರೆ ಮಾರ್ಚಿ ಅಂತ್ಯಕ್ಕೆ ಬಿಲ್‌ಗಳನ್ನೆಲ್ಲಾ ಸೆಟ್ಲ್ ಮಾಡುತ್ತಾರೆ, ಏನಿಲ್ಲವೆಂದರೂ ಅಡ್ವಾನ್ಸ್ ಟ್ಯಾಕ್ಸಾದರೂ ತೆಗೆದುಕೊಂಡು ನೀವು ಸೆಟಲ್ ಮಾಡಲೇ ಬೇಕು. ಅದು ಸರ್ಕಾರದ ಕರ್ತವ್ಯ. ಒಂದು ವೇಳೆ ಅಡ್ವಾನ್ಸ್ ತೆಗೆದುಕೊಳ್ಳುವುದಿಲ್ಲವೆಂದರೆ, ಈ ವರ್ಷದಲ್ಲಿ ಇಷ್ಟು ಬಾಕಿ I can understand the deficit ಬಜೆಟ್‌ನಲ್ಲಿ ತಾವು ಏನು ಪ್ರೆಸೆಂಟ್ ಮಾಡುತ್ತೀರಿ, 96 ಕೋಟಿಯೋ ಏನೋ ಬಜೆಟ್ ಡೆಫಿಸಿಟ್

ಏನಿದೆ ಇದರ ಪರಿಣಾಮ ಏನಾಗುತ್ತದೆ ಅಂದರೆ ಡೆಫಿಸಿಟ್ ಬರೀ 96 ಕೋಟಿಯಲ್ಲ. It will be above Rs. 750 crores ಆಗುತ್ತದೆ. ಎಲ್ಲಿ ಹೋಗುತ್ತೀರಿ? It will come nearer to Rs. 1000 crores . It is a alarming situation. It is a shocking situation. ಇದರ ಬಗ್ಗೆ ನೀವು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗುತ್ತದೆ. ನಿಮ್ಮ ಅಧಿಕಾರಿಗಳು ಅಥವಾ ನೀವು ಎಲ್ಲಿ ಎಡವಿದ್ದೀರಿ ಅದನ್ನೆಲ್ಲಾ ರಿವ್ಯೂ ಮಾಡಬೇಕಾಗುತ್ತದೆ. ಅದಕ್ಕಾಗಿ ಇವತ್ತು ಕೇಳುತ್ತಿದ್ದುದು ಶ್ವೇತಪತ್ರವೋ ಇನ್ನೊಂದನ್ನೋ ಅಥವಾ ಬೇರೆಬೇರೆ ಇಲಾಖೆಗಳ ಬೇಡಿಕೆಗಳ ಉತ್ತರಗಳ ಮೇಲೆ ವಿಮರ್ಶೆ ಮಾಡಲು ಬರುತ್ತದೆ, ಇಲ್ಲ ಅನ್ನಲು ಬರುವುದಿಲ್ಲ. ಆದರೆ ಇಂಥದು ಏಪ್ರಿಲ್‌ನಲ್ಲಿ ಮಾತ್ರ ಎಂದೂ ನಡೆದಿಲ್ಲ. ಏಪ್ರಿಲ್‌ನಲ್ಲಿ ಬಿಲ್ ಬಾಕಿ ಇದೆ, ಬೀಗ ಮತ್ತೊಂದು ಹಾಕಿದ್ದಾರೆ ಎಂದು ಹೇಳುವ ಸ್ಥಿತಿ ಏನಿದೆ ಮಾನ್ಯ ಮುಖ್ಯಮಂತ್ರಿಗಳೇ ಇಂಥದನ್ನು ಯಾವ ಸರ್ಕಾರವೂ ಎದುರಿಸಲೇ ಇಲ್ಲ, ಏನಾದರೂ ಮಾಡಿಕೊಂಡು ಮಾರ್ಚಿ ಅಂತ್ಯಕ್ಕೆ ಎಲ್ಲಾ ನಾವು ಸೆಟಲ್ ಮಾಡಿಬಿಡುತ್ತೇವೆ. ಸ್ವಲ್ಪ ಬಿಲ್ ಪ್ರೆಸೆಂಟ್ ಮಾಡದೇ ಇದ್ದುದ್ದು ಇರಬಹುದು, ಬೇರೆಬೇರೆ ಇಲಾಖೆಗಳಿಂದ ಏನಾದರೂ ಬಿಲ್ ಪ್ರಸೆಂಟ್ ಆಗಿದ್ದರೆ you will have to hold the respective Officers into task. ಆದ್ದರಿಂದ ಇದನ್ನು ಹಾರಿಸಿಹೋಗುವ ಪ್ರಶ್ನೆಯಲ್ಲ, ಇದು ಇಲ್ಲಿವರೆಗೆ ಕರ್ನಾಟಕದಲ್ಲಿ ಆಗದೇ ಇರುವಂತಹ, ಹಣಕಾಸಿನ ವ್ಯವಸ್ಥೆ ಮೇಲೆಯೇ ಒಂದು ತರಹ ರಿಫ್ಲೆಕ್ಟ್ ಆಗುತ್ತದೆ may be that you would not have done it with bonafide. I am not finding fault with that. What is done in the ultimate at the end of the tunnel ಏನಾಗಿದೆ ಅಂದರೆ ಸ್ಫೋಟಕ ಪರಿಸ್ಥಿತಿ ಉಂಟಾಗಿದೆ. ಇದು ಫಲಿತಾಂಶ. ಅದನ್ನು ಯಾವರೀತಿ ನಿವಾರಣೆ ಮಾಡುತ್ತೀರಿ ಎಂಬುದನ್ನು ವಿಮರ್ಶೆ ಮಾಡಿಕೊಳ್ಳಿ. ಇಲ್ಲದಿದ್ದರೆ ಬಜೆಟ್ ಬಗ್ಗೆ ಯಾವ ಪಾವಿತ್ರತೆಯೂ ಉಳಿಯುವುದಿಲ್ಲ. 96 ಎಂದು ಪ್ರೊಜೆಕ್ಟ್ ಮಾಡಿ actual projection 750 crores ಆದರೆ ಏನು ಪಾವಿತ್ರತೆ ಉಳಿಯುತ್ತದೆ? ಅದನ್ನೇನು ಚರ್ಚೆ ಮಾಡಲು ಆಗುತ್ತದೆ? ಆದ್ದರಿಂದ ಏಕೆ ಈ ಪರಿಸ್ಥಿತಿ ಆಯಿತು ಇದರ ಬಗ್ಗೆ ನೀವು ಪ್ರೋಬ್ ಮಾಡಬೇಕಾಗುತ್ತದೆ. I am not asking any agency to probe. It is not desirable in the interest of the State and State's Development.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಉಪಾಧ್ಯಕ್ಷರೇ, ಸುಮಾರು 750 ರಿಂದ 900 ಕೋಟಿಯವರೆಗೆ ಬಿಲ್‌ಗಳು ಪಾವತಿಯಾಗಿಲ್ಲ ಎನ್ನುವುದನ್ನು ನಮ್ಮ ಆಕ್ಷೇಪಣೆ ಮತ್ತು ಒತ್ತಾಯ, ವಸ್ತುಸ್ಥಿತಿ ಏನು ಎಂದು ಸರ್ಕಾರ ಇಲ್ಲಿ ಹೇಳಬೇಕಲ್ಲಾ, ಮುಚ್ಚಿಡಬೇಕಾದ ಅವಶ್ಯಕತೆ ಇಲ್ಲ. ಒಂದು ತಿಂಗಳ ಹಿಂದೆ ತಾವು ಆಯವ್ಯಯ ಮಂಡನೆ ಮಾಡಿದ್ದೀರಿ, ಮಂಡನೆ ಮಾಡಿದ ಒಂದು ತಿಂಗಳಲ್ಲೇ ನಮಗೆ ಬಿಲ್‌ಗಳು ಪಾವತಿಯಾಗಿಲ್ಲ ಎಂದು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳ ಗುತ್ತಿಗೆದಾರರು ಆಯಾ ಕಾರ್ಯಾಲಯಕ್ಕೆ ಬೀಗ ಹಾಕುವಂತಹವುದು ಬಹಳ ಗಂಭೀರವಾದದ್ದು. ಇಂಥಾದ್ದು ನಿರ್ಮಾಣವಾಗಬೇಕಾದರೆ ಎಲ್ಲೋ ಒಂದು ಕಡೆ ಸತ್ಯಾಂಶ ಇರಬೇಕಲ್ಲಾ. ಅದನ್ನು ತಾವು ಸದನದ ಮುಂದೆ ಶ್ವೇತಪತ್ರ ಅಂತಾನಾದರೂ ಮಂಡಿಸಿ ಯಾವರೀತಿಯಾದರೂ ಮಂಡಿಸಿ. ತಮ್ಮ ಭಾಷಣದಲ್ಲಿ ಅನೇಕ ವಿಚಾರಗಳನ್ನು ತಾವೇ ಹೇಳಿದ್ದೀರಿ, ಶಿಕ್ಷಣ ಮತ್ತು ಆರೋಗ್ಯ ಇಲಾಖೆಗಳನ್ನು

ಹೊರತುಪಡಿಸಿ ಉಳಿದ ಎಲ್ಲಾ ಇಲಾಖೆಗಳಲ್ಲಿ ತೆರವಾಗಿರುವ ಹುದ್ದೆಗಳನ್ನು ಭರ್ತಿ ಮಾಡದಿರುವುದು ಸರ್ಕಾರದ ನಿರ್ಧಾರ ಎಂದು ಈ ರೀತಿ ಸ್ಥಗಿತಗೊಳಿಸಲು ಕಾರಣವೇನು? ಆರ್ಥಿಕ ಪರಿಸ್ಥಿತಿ ಕಳವಳಕಾರಿಯಾಗಿದೆ ಎಂಬುದು ಒಂದು, ಎರಡನೆಯದು ಏನೆಂದರೆ ಪಕ್ಷದಲ್ಲಿ ಆಂತರಿಕ ಜಗಳಗಳು ಆದ್ದರಿಂದ ಸರ್ಕಾರದ ಕಡೆ ತಾವು ಗಮನ ಕೊಡುವುದು ಹಿಂದಕ್ಕೆ ಹೋಗಿದೆ. ಈ ಪರಿಸ್ಥಿತಿ ಅನುಸರಿಸಿ ಅಧಿಕಾರಿಗಳು ಜಡತ್ವ ವಹಿಸಿ ತೆರಿಗೆ ವಸೂಲಿ ಮಾಡುವುದರಲ್ಲಿ ಸರ್ಕಾರ ತೀವ್ರವಾಗಿ ಹಿಂದೆ ಬಿದ್ದಿದೆ ಆದ್ದರಿಂದ ನಿಮ್ಮ ಖಜಾನೆ ಖಾಲಿಯಾಗಿರುವುದರಲ್ಲಿ ಸಂಶಯವೇ ಇಲ್ಲ. ಇವತ್ತು ಅನೇಕ ಸಚಿವರು ಹೇಳುತ್ತಿಲ್ಲವೋ, ನಮ್ಮಲ್ಲಿ ಉಸಿರುಗಟ್ಟುವ ವಾತಾವರಣ ಪಕ್ಷದಲ್ಲಿ ನಿರ್ಮಾಣವಾಗಿದೆ ಅಂದರೆ ಪಕ್ಷದ ಸಂಘಟನೆಯಲ್ಲಿ ವ್ಯತ್ಯಾಸ ಆಗಿರುವ ಪರಿಸ್ಥಿತಿ ಒಂದು ಕಡೆಯಾದಾಗ ಸರ್ಕಾರದ ಆಡಳಿತಕ್ಕೆ ಏಟು ಬಿದ್ದಿದೆ.

2.00 ಪಿ.ಎಂ

ಒಂದು ಕಡೆ ಆಡಳಿತ ಪಕ್ಷದಲ್ಲಿಯೇ ಒಂದು ರೀತಿಯ ಗೊಂದಲ ವಾತಾವರಣ ನಿರ್ಮಾಣ ಆಗಿರುವಾಗ ಆ ಪಕ್ಷದ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ನೀವು ಗಮನ ಕೊಟ್ಟು ಇಲ್ಲಿ ಆಡಳಿತದ ಬಗ್ಗೆ ಬಹಳ ಅಪಾಯಕಾರಿಯಾದಂತಹ ವ್ಯವಸ್ಥೆ ಆಗಿದೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಇಲ್ಲೇ ಇದ್ದಾರೆ. ಸಿಂಧ್ಯರವರು ನಮಗೆ ಉಸಿರು ಕಟ್ಟುವಂತಹ ವಾತಾವರಣ ನಿರ್ಮಾಣ ಆಗಿದೆ ಎಂದು ಹೇಳಿ ರಾಜಭವನಕ್ಕೆ ಹೋಗಿ ಬಂದಿದ್ದಾರೆ. ರಾಜೀನಾಮೆ ಕೊಡುತ್ತಾರೆಂದು ಒಂದು ಸುದ್ದಿ ಹಬ್ಬಿತ್ತು. ಇದೆಲ್ಲಾ ಏನು ಎನ್ನತಕ್ಕ ಪ್ರಶ್ನೆಯನ್ನು ಮಾಡಿದಾಗ, ಇದು ಏನಾಗುತ್ತದೆ ಎಂದರೆ ಸರ್ಕಾರದ ಮೇಲೆ ಬಹಳ ಪರಿಣಾಮ ಬೀಳುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅತ್ಯಂತ ಕಳಕಳಿಯ ಮನವಿ ಮಾಡುತ್ತಿದ್ದೇನೆ. ನಿಮ್ಮ ಸಚಿವ ಸಂಪುಟದ ಸಚಿವರೊಬ್ಬರು ನಮಗೆ ಉಸಿರು ಕಟ್ಟುವಂತಹ ವಾತಾವರಣ ಇದೆ ಎಂದು ಹೇಳಿದಾಗ ತಾವು ದೆಹಲಿಯಲ್ಲಿ ಹೇಳಿದ ಒಂದು ಮಾತು ಓದಿದೆ. ಅದು ಏನೇ ಇರಲಿ. ಉಸಿರು ಕಟ್ಟುವವರು ಒಳ್ಳೆಯ ಗಾಳಿಯನ್ನು ಪಡೆಯಿರಿ ಎಂದು ಹೇಳಿದಿರಿ. ಅದು ನಿಮ್ಮ ಚಾಣಕ್ಯತನದ ಮಾತು. ಬಹಳ ಚೆನ್ನಾಗಿ ಆ ಮಾತನ್ನು ಹೇಳುತ್ತೀರಿ. ನಿಮ್ಮ ಬುದ್ಧಿವಂತಿಕೆಯ ಬಗ್ಗೆ ನಾನು ನನ್ನ ಕೆಲವು ಸ್ನೇಹಿತರ ಜೊತೆ ಮಾತನಾಡುವಾಗ ದೆಹಲಿಯಲ್ಲಿ ಎಂತಹ ಮಾತನ್ನು ಆಡಿದ್ದಾರೆ ಎಂದು ನಿಮ್ಮ ಬಗ್ಗೆ ಶಹಭಾಷ್‌ಗಿರಿಯನ್ನು ಕೊಟ್ಟಿದ್ದಾರೆ. ಆದರೆ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ ಈ ವಾತಾವರಣ ನಿಮ್ಮ ಪಕ್ಷದಲ್ಲಿ ನಿರ್ಮಾಣ ಆಗಿದೆ. ಮಂತ್ರಿಗಳಲ್ಲಿ ಗೊಂದಲ ಇದೆ, ಪಾರ್ಟಿಯಲ್ಲಿ ಗೊಂದಲ ಇದೆ. ಇದನ್ನು ಸರಿಪಡಿಸತಕ್ಕ ದೃಷ್ಟಿಯಲ್ಲಿ ನೀವು ಅಲ್ಲಿ ಹೋದಾಗ ಆಡಳಿತ ಕುಸಿಯುತ್ತಿದೆ. ಅದಕ್ಕೆ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ ಆಡಳಿತ ಕುಸಿಯದ ರೀತಿಯಲ್ಲಿ ಮಾಡಿ.

ಶ್ರೀ ಜೆ.ಎಚ್. ಪಟೇಲ್ (ಮುಖ್ಯಮಂತ್ರಿಗಳು) : ಎಲ್ಲೋ ಹೋಗಿ ದಾರಿ ತಪ್ಪಿ ಹೋಗಿದೆ ಚರ್ಚೆ. ಇದು ಅಜರ್ನ್‌ಮೆಂಟ್ ಮೋಷನ್‌ಗೆ ಬರುವಂತಹ ಚರ್ಚೆಯೇ ಅಲ್ಲ. ಆದರೂ ಸಹ ದೇಶದ ಹಿತದೃಷ್ಟಿಯಿಂದ ಆರ್ಥಿಕ ಪರಿಸ್ಥಿತಿ ಬಗ್ಗೆ ಅವರು ಚರ್ಚೆ ಮಾಡಿದ್ದಾರೆ. ಚರ್ಚೆ ಆಗಲಿ ಎಂದು ಹೇಳಿ

ಇದು ಅಜರ್ನ್‌ಮೆಂಟ್ ಮೋಷನ್ ಕೆಳಗಡೆ ಬರುವುದಿಲ್ಲ. ಆದರೂ ಹೇಳುವುದು ಹೇಳಲಿ, ಉತ್ತರ ಕೊಡಲು ನಮ್ಮಲ್ಲಿ ಸಾಕಷ್ಟು ಸತ್ಯಾಂಶಗಳು ಇರುವಾಗ, ಇದು ಯಾವುದೋ ಇನ್ನೊಂದು ಹೆಡ್‌ನಲ್ಲಿ ಬರಲಿ ಎಂದು ಅದಕ್ಕೂ ಒಪ್ಪಿಸಬಹುದಾಗಿತ್ತು. ಇದನ್ನು ಎಲ್ಲಾ ಕೇಳಿದ್ದೇವೆ. ಇದರ ಜೊತೆಗೆ ಕೂಡಿದ ಹಾಗೆ ಅವರೂ ಹೇಳಿದ್ದಾರೆ. ಮಾನ್ಯ ಮೊಯಿಲಿಯವರೂ ಹೇಳಿದ್ದಾರೆ. which is one of the most relevant points which I have noticed, ಈಗ ಮಾನ್ಯ ಯಡಿಯೂರಪ್ಪನವರೂ ಹೇಳಿದ್ದಾರೆ. ಅದಕ್ಕೆ ಮಾನ್ಯ ಅರ್ಥ ಸಚಿವರು ಉತ್ತರ ಹೇಳುತ್ತಾರೆ. ಕೆಲಸ ಆಗಿಲ್ಲ ಎಂದರೆ ಎಲ್ಲಿ ಆಗಿದೆ? ಆಗಲಿಲ್ಲ ಎಂದರೆ ಏಕೆ ಆಗಲಿಲ್ಲ? ಹಣಕಾಸಿನ ಪರಿಸ್ಥಿತಿ ಬಹಳ ಸರ್‌ಪ್ಲಸ್ ಇದೆ ಎಂದು ತಾವು ಹೇಳಿದಿರಿ. ಸುಭದ್ರವಾಗಿದೆ. ಸಾಲ ತೆಗೆದುಕೊಂಡು ಬರದೇ ಮ್ಯಾನೇಜ್ ಮಾಡುವ ಸ್ಥಿತಿಯಲ್ಲಿದ್ದೇವೆ. ಅದನ್ನು ಅವರು ಹೇಳುತ್ತಾರೆ. ಅದಕ್ಕೆ ಬೇರೆ ಬೇರೆ ವಿಷಯಗಳನ್ನು ಚರ್ಚಿಸುವುದು ಬೇಡ. ಇದು ನೋ ಕಾನ್‌ಫಿಡೆನ್ಸ್ ಕೆಳಗಡೆ ಚರ್ಚೆ ಆದಾಗ ಅಥವಾ ಗವರ್ನರ್ಸ್ ಅಡ್ರೆಸ್ ಕೆಳಗಡೆ ಚರ್ಚೆ ಆದಾಗ ಅವಕ್ಕೆಲ್ಲಾ ಉತ್ತರ ಕೊಡಬಹುದು. We will confine to present economic and financial situation of the Government.

+ ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ವೀರಪ್ಪ ಮೊಯಿಲಿಯವರು, ಮಾನ್ಯ ಯಡಿಯೂರಪ್ಪನವರು ರಾಜ್ಯದ ಆರ್ಥಿಕ ಪರಿಸ್ಥಿತಿ ಎಲ್ಲಾ ಕೆಟ್ಟು ಹೋಗಿದೆ, ಬಿಲ್ ಕೊಡುವುದಕ್ಕೂ ದುಡ್ಡು ಕೊಡದೇ ಇರುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ ಎಂದು ಹೇಳಿದರು. ಸುಮಾರು 800, 900, 1000 ಕೋಟಿ ರೂಪಾಯಿಗಳ ಬಿಲ್ ಬಾಕಿ ಉಳಿದಿದ್ದಾವೆ. ಹಾಗಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿ ಇವತ್ತು ಬಹಳ ಹದಗೆಟ್ಟು ಹೋಗಿದೆ ಎನ್ನುವಂತಹ ಮಾತನ್ನು ಆಡಿದ್ದಾರೆ. ಪತ್ರಿಕೆಗಳಲ್ಲಿ ವಿಚಾರ ಬಂದಿದೆ. ಹದಗೆಟ್ಟಿದೆ, ಇಲ್ಲ ಎಂದು ನಾನು ಹೇಳುತ್ತಿಲ್ಲ. ಕಂಟ್ರಾಕ್ಟರ್ಸ್‌ಗಳು ಬಿಲ್ ಕೊಟ್ಟಿಲ್ಲ ಕೆಲವು ಕಡೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಕೊಡಬೇಕು ಎಂದು ಹೇಳಿ ಒತ್ತಾಯವನ್ನು ಕೂಡ ಮಾಡುತ್ತಿದ್ದಾರೆ. ಈ ಪೆಂಡಿಂಗ್ ಬಿಲ್ಸ್ ಎನ್ನತಕ್ಕದ್ದು ಇದು ಎಲ್ಲಾ ಕಾಲದಲ್ಲೂ ನಡೆದುಕೊಂಡು ಬಂದಿರತಕ್ಕದ್ದು. ಏಕೆಂದರೆ ಒಂದು ಪ್ರಾಜೆಕ್ಟ್ ಒಂದು ವರ್ಷದಲ್ಲಿ ಅಥವಾ ಎರಡು ವರ್ಷದಲ್ಲಿ ಮುಗಿಯುವುದಿಲ್ಲ, ನಡೆದುಕೊಂಡು ಹೋಗುತ್ತಿರುತ್ತದೆ. ಕೆಲಸಗಳನ್ನೆಲ್ಲಾ ಅಪ್ರೂವ್ ಮಾಡಿಕೊಂಡು ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುತ್ತಾರೆ. ನಾವು ಬಜೆಟ್‌ನಲ್ಲಿ ಒಂದು ವರ್ಷದಲ್ಲಿ ಎಷ್ಟು ಹಣ ಖರ್ಚು ಮಾಡುವುದಕ್ಕೆ ಸಾಧ್ಯ ಆಗುತ್ತದೆ, ಅದನ್ನು ನಾವು ಅನುದಾನದಲ್ಲಿ ಇಟ್ಟುಕೊಂಡಿದ್ದೇವೆ. ನಮ್ಮ ಅನುದಾನ ಇಟ್ಟುಕೊಂಡಿರುವುದಕ್ಕಿಂತಲೂ ಹೆಚ್ಚು ಕೆಲಸವನ್ನು ಅವರು ಮಾಡಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ 1997-98ಕ್ಕೆ ಗ್ರಾಂಟ್ಸ್ ಇರತಕ್ಕದ್ದು 204 ಕೋಟಿ ರೂಪಾಯಿಗಳು. ನಾವು ಮಾರ್ಚ್‌ವರೆಗೆ ಖರ್ಚು ಮಾಡಿರತಕ್ಕಂಥ ಹಣ 185 ಕೋಟಿ 85 ಲಕ್ಷ ರೂಪಾಯಿಗಳು. 204 ಕೋಟಿ ರೂಪಾಯಿಗಳಲ್ಲಿ 185 ಕೋಟಿ 85 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಇನ್ನೂ 19 ಕೋಟಿ ರೂಪಾಯಿಗಳನ್ನು ನಾವು ಅನುದಾನದಲ್ಲಿ ಕೊಡಬೇಕು. ನಾನು ಲೆಕ್ಕವನ್ನು ನೋಡಿ ಹೇಳುತ್ತಿದ್ದೇನೆ. ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಟ್ ಮಾಡಿದ್ದರೆ ಆ ಮಾತು ಬೇರೆ.

ಶ್ರೀ ಸಿದ್ಧರಾಮಯ್ಯ : ಜನರಲ್ ಬಜೆಟ್ ಡಿಸ್ಕಷನ್‌ಗೆ ಉತ್ತರ ಕೊಡುವಾಗಲೇ ನಾನು ಹೇಳಿದ್ದೇನೆ. ಅದರ ಮೇಲೆ ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಿದ್ದೇನೆ. ನಮ್ಮ ಪ್ಲಾನ್ ಎಷ್ಟು ಇತ್ತು? 4545 ಕೋಟಿ ರೂಪಾಯಿಗಳಲ್ಲಿ 4239 ಕೋಟಿ ರೂಪಾಯಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಇನ್ನೂ ಕೂಡ 226 ಕೋಟಿ ರೂಪಾಯಿಗಳಷ್ಟು ಪ್ಲಾನ್ ಕಟ್ ಆಗಿದೆ. ಅದರಲ್ಲಿ ನೀರಾವರಿಗೆ 68 ಕೋಟಿ ರೂಪಾಯಿ ಪ್ಲಾನ್‌ಗೆ ಕಟ್ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇರೆ ಒಂದು ವ್ಯತ್ಯಾಸ ಆಗಬಾರದು.

ಶ್ರೀ ಸಿದ್ಧರಾಮಯ್ಯ : ವ್ಯತ್ಯಾಸ ಆಗಿದ್ದರೆ ಆಮೇಲೆ ನೀವು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು 204 ಕೋಟಿ ರೂಪಾಯಿ ನಿಗದಿ ಮಾಡಿದ್ದರೆ ಈಗ ಖರ್ಚು ಮಾಡುವುದಕ್ಕೆ 185 ಕೋಟಿ ಆಗಿದೆ. ಯಾವಾಗ ನೀವು ರಿವೈಸ್ಡ್ ಪ್ಲಾನ್ ಮಾಡಿದ ಮೇಲೆ ಇಂಟಿಮೇಷನ್ ಕನ್ಸರ್ನ್ಡ್ ಡಿಪಾರ್ಟ್‌ಮೆಂಟಿಗೆ ಮಾಡುತ್ತೀರಿ. ಈ ಸಾರಿ ನಾವು ಪ್ಲಾನ್ ಔಟ್ ಲೇನಲ್ಲಿ ಕಟ್ ಮಾಡಿದ್ದೇವೆ. ನೀವು ಹಣ ಇಷ್ಟೇ ಖರ್ಚು ಮಾಡಬೇಕು ಎಂದಾಗ ಅದಕ್ಕಿಂತ ಜಾಸ್ತಿ ಏನೋ ಎರಡು ಕೋಟಿ ಮೂರು ಕೋಟಿ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 282 ಕೋಟಿ ರೂಪಾಯಿಗಳನ್ನು ನಾವು ಇಲ್ಲಿ ಅಪ್ರೂಲ್ ಮಾಡಿರುವುದು. ಅಷ್ಟು ಹೇಗೆ ಕಡಿಮೆ ಆಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಮೇಲೆ ನಿಮ್ಮ ನೀರಾವರಿ ಮಂತ್ರಿಗಳು ಇಲ್ಲೇ ಇದ್ದಾರೆ. ಅವರು ಸ್ವತಃ ಹೇಳಿದ್ದಾರೆ. 1249 ಕೋಟಿ ರೂಪಾಯಿ ನಾವು ನೀರಾವರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನಾನು ನೀರಾವರಿಯ ವಿಚಾರಕ್ಕೆ ಇನ್ನೂ ಬಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರೇನು ಹೇಳಿದ್ದಾರೆ ಎಂದರೆ ಬಿಡುಗಡೆ ಆಗಿದ್ದೇ ನನಗೆ 781 ಕೋಟಿ ರೂಪಾಯಿ. ನನ್ನ ಹತ್ತಿರವೇ 226 ಕೋಟಿ ರೂಪಾಯಿ ಬಿಲ್ ಪೆಂಡಿಂಗ್ ಇದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಗ್ರಾಂಟ್ ಅಲ್ಲದೇ ಬೇರೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಕಾಶ್ ಅವರೂ ಇದ್ದರು. ಆಗಲೇ ಹೇಳಿದ್ದಾರೆ. ಬಜೆಟೆಡ್ ಪ್ರಾವಿಷನ್‌ನಲ್ಲಿರತಕ್ಕ ಹಣ ಏನು ಖರ್ಚಾಗಿದೆ, ಅದರದ್ದೇ ಪಾವತಿ ಆಗಿಲ್ಲ. ಅದಕ್ಕಿಂತ ಹೆಚ್ಚು ಜನ ಖರ್ಚು ಮಾಡುತ್ತಾರೆ. ಡೆವಲಪ್‌ಮೆಂಟ್‌ನಲ್ಲಿ ಹೆಚ್ಚಿಗೆ ಹಣ ಖರ್ಚು ಮಾಡುವ ಸಾಧ್ಯತೆ ಇದೆ. ಅದರ ಬಗ್ಗೆ ನಾನು ವಿಚಾರಿಸುತ್ತಾ ಇಲ್ಲ. ಇವತ್ತು ಯಾವುದೇ ಒಂದು ಕೆಲಸಕ್ಕೆ ನೀವು 100 ಕೋಟಿ ರೂಪಾಯಿ ಇಟ್ಟರೆ 100 ಕೋಟಿ ರೂಪಾಯಿಯನ್ನೂ ನೀವು ಬಿಡುಗಡೆ ಮಾಡಿಲ್ಲ ಎಂಬುದೇ ನಮ್ಮ ವಾದ. I am not asking if you have spent Rs 120 crores.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಒಟ್ಟು ಗ್ರಾಂಟ್ ಇರತಕ್ಕದ್ದು, 1997-98ನೇ ಸಾಲಿಗೆ ಲೋಕೋಪಯೋಗಿ ಇಲಾಖೆಯ ಕೆಲಸಗಳಿಗೆ ಅಂದರೆ ರಸ್ತೆಗಳು, ಸೇತುವೆಗಳು, ಕಟ್ಟಡಗಳು,

ಪ್ಲಾನ್ ಮತ್ತು ನಾನ್ ಪ್ಲಾನ್ ಎರಡೂ ಸೇರಿ 204 ಕೋಟಿರೂಪಾಯಿಗಳು ಒಂದು ವರ್ಷಕ್ಕೆ. 185 ಕೋಟಿ 84 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇವೆ. ಇಲ್ಲೇನೂ 100 ಕೋಟಿ ರೂಪಾಯಿ ಉಳಿದು ಹೋಗಿಲ್ಲ. ಇದರಲ್ಲಿ ಏನಾಗುತ್ತದೆ? ಎಲ್‌ಓಸಿ ಬಿಡುಗಡೆ ಮಾಡಿರತಕ್ಕದ್ದು ನಾನು ಹೇಳುತ್ತಿರುವುದು. ರಸ್ತೆ ಮತ್ತು ಸೇತುವೆಯಲ್ಲಿ ಅನುದಾನ 45 ಕೋಟಿ ರೂಪಾಯಿಗಳು. ಯೋಜನೆಯಲ್ಲಿ 46 ಕೋಟಿ 26 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ, ಯೋಜನೇತರದಲ್ಲಿ 75 ಕೋಟಿ 18 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಕಟ್ಟಡಗಳಿಗೆ ಯೋಜನೆಯಲ್ಲಿ 38 ಕೋಟಿ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಯೋಜನೇತರದಲ್ಲಿ 26 ಕೋಟಿ 21 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. 1997-98ನೇ ಸಾಲಿನಲ್ಲಿ ಯೋಜನೆ ಮತ್ತು ಯೋಜನೇತರಗಳಲ್ಲಿ ಒಟ್ಟು 204 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು, 185 ಕೋಟಿ 84 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆದರೆ, ಅನುದಾನದ ಪ್ರಕಾರ ಯೋಜನೇತರದಲ್ಲಿ 19 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು, ಮಾಡಿಲ್ಲ. ಆ ಹಣವನ್ನು ಈ ತಿಂಗಳು ಬಿಡುಗಡೆ ಮಾಡುತ್ತಿದ್ದೇವೆ. ಇನ್ನು ಪೆಂಡಿಂಗ್ ಬಿಲ್‌ಗಳ ಬಗ್ಗೆ ಹೇಳುವುದಾದರೆ, ಒಂದು ವರ್ಷಕ್ಕೆ $^{1}/_{3}$ ಕೆಲಸ ಇಟ್ಟುಕೊಂಡು ಪ್ರಾರಂಭಿಸಬೇಕೆಂದು ಹೇಳಿದ್ದೆವು. ಆದರೆ, ಆ ವರ್ಷ $^{1}/_{3}$ ಗ್ರಾಂಟ್ಸ್ ಇದ್ದರೆ ಅವರು $^{2}/_{3}$ ಕೆಲಸ ಮಾಡಿರುತ್ತಾರೆ. ಇನ್ನೊಂದು ಯಾವುದೋ ಟೆಂಡರ್ಡ್ ವರ್ಕ್ ಒಂದೆರಡು ವರ್ಷಗಳಲ್ಲಿ ಮುಗಿಯಬೇಕಾಗಿರುತ್ತದೆ. ಎಷ್ಟು ಗ್ರಾಂಟ್ಸ್ ಇರುತ್ತದೆಯೋ ಅದಕ್ಕಿಂತಲೂ ಜಾಸ್ತಿ ಕೆಲಸ ಮಾಡಿರುತ್ತಾರೆ. ಇದು ಸರ್ಕಾರದಲ್ಲಿ ಪೆಂಡಿಂಗ್ ಬಿಲ್ಸ್ ಆಗಿ ಉಳಿದುಕೊಳ್ಳುತ್ತದೆ. ಆದರೆ, ನಾವು ಇಟ್ಟಿರುವ ಗ್ರಾಂಟ್ಸ್ ಕೊಟ್ಟಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು, ಇದು ಸರಿಯಲ್ಲ. ಪಿಡಬ್ಲ್ಯೂಡಿ ಪೆಂಡಿಂಗ್ ಬಿಲ್ಸ್ ದಿನಾಂಕ 1.4.1998ಕ್ಕೆ ಸುಮಾರು 96 ಕೋಟಿ ರೂಪಾಯಿಗಳಿವೆ. ಇದರಲ್ಲಿ ಅನುದಾನದ ಪ್ರಕಾರ ಕೊಡಬೇಕಾಗಿರುವುದು ಕೇವಲ 19 ಕೋಟಿ ರೂಪಾಯಿಗಳು ಮಾತ್ರ. ಕಳೆದ ವರ್ಷ ಅಂದರೆ 1.4.1997ಕ್ಕೆ 34 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇತ್ತು. This is carry over. Every year it is going on. In a developing State, ಕೆಲಸಗಳು ಒಂದೆರಡು ವರ್ಷಗಳಲ್ಲಿ ಮುಗಿಯುವುದಿಲ್ಲ, ಟೆಂಡರ್ ವರ್ಕ್ ಇರುತ್ತದೆ, ಬಿಲ್ಡಿಂಗ್ಸ್ ಕಾರ್ಯ ಇರುತ್ತದೆ, 1/3 ಗ್ರಾಂಟ್ಸ್ ಕೊಟ್ಟಿರುತ್ತೇವೆ, ಕೆಲಸ ಮಾರ್ನಾಲ್ಕು ವರ್ಷಗಳಲ್ಲಿ ಮುಗಿಯಬೇಕಿರುತ್ತದೆ, ಕೆಲವು ಕಡೆಗಳಲ್ಲಿ ಜಾಸ್ತಿ ಕೆಲಸ ಮಾಡಿರುತ್ತಾರೆ, ರಸ್ತೆಗಳ ಕೆಲಸ ಜಾಸ್ತಿ ಮಾಡಿರುತ್ತಾರೆ, ಈ ತರಹದ ಕೆಲಸದಿಂದ ಪೆಂಡಿಂಗ್ ಬಿಲ್ಸ್ ಆಗಿ ಉಳಿದುಕೊಂಡಿದೆಯೇ ವಿನಾ ಸರ್ಕಾರ ಆರ್ಥಿಕವಾಗಿ ದಿವಾಳಿಯಾಗಿದೆ, ಸರ್ಕಾರದ ಬಳಿ ದುಡ್ಡು ಇಲ್ಲವೆಂದು ಹೇಳುವ ಮಾತು ರಾಜಕೀಯ ಪ್ರೇರಿತವಾದುದೇ ಹೊರತು ಇದು ಸತ್ಯದಿಂದ ಕೂಡಿರುವಂತಾದ್ದಲ್ಲ. ಎರಡನೆಯದಾಗಿ, ಭಾರಿ ನೀರಾವರಿ ಯೋಜನೆಯಲ್ಲಿ 283 ಕೋಟಿ ರೂಪಾಯಿ, ಯೋಜನೇತರದಲ್ಲಿ 309 ಕೋಟಿ ರೂಪಾಯಿಗಳನ್ನು ಒದಗಿಸಿದ್ದು, ಯೋಜನೆ ಮತ್ತು ಯೋಜನೇತರದಲ್ಲಿ ಕಟ್ ಆದನಂತರ ಯೋಜನೆಯಲ್ಲಿ 250 ಕೋಟಿ, ಯೋಜನೇತರದಲ್ಲಿ 274 ಕೋಟಿ ರೂಪಾಯಿಗಳಾಗಿವೆ. 1997-98ರಲ್ಲಿ ಯೋಜನೆಯಲ್ಲಿ 250 ಕೋಟಿ ರೂಪಾಯಿಗಳಿದ್ದರೂ ನಾವು 258 ಕೋಟಿ ರೂಪಾಯಿಗಳಷ್ಟು ಎಲ್.ಓ.ಸಿ.ಯನ್ನು ಬಿಡುಗಡೆ ಮಾಡಿದ್ದೇವೆ. ಅಲ್ಲದೆ, ಯೋಜನೆಯಲ್ಲಿ 250 ಕೋಟಿ ರೂಪಾಯಿಗಳಿಗಿಂತ ಎಂಟು ಕೋಟಿ

ರೂಪಾಯಿಗಳಷ್ಟು ಹೆಚ್ಚು ಹಣವನ್ನು ಬಿಡುಗಡೆ ಮಾಡಿದ್ದೇವೆ. ಅದೇ ರೀತಿ ಯೋಜನೇತರದಲ್ಲಿ 274 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು. 268 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ, ಬಿಡುಗಡೆಯಾಗಬೇಕಾದ ಒಟ್ಟು ಆರು ಕೋಟಿ ರೂಪಾಯಿಗಳು ಮಾತ್ರ 1997-98ರ ಗ್ರಾಂಟ್ಸ್ ಪ್ರಕಾರ ಯೋಜನೇತರದಲ್ಲಿ ಬಾಕಿ ಉಳಿದುಕೊಂಡಿದೆ. ಇದರಲ್ಲಿ 150 ಕೋಟಿ ರೂಪಾಯಿ ಕೆ.ಬಿ.ಜೆ.ಎಲ್.ನಲ್ಲಿ ನಾವು ತೆಗೆದುಕೊಳ್ಳುವ ಸಾಲಕ್ಕೆ ಬಡ್ಡಿ ಕೂಡ ಬಜೆಟ್‌ನಲ್ಲೇ ಬರುತ್ತದೆ, ಅವರ ಡಿಮ್ಯಾಂಡ್ ಪ್ರಕಾರ 142 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಹಾಗೆಯೇ, ನಬಾರ್ಡ್‌ಗೆ 25 ಕೋಟಿ ರೂಪಾಯಿಗಳಷ್ಟು ಬಡ್ಡಿ ಹಣ ಏನು ಕೊಡಬೇಕು, ಅದೂ ಕೂಡ ಬಜೆಟ್‌ನಲ್ಲೇ ಬರುತ್ತದೆ, ಅದನ್ನೂ ಬಿಡುಗಡೆ ಮಾಡಲಾಗಿದೆ. ಅಂದ ಮೇಲೆ ಗ್ರಾಂಟ್ಸ್‌ನಲ್ಲಿ ಎಲ್ಲಿ ದುಡ್ಡು ಉಳಿದುಕೊಂಡಿದೆಯೆಂಬುದನ್ನು ಹೇಳಿ ನೋಡೋಣ. ಆರು ಕೋಟಿ ರೂಪಾಯಿಗಳು ಮಾತ್ರ ಯೋಜನೇತರದಲ್ಲಿ ಉಳಿದಿದೆ. ಬದಲಾಗಿ ಸರ್ಕಾರದಲ್ಲಿ ಡಿಸಿಪ್ಲಿನ್ ಇಲ್ಲ, ಹಣಕಾಸು ನಿರ್ವಹಣೆ ಸರಿಯಿಲ್ಲವೆಂದರೆ ಏನರ್ಥ? ನೀವು ಕೇಳಿರುವುದರಿಂದಲೇ ನಾನು ಇದನ್ನೆಲ್ಲಾ ಉತ್ತರಿಸುತ್ತಿದ್ದೇನೆ. ಕೆ.ಬಿ.ಜೆ.ಎಲ್.ನಲ್ಲಿ ನಾನು ಎಲ್.ಓ.ಸಿ.ಕೊಡುವುದಿಲ್ಲ, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಕೊಡುತ್ತರಾದ್ದರಿಂದ ಅದಕ್ಕೆ ಅವರು ಉತ್ತರಿಸುತ್ತಾರೆ. ಬಜೆಟ್‌ನಲ್ಲಿ ಎಷ್ಟು ಹಣ ಇದೆ, ಯೋಜನೆಯಲ್ಲಿ ಎಷ್ಟು ಕಟ್ ಆಗಿದೆ. ಅದಕ್ಕನುಗುಣವಾಗಿ ಮಾಡಿದ್ದೇವೆ. ಗ್ರಾಮೀಣಾಭಿವೃದ್ಧಿಯಲ್ಲಿ ಅಗತ್ಯಕ್ಕಿಂತ ಹೆಚ್ಚು ಹಣ ಕೊಟ್ಟಿದ್ದೇವೆ. Rs. 110 crore is pending with all the Zilla Panchayats. ಕುಡಿಯುವ ನೀರಿಗೋಸ್ಕರ, ಬೇರೆ ಬೇರೆ ಕೆಲಸಗಳಿಗೋಸ್ಕರ 110 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಇವೊತ್ತು ಎಲ್ಲಾ ಜಿಲ್ಲಾ ಪಂಚಾಯಿತಿಗಳ ಹತ್ತಿರ ದುಡ್ಡು ಇದೆ. ತಾವು ಹೇಳಿರುವಂತೆ ಆರ್ಥಿಕ ಪರಿಸ್ಥಿತಿ ಕೆಟ್ಟು ಹೋಗಿದೆಯೇ? ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ, ದಿವಾಳಿಯಾಗಿದೆ ಮುಂತಾದ ಯಾವ್ಯಾವ ಮಾತುಗಳನ್ನು ಹೇಳಿದ್ದಾರೋ ಅದರಲ್ಲಿ ಸತ್ಯವಿಲ್ಲ. ಇನ್ನು ಹೆಚ್.ಕೆ.ಡಿ.ಬಿ. ಬಗ್ಗೆ ಹೇಳುವುದೇನೆಂದರೆ, ಸದರಿ ಮಂಡಳಿಯಲ್ಲಿ 60 ಕೋಟಿ ರೂಪಾಯಿಗಳಿದ್ದು, ಮಂಡಳಿ ಹೇಗೆ ನಡೆಯುತ್ತಿದೆಯೆಂದರೆ ಆ ವರ್ಷ ಆಕ್ಷನ್ ಪ್ಲಾನ್ ಆಗದೆ, ದುಡ್ಡು ಬಿಡುಗಡೆಯಾಗದಿದ್ದುದರಿಂದ ಪಿ.ಡಿ. ಅಕೌಂಟ್‌ನಲ್ಲಿಟ್ಟು ಹಣ ಖರ್ಚು ಮಾಡಬೇಕೆಂದು ಅವರಿಗೆ ಪ್ರಾವಿಷನ್ ಮಾಡಿದ್ದೇವೆ. ಅದರಲ್ಲಿ ಈ ಸಾರಿ ನಾವು ಎಸ್.ಸಿ.ಪಿ.ಯನ್ನು ತೆಗೆದು ಹಾಕುತ್ತೇವೆ, ಉಳಿದ ಹಣವನ್ನು ಬಿಡುಗಡೆ ಮಾಡುತ್ತೇವೆ, ಎಸ್.ಸಿ.ಪಿ.ಯನ್ನು ಪೂಲ್ ಮಾಡುತ್ತೇವೆ. ಆ ರೀತಿ ಪೂಲ್ ಆದ ಹಣ ಪರಿಶಿಷ್ಟ ಜಾತಿ, ವರ್ಗದವರ ಏಳಿಗೆಗಾಗಿ ಹಮ್ಮಿಕೊಂಡ ಬೇರೆ ಬೇರೆ ಕಾರ್ಯಕ್ರಮಗಳಿಗೆ, ಅಂದರೆ ಜಮೀನುಗಳಿಗೆ ನೀರು ಒದಗಿಸುವುದು, ಶಿಕ್ಷಣಕ್ಕಾಗಿ ಖರ್ಚು ಮಾಡುವಂತಾದ್ದು, ಸಿಂಗಲ್ ವಿಂಡೋ ಏಜೆನ್ಸಿ ಮುಖಾಂತರ ನಾನಾ ಕೆಲಸಗಳು ನಡೆಯುತ್ತವೆ. ಆದುದರಿಂದ, ಇವೊತ್ತು ಹೆಚ್.ಕೆ.ಡಿ.ಬಿ.ಯಲ್ಲಿ ಒಟ್ಟು 60 ಕೋಟಿ ರೂಪಾಯಿಗಳಿದ್ದರೆ, ಒಂದು ಸಲ 27 ಕೋಟಿ, ಇನ್ನೊಂದು ಸಲ 15 ಕೋಟಿ ಹೀಗೆ ಒಟ್ಟು 42 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಒಂದು ವೇಳೆ ಆ ವರ್ಷ ಖರ್ಚು ಮಾಡದೇ ಇದ್ದರೆ ಅದನ್ನು ಪಿ.ಡಿ.ಅಕೌಂಟ್‌ನಲ್ಲಿಟ್ಟುಕೊಂಡು ಹೆಚ್.ಕೆ.ಡಿ.ಬಿ.ಯಲ್ಲಾಗಲಿ, ಎಂಎಡಿಬಿಯಲ್ಲಾಗಲಿ ಖರ್ಚು ಮಾಡಬೇಕೆಂದು ಹೇಳಿದ್ದೇವೆ. ಅಲ್ಲದೆ, ದುಡ್ಡು ಬಹಳ ಸಲ ತಡವಾಗಿ

ಬರುತ್ತದೆ ಎಂದು ಅವರು ನಮ್ಮ ಹತ್ತಿರ ಬಂದು ಕೇಳಿದ್ದಾರೆ. ಇದರಲ್ಲಿ ಕೆಲಸ ಮಾಡಿದ ನಂತರವೇ ಹಣ ಬಿಡುಗಡೆಯಾಗುವುದು. ಹಿಂದಿನ ವರ್ಷಗಳ ಎಲ್ಲಾ ಕಾಲಗಳಲ್ಲಿ ಈ ರೀತಿ ಬಿಡುಗಡೆಯಾಗಬೇಕಾದ ಎಷ್ಟೆಷ್ಟು ಹಣ ಬಾಕಿ ಇತ್ತೆಂದು ನಾನು ಹೇಳುವುದಿಲ್ಲ. ಆಯಾ ಇಲಾಖೆಗಳ ಪ್ರಸ್ತಾಪ ಬಂದಾಗ ಎಷ್ಟು ಹಣ ಇತ್ತು, ಎಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಬಹಳ ಸ್ಪಷ್ಟವಾದ ಚಿತ್ರಣ ಕೊಡೋಣ. ಸಮಾಜ ಕಲ್ಯಾಣ, ಆರೋಗ್ಯ, ಶಿಕ್ಷಣ ಹೀಗೆ ಮೇಜರ್ ಡಿಪಾರ್ಟ್‌ಮೆಂಟ್‌ಗಳು ಯಾವ್ಯಾವುದು ಇವೆಯೋ ಅದ್ಯಾವುದಕ್ಕೂ ಕೂಡ ಪ್ಲಾನ್, ನಾನ್-ಪ್ಲಾನ್, ರಿವೈಸ್ಡ್ ಪ್ಲಾನ್ ಕಟ್ ಪ್ರಕಾರ ನಾವು ಏನು ಹೇಳಿದ್ದೇವೆಯೋ ಅದಕ್ಕನುಗುಣವಾಗಿ ಒಂದು ರೂಪಾಯಿ ಕಡಿಮೆಯಿಲ್ಲದಂತೆ ಎಲ್ಲವನ್ನೂ ಬಿಡುಗಡೆ ಮಾಡಿದ್ದೇವೆ. ಆದುದರಿಂದ, ಸರ್ಕಾರ ದಿವಾಳಿಯಾಗಿದೆ, ಟ್ರೆಜರಿ ಖಾಲಿ ಇದೆಯೆನ್ನುವುದರಲ್ಲಿ ಅರ್ಥವಿಲ್ಲ. ನಾನು ಇವೊತ್ತು ಆದ್ದೇಶ ಮಾಡಿರುವಂತೆ ಮಾರ್ಚಿ, 15ರೊಳಗಿರುವ ಎಲ್ಲಾ ಪೆಂಡಿಂಗ್ ಬಿಲ್ಸ್ ಅನ್ನು ಕೂಡ ಕ್ಲಿಯರ್ ಮಾಡಬೇಕೆಂದು ಹೇಳಿದ್ದೇನೆ. ಫೆಬ್ರವರಿವರೆಗೂ ಈಗ ಕ್ಲಿಯರ್ ಆಗಿದೆ. ಮಾರ್ಚಿ 15ರಿಂದ ಯಾವುವು ಸುಮಾರು 150 ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇದೆ, ಯಾವಾಗಲೂ ಒಂದನೇ ತಾರೀಖಿನಿಂದ ಹತ್ತನೇ ತಾರೀಖಿನವರೆಗೆ ಸಂಬಳ, ಗ್ರಾಂಟ್ಸ್, ಸಬ್ಸಿಡಿ, ಪೆನ್‌ಶನ್, ಇವುಗಳಿಗೆಲ್ಲಾ ಕೊಡುವುದು ನಡೆದುಕೊಂಡು ಹೋಗುತ್ತದೆ. ಇವೊತ್ತು ಅದನ್ನು ರೆಗ್ಯುಲೇಟ್ ಮಾಡುವುದಕ್ಕೋಸ್ಕರ ನೋಟಿಫಿಕೇಷನ್ ಕೊಟ್ಟಿರುವುದೇ ಹೊರತು ಬೇರಾವುದೇ ಕಾರಣಕ್ಕಲ್ಲ. ವೀರಪ್ಪ ಮೊಯಿಲಿಯವರು ಬಹಳ ವರ್ಷಗಳ ಕಾಲ ಹಣಕಾಸು ಮಂತ್ರಿಗಳಾಗಿದ್ದರು. ಅವರಿಗೆ ಗೊತ್ತಿದೆ. ಆದುದರಿಂದ, ಇವೊತ್ತು ನಾವು ಎಷ್ಟು ಗ್ರಾಂಟ್ಸ್ ಅನ್ನು ಬಜೆಟ್‌ನಲ್ಲಿ ಇಟ್ಟುಕೊಂಡಿದ್ದೇವೆಯೋ 1997-98ರಲ್ಲಿ ಎಲ್ಲಾ ಇಲಾಖೆಗಳಿಗೂ ಕೂಡ ರಿವೈಸ್ಡ್ ಪ್ಲಾನ್ ಕಟ್ ಪ್ರಕಾರ ನಾವು ಏನೋ ಹೇಳಿದ್ದೇವೆಯೋ ಅದಕ್ಕನುಗುಣವಾಗಿ ಹಣ ಬಿಡುಗಡೆ ಮಾಡಿದ್ದೇವೆ. ರಾಜ್ಯದ ಹಣಕಾಸು ಪರಿಸ್ಥಿತಿ ಚೆನ್ನಾಗಿದೆ, ಸುಭದ್ರವಾಗಿದೆ. ಸುಭದ್ರವಾಗಿದೆಯೆಂದ ಮಾತ್ರಕ್ಕೆ ಬಹಳ, ಸಾಕಾಗುವಷ್ಟು ಹಣವನ್ನು ಇಟ್ಟುಕೊಂಡಿದ್ದೇವೆಂಬ ಮಾತನ್ನು ಹೇಳುವುದಿಲ್ಲ. ನಾವು ಯಾವ್ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತೇವೆಂದು ಹೇಳಿದ್ದೇವೆಯೋ ಅದಕ್ಕನುಗುಣವಾಗಿ ನಾವು ಹಣವನ್ನು ಕೊಡುವ ಕೆಲಸ ಮಾಡಿದ್ದೇವೆ. ಆ ಕಾರಣದಿಂದ ಟ್ರೆಜರಿಯಲ್ಲಿ ಬಹಳ ಬಾಕಿ ಇರುವಂಥ ಬಿಲ್‌ಗಳೇನೂ ಉಳಿದಿಲ್ಲ. ಎಲ್ಲಾ ಚೆಕ್‌ಗಳು ಬೌನ್ಸ್ ಆಗಿದೆಯೆಂದಾಗಲೀ, ಸಂಬಳ ನಿಂತು ಹೋಗಿದೆಯೆಂದಾಗಲೀ ಆ ತರಹ ಯಾವುದೂ ಆಗಿಲ್ಲ. ಆದುದರಿಂದ, ಸರ್ಕಾರ ಹಣಕಾಸು ಇಲಾಖೆಯನ್ನು ಬಹಳ ದಕ್ಷತೆಯಿಂದ ನಿರ್ವಹಣೆ ಮಾಡಿದೆ. ಅವೊತ್ತು ಪ್ಲಾನ್‌ನಲ್ಲಿ ಏಕೆ ಕಟ್ ಆಯಿತು ? ಯಾವ ಕಾರಣಕ್ಕೋಸ್ಕರ ಕಟ್ ಆಯಿತು ? ಇವೆಲ್ಲವನ್ನೂ ನಾನು ಮತ್ತೊಮ್ಮೆ ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಈಗಾಗಲೇ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರಿಸುವಾಗಲೇ ಬಹಳ ದೀರ್ಘವಾಗಿ ತಿಳಿಸಿದ್ದೇನೆ. ಆದುದರಿಂದ, ಕೊಟ್ಟಿರುವ ಅಂಕಿ-ಅಂಶಗಳು ಸರಿಯಾಗಿವೆ. ಎಂ.ಎ.ಡಿ.ಬಿ.ಗೆ ಮೂರು ಕಂತುಗಳಲ್ಲಿ ಹಣ ಬಿಡುಗಡೆ ಮಾಡಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮೊನ್ನೆ ಎಂ.ಎ.ಡಿ.ಬಿ. ಸಭೆಯಾಯಿತು. ಸುಮಾರು 15 ಕೋಟಿ ರೂಪಾಯಿಗಳಷ್ಟು ಖೋತಾ ಆಗಿದೆಯೆಂದು....

ಶ್ರೀ ಸಿದ್ದರಾಮಯ್ಯ : ಖೋತಾ ಅಲ್ಲ, ಎಸ್.ಸಿ.ಪಿ.ಯಲ್ಲಿ ಕಟ್ ಮಾಡಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲ, ಅದಲ್ಲ, ಅದನ್ನು ಹೊರತುಪಡಿಸಿಯೇ ರೆಗ್ಯುಲರ್ ಹಣ ಕೊಡಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಉಪಾಧ್ಯಕ್ಷರೆ, ಕಳೆದ ನಾಲ್ಕನೇ ತಾರೀಖು ಶಿವಮೊಗ್ಗದಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಯ ಸಭೆಯಾಯಿತು. ಆ ಸಭೆಯಲ್ಲಿ ಕಳೆದ ವರ್ಷದ 15 ಕೋಟಿ ರೂಪಾಯಿ ಸರ್ಕಾರದಿಂದೇನು ಬರಬೇಕಾಗಿತ್ತು. ಅದು ಬರುವುದಿಲ್ಲವೆಂದು ತೀರ್ಮಾನವಾಯಿತು. ಇವರ ಪಕ್ಷದ ಅಧ್ಯಕ್ಷರೇ ಸರ್ಕಾರದಿಂದ ಬರಬೇಕಾದ 15 ಕೋಟಿ ಬಂದಿಲ್ಲ ಆದ್ದರಿಂದ ಇದನ್ನು ಕಟ್ ಮಾಡಿದ್ದೇವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಅದಕ್ಕಾಗಿ ವಿಶೇಷವಾದ ಸಭೆಯನ್ನು ಕರೆದು ಹಣಕಾಸು ಸಚಿವರನ್ನು, ಮುಖ್ಯಮಂತ್ರಿಯವರನ್ನು ಕರೆದು ಆ ಹಣವನ್ನು ಬಿಡುಗಡೆ ಮಾಡಿಸುವ ಪ್ರಯತ್ನ ಮಾಡಬೇಕು ಎಂದು ರೆಸಲ್ಯೂಷನ್ ಮಾಡಿದ್ದೇವೆ. ಒಂದು ವೇಳೆ ಆ ರೀತಿ ಕಟ್ ಮಾಡಿದ್ದರೆ ಆ ಹಣವನ್ನು ಬಿಡುಗಡೆ ಮಾಡುತ್ತೀರಾ?

ಶ್ರೀ ಸಿದ್ಧರಾಮಯ್ಯ : ಇದರ ಬಗ್ಗೆ ಸಂಶಯವನ್ನಿಟ್ಟುಕೊಳ್ಳಬೇಕಾದ ಅಗತ್ಯವೇ ಇಲ್ಲ. ಎಂ.ಎ.ಡಿ.ಬಿ.ಗೆ 30 ಕೋಟಿ ಹಣವಿದೆ. ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ಅದು ಕಡಿಮೆಯಾಗಿದೆ. ಯೋಜನೆಯ ಗಾತ್ರ ಕಡಿಮೆಯಾಗಿದ್ದರಿಂದ ಅದೂ ಸಹ ಕಡಿಮೆಯಾಗಿದೆ. ಸರಿಯಾದ ಅಂಕಿಅಂಶವನ್ನು ಅನಂತರ ಒದಗಿಸುತ್ತೇನೆ. ಸುಮಾರು 15 ಕೋಟಿ ಹಣ ಬಿಡುಗಡೆಯಾಗಿದೆ. ಅದರಲ್ಲಿ ಎಸ್.ಸಿ.ಪಿ.ಗೆ 6-7 ಕೋಟಿ, ಹೋಗುತ್ತದೆ, ಉಳಿದಂಥ ಹಣವನ್ನು ತಾವು ಖರ್ಚು ಮಾಡಿ ಅನಂತರ ಕೊಡುತ್ತೇವೆಂದು ಹೇಳಿದ್ದೇವೆ. ಅದನ್ನು ಕೊಡುತ್ತೇವೆ. ಪಿ.ಡಿ. ಅಕೌಂಟ್‌ನಲ್ಲಿ ಮುಂದುವರೆಸಿ ಅದನ್ನು ಖರ್ಚುಮಾಡಿ ಎಂದು ಹೇಳಿದ್ದೇವೆ.

+ಶ್ರೀ ಕೆ.ಎನ್ ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ನೀರಾವರಿಯಲ್ಲಿ ಎಷ್ಟು ಬಿಲ್ಲು ಬಾಕಿ ಇದೆ ಎಂಬ ಬಗ್ಗೆ ಹೇಳಿದ್ದಾರೆ. ನಮ್ಮ ಉಪಮುಖ್ಯಮಂತ್ರಿಯವರು ಹೇಳಿರುವ ಪ್ರಕಾರ ನಮ್ಮ ರಾಜ್ಯದಲ್ಲಿ ಈ ವರ್ಷ ನೀರಾವರಿಯಲ್ಲಿ 226 ಕೋಟಿ ಪೆಂಡಿಂಗ್ ಬಿಲ್ಲು ಇದೆ. ಪ್ರಾಜೆಕ್ಟ್‌ಗಳು ಕಂಟಿನ್ಯುಯಿಂಗ್ ಪ್ರೋಸೆಸ್. ಅದು ಭತ್ತ, ರಾಗಿಯ ವ್ಯಾಪಾರದಂತಲ್ಲ. ಮಾನ್ಯ ವೀರಪ್ಪಮೊಯಿಲಿಯವರು ಏಪ್ರಿಲ್‌ನಲ್ಲಿ ಇಷ್ಟೊಂದು ಪೆಂಡಿಂಗ್ ಬಿಲ್ಲು ಉಳಿದುಕೊಂಡಿರತಕ್ಕದ್ದು. It is a bad management. It has never happened in the history of Karnataka ಎನ್ನತಕ್ಕ ಮಾತನ್ನು ಎರಡುಮೂರು ಸಲ ಹೇಳಿದರು. ನಾನು 1990-91ರಿಂದ ಇಲ್ಲಿಯವರೆಗಿನ ಪೆಂಡಿಂಗ್ ಬಿಲ್ಲುಗಳ ಬಗ್ಗೆ ಮಾಹಿತಿಯನ್ನು ತಂದಿದ್ದೇನೆ. 1991ರಲ್ಲಿ ನೀರಾವರಿಯಲ್ಲಿ 30 ಕೋಟಿ ಪೆಂಡಿಂಗ್ ಬಿಲ್ಲು ಇತ್ತು. 1992ರಲ್ಲಿ 225 ಕೋಟಿ, 93ರಲ್ಲಿ 84 ಕೋಟಿ, 1994ರಲ್ಲಿ 112 ಕೋಟಿ, 1995 ರಲ್ಲಿ 107 ಕೋಟಿ 1996ರಲ್ಲಿ 134 ಕೋಟಿ, 1997ರಲ್ಲಿ 188 ಕೋಟಿ, ಈ ವರ್ಷ 226 ಕೋಟಿ ಪೆಂಡಿಂಗ್ ಬಿಲ್ಲು ನೀರಾವರಿಯಲ್ಲಿತ್ತು. ಮಾನ್ಯ ಖರ್ಗೆಯವರು ಗ್ರಾಂಟ್ ಇದ್ದರೆ, ಪೇಮೆಂಟ್ ಇದ್ದರೆ ನಾವು ಒಪ್ಪಿಕೊಳ್ಳುತ್ತೇವೆಂದು ಹೇಳಿದ್ದಾರೆ. ಗ್ರಾಂಟ್, ಎಕ್ಸಪೆಂಡಿಚರ್, ಪೇಮೆಂಟ್ ಮೂರೂ ಎಷ್ಟೆಷ್ಟು ಇದೆ ಎಂಬ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ನಾನು ಶೇಕಡಾವಾರನ್ನು ಲೆಕ್ಕಚಾರ ಮಾಡಿದ್ದೇನೆ. ಮಾನ್ಯ

ವೀರಪ್ಪಮೊಯ್ಲಿರವರು ಹಣಕಾಸು ಸಚಿವರಾಗಿಯೂ ಇದ್ದರು, ಅವರು ಈಗ ಸಭೆಯಲ್ಲಿಲ್ಲ. 1991ರಲ್ಲಿ 11.34 ಪರ್‌ಸೆಂಟ್ ಪೆಂಡಿಂಗ್ ಬಿಲ್ಲು ಇತ್ತು, against the payment/expenditure calculation... ಮಾಡಿದರೆ. 1991ರಲ್ಲಿ 8 ಪರಸೆಂಟ್, 1993ರಲ್ಲಿ, 17.75 ಪರ್‌ಸೆಂಟ್ 1994ರಲ್ಲಿ 15.83, 1995ರಲ್ಲಿ 11.70 ಪರ್‌ಸೆಂಟ್, 1996ರಲ್ಲಿ 12.43 ಪರ್‌ಸೆಂಟ್, 1997ರಲ್ಲಿ 13.74 ಪರ್‌ಸೆಂಟ್, ಈ ವರ್ಷ 15.46 ಪರ್‌ಸೆಂಟ್ ಅಂದರೆ ಹೋದ ವರ್ಷಕ್ಕಿಂತ ಎರಡು ಪರ್‌ಸೆಂಟ್ ಜಾಸ್ತಿಯಾಗಿದೆ. ಇದಕ್ಕೆ ಕಾರಣವೇನೆಂದರೆ, ನೀರಾವರಿ ಇಲಾಖೆಯಲ್ಲಿ ಕಳೆದ ಐದು ವರ್ಷಗಳ ಹಿಂದೆ ನೂರು ಪರ್‌ಸೆಂಟ್ ಗ್ರಾಂಟ್ ಇದ್ದರೆ ನೂರು ಪರ್‌ಸೆಂಟ್‌ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದರು. ಬಹಳ ವರ್ಷಗಳ ಕಾಲ ಕೊಟ್ಟಂಥ ಗ್ರಾಂಟ್ಸ್ ಲ್ಯಾಫ್ಸ್ ಆಗಿದ್ದರಿಂದ ಒಂದು ಪ್ರೊಸೀಜರನ್ನು ಅಳವಡಿಸಿ 1:1.5 ಕಾರ್ಯಕ್ರಮವನ್ನು ಇಟ್ಟಿದ್ದೇವೆ. ಅಂದರೆ ಗ್ರಾಂಟ್ 1 ಪರ್‌ಸೆಂಟ್ ಇದ್ದರೆ ಕಾರ್ಯಕ್ರಮ 1.5 ಮಾಡಿದ್ದೇವೆ. ಆ ಕಾರ್ಯಕ್ರಮದ ಅನ್ವಯ ಜಾಸ್ತಿ ಕೆಲಸ ಮಾಡಿರುವುದರಿಂದ ಜಾಸ್ತಿ ಪೆಂಡಿಂಗ್ ಬಿಲ್ಲು ಇದೆಯೇ ವಿನಹ ಬೇರೆ ಇಲ್ಲ. ಜಾಸ್ತಿ ಕೆಲಸ ಮಾಡುವುದು ತಪ್ಪು ಎಂದು ಅವರು ಹೇಳುವುದಾದರೆ ನಾವೇನು ಹೇಳಬೇಕು? ಜಾಸ್ತಿ ಕೆಲಸ ಮಾಡಿದ್ದರಿಂದ ಜಾಸ್ತಿ ಪೆಂಡಿಂಗ್ ಬಿಲ್ಲು ಇದೆ. ಪೆಂಡಿಂಗ್ ಬಿಲ್ಲು ಕಂಟಿನ್ಯುಯಸ್ ಪ್ರೊಸೆಸ್. ಇಲ್ಲಿ ಶೇಕಡಾವಾರಿನಲ್ಲಿ ಲೆಕ್ಕ ಮಾಡಿದರೆ ಪ್ರತಿ ವರ್ಷವೂ ಜಾಸ್ತಿಯಾಗಿಕೊಂಡು ಹೋಗಿದೆ. ನಾವು ಜಾಸ್ತಿ ಕೆಲಸ ಮಾಡಿದ್ದೇವೆ. ನೂರು ರೂಪಾಯಿ ಬಜೆಟ್ ಇದ್ದರೆ ನೂರೈವತ್ತು ರೂಪಾಯಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ, ಆ ನೂರೈವತ್ತು ಪರ್‌ಸೆಂಟ್ ಕಾರ್ಯಕ್ರಮದಲ್ಲಿ ಎರಡು ಪರ್‌ಸೆಂಟ್ ಕಾರ್ಯಕ್ರಮ ಜಾಸ್ತಿ ಮಾಡಿದ್ದೇವೆ. ನಾನು ಪ್ರಾಜೆಕ್ಟ್- ವೈಸ್ ಅಂಕಿಅಂಶವನ್ನು ಕೊಟ್ಟರೆ ಮಾನ್ಯ ಖರ್ಗೆಯವರಿಗೆ ಇದು ಅರ್ಥವಾಗುತ್ತದೆಂದು ಭಾವಿಸುತ್ತೇನೆ. ಬೆಳಗಾಂ ವಿಭಾಗದ ಮಲಪ್ರಭಾ, ಘಟಪ್ರಭಾಕ್ಕೆ ಈ ವರ್ಷ 71 ಕೋಟಿ ಇತ್ತು, ನಾವು ಜನವರಿಯ ವೇಳೆಗೆ 77 ಕೋಟಿ ಖರ್ಚು ಮಾಡಿದ್ದೇವೆ. ಅಂದರೆ 6 ಕೋಟಿ ಜಾಸ್ತಿ ಖರ್ಚು ಮಾಡಿದ್ದೇವೆ. ಫೆಬ್ರವರಿ ಮತ್ತು ಮಾರ್ಚ್‌ನ ಬಿಲ್ಲುಗಳನ್ನು ನಾವಿನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಮುನಿರಾಬಾದ್ ವಿಭಾಗದಲ್ಲಿ ಈ ವರ್ಷ 27 ಕೋಟಿ ಗ್ರಾಂಟ್ ಇದ್ದರೆ ನಾವು ಈಗಾಗಲೆ 31 ಕೋಟಿ ಖರ್ಚು ಮಾಡಿದ್ದೇವೆ. ಗುಲ್ಬರ್ಗಾ ವಿಭಾಗದಲ್ಲಿ 82 ಕೋಟಿ ಗ್ರಾಂಟ್ಸ್ ಇಟ್ಟಿದ್ದೆವು, ಜನವರಿಯ ಹೊತ್ತಿಗೆ 76 ಕೋಟಿ ರೂಪಾಯಿಗಳು ಖರ್ಚು ಮಾಡಿದ್ದೇವೆ. ಶಿವಮೊಗ್ಗ ವಿಭಾಗಕ್ಕೆ 19 ಕೋಟಿ ಗ್ರಾಂಟ್ಸ್ ಇಟ್ಟಿದ್ದೆವು, ಜನವರಿಯವರೆಗೆ 16 ಕೋಟಿ ಖರ್ಚು ಮಾಡಿದ್ದೇವೆ, ಕಾವೇರಿ ಬೇಸಿನ್‌ಗೆ 140 ಕೋಟಿ ಇಟ್ಟಿದ್ದೆವು, ಜನವರಿವರೆಗೆ 130 ಕೋಟಿ ಖರ್ಚು ಮಾಡಿದ್ದೇವೆ, ತುಮಕೂರು ವಿಭಾಗಕ್ಕೆ 90 ಕೋಟಿ ಇಟ್ಟಿದ್ದರೆ ಜನವರಿಯವರೆಗೆ 78 ಕೋಟಿ ಖರ್ಚು ಮಾಡಿದ್ದೇವೆ, ಗೊರೂರಿಗೆ 50 ಕೋಟಿ ಇಡಲಾಗಿತ್ತು ಜನವರಿಯವರೆಗೆ 51 ಕೋಟಿ ಖರ್ಚು ಮಾಡಿಬಿಟ್ಟಿದ್ದೇವೆ. ಮೈಸೂರು ವಿಭಾಗಕ್ಕೆ 157 ಇದ್ದರೆ ಜನವರಿಯವರೆಗೆ 147 ಕೋಟಿ ಖರ್ಚು ಮಾಡಿದ್ದೇವೆ. ಇದರ ಅರ್ಥವೇನೆಂದರೆ ಜಾಸ್ತಿ ಕೆಲಸವಾಗಿದೆ, ಹಣವನ್ನು ಕೊಡದೆ ಜಾಸ್ತಿ ಕೆಲಸವಾಗಿದೆಯೆಂದು ಅರ್ಥವಲ್ಲ, ಗ್ರಾಂಟ್ಸ್ ಏನು ರಿವೈಸ್ಡ್ ಎಸ್ಟಿಮೇಟ್ ಪ್ರಕಾರ ರಿಲೀಸ್ ಮಾಡಬೇಕಾಗಿತ್ತೋ ಅದರಲ್ಲಿ 6 ಕೋಟಿ ಬಿಟ್ಟು ಉಳಿದುದನ್ನೆಲ್ಲಾ ಬಿಡುಗಡೆ ಮಾಡಿದ್ದೇವೆ. ಜಾಸ್ತಿ ಕೆಲಸ ಮಾಡಿದ್ದರಿಂದ ಜಾಸ್ತಿ ಪೆಂಡಿಂಗ್ ಬಿಲ್ಲು ಇವೆ. 188 ಕೋಟಿ

ಹೋದ ವರ್ಷದ ಪೆಂಡಿಂಗ್ ಬಿಲ್ಲು, ಈ ವರ್ಷದ್ದು 226 ಕೋಟಿ. ಅಂದರೆ 38 ಕೋಟಿ ಮಾತ್ರ ಹೆಚ್ಚುವರಿಯಾದ ಪೆಂಡಿಂಗ್ ಬಿಲ್ಲು, ಅದು ಎರಡು ಪರ್‌ಸೆಂಟ್ ಆಗುತ್ತದೆ. ಯಾರೇ Financial Evaluators - I think they will appreciate ನೋಡಿದರೆ ಇದನ್ನು ಬಹುಶಃ ಮೆಚ್ಚಿಕೊಳ್ಳುತ್ತಾರೆ. ಹೆಚ್ಚು ಕೆಲಸ ಮಾಡಿ ನೂರು ಪರ್‌ಸೆಂಟ್ ಪೇಮೆಂಟ್ ಮಾಡಿದ್ದೇವೆ, ಜಾಸ್ತಿ ಕೆಲಸ ಮಾಡಿಸಿಕೊಂಡಿರುವುದಕ್ಕೆ ಹಣವನ್ನು ಕೊಡುತ್ತೇವೆ. ಕೊಡುವುದಿಲ್ಲವೆಂದಲ್ಲ. ಅದನ್ನು ಕೊಡಲೇ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಮಾನ್ಯ ಖರ್ಗೆಯವರು ಕೃಷ್ಣಮೇಲ್ದಂಡೆಯ ಬಗ್ಗೆ ವಿಚಾರವನ್ನು ಪ್ರಸ್ತಾಪ ಮಾಡಿದರು. ಕೃಷ್ಣ ಮೇಲ್ದಂಡೆ ಯೋಜನೆಗೆ 1249 ಕೋಟಿಯಲ್ಲಿ ಸಿವಿಲ್ ಕೆಲಸಕ್ಕೆ 700-800 ಕೋಟಿ ಖರ್ಚು ಮಾಡಬೇಕಾಗಿತ್ತು.440 ಕೋಟಿ ಭೂಪರಿಹಾರ,100 ಕೋಟಿ ಬಾಗಲಕೋಟೆಗೆ, 540 ಕೋಟಿಯನ್ನು ಅದರಲ್ಲಿ ತೆಗೆದರೆ 700 ಕೋಟಿ ಸಿವಿಲ್ ಕೆಲಸಕ್ಕೆ ನಮಗೆ ಲಭ್ಯವಾಗುತ್ತದೆ. ಕೃಷ್ಣ ಭಾಗ್ಯ ಜಲ ನಿಗಮನಿಂದ 771 ಕೋಟಿ ಸಿವಿಲ್ ಕೆಲಸ ಮಾಡಿದ್ದೇವೆ. ಅಂದರೆ ನಾವು 110 ಪರ್‌ಸೆಂಟ್ ಸಾಧನೆ ಮಾಡಿದಂತಾಗುತ್ತದೆ. ಭೂ ಪರಿಹಾರವನ್ನು ವೆಟ್‌ಗೆ ಎಷ್ಟು, ಡ್ರೈಗೆ ಎಷ್ಟು ಲ್ಯಾಂಡ್‌ಗೆ ಎಷ್ಟು ಕೊಡಬೇಕೆಂದು ಬಾಗಲಕೋಟೆಯಲ್ಲಿ ಜನರು ಸ್ಟ್ರೈಕ್ ಮಾಡುತ್ತಿರುವುದು ತಮಗೇ ಗೊತ್ತಿದೆ. ಆದರಿಂದಾಗಿ ಪರಿಹಾರವನ್ನು ಕೊಡಲು ಸಾಧ್ಯವಾಗಿಲ್ಲ. ನಾವು ಸಿವಿಲ್ ಕೆಲಸ ಮಾಡುವುದರಲ್ಲೆಲ್ಲೂ ಹಿಂದೆಬಿದ್ದಿಲ್ಲ. ಪೇಮೆಂಟ್‌ನಲ್ಲಿ ಎಲ್ಲೂ ಫೆಲ್ಯೂರ್ ಆಗಿಲ್ಲ. ಹೆಚ್ಚು ಪೇಮೆಂಟ್ ಮಾಡಿದ್ದೇವೆ. ನಮ್ಮ ಹತ್ತಿರ ಹಣವೂ ಇದೆ. ಸುಮ್ಮ ಸುಮ್ಮನೆ ಸರ್ಕಾರ ದಿವಾಳಿಯಾಗಿದೆ, ಅಷ್ಟು ಬಿಲ್ಲು, ಇಷ್ಟು ಬಿಲ್ಲು ಪೆಂಡಿಂಗ್ ಉಳಿದುಬಿಟ್ಟಿದೆ ಎಂಬುದು, ಸರಿಯಲ್ಲ. Accelerated Irrigation Programme ನಲ್ಲಿ ಪ್ರೋಗ್ರೆಸ್ ಕೊಟ್ಟಿಲ್ಲ, ಹಣ ಖರ್ಚಾಗಿಬಿಟ್ಟಿತು ಎಂದು ಅವರು ಹೇಳಿದರು 1996-97ರಲ್ಲಿ ಸೆಂಟ್ರಲ್ ಲೋನ್ ಅಸಿಸ್ಟೆಂಟ್ ಸ್ಕೀಮ್ 122 ಕೋಟಿ ಬಂತು. ಆಗ ಮಾನ್ಯ ದೇವೇಗೌಡರು ಪ್ರಧಾನಿಯಾಗಿದ್ದರು. ಆ ಸ್ಕೀಮ್ ಹಣಕಾಸು ವರ್ಷದ ಮಧ್ಯದಲ್ಲಿ ಬಂತು. ಅದರಲ್ಲಿ 61.25 ಕೋಟಿ ರೂ. ನಮಗೆ ಬಿಡುಗಡೆ ಮಾಡಿದರು. ನಾವು ಖರ್ಚುಮಾಡಿದ್ದನ್ನು ತೋರಿಸಿದೆವು. ಆದರೆ ಅವರು 61.25 ಕೋಟಿಯನ್ನು ಮಾರ್ಚ್‌ನಲ್ಲಿ ರಿಲೀಸ್ ಮಾಡಿ ಅದನ್ನು ಮುಂದಿನ ವರ್ಷ ಕೊಡುತ್ತೇವೆ, ಈ ವರ್ಷ ಬರುವುದಿಲ್ಲವೆಂದು ಹೇಳಿದರು. 1997-98ಕ್ಕೆ 175 ಕೋಟಿ ಕೊಟ್ಟಿದ್ದಾರೆ. 87 ಕೋಟಿ ರಿಲೀಸ್ ಆಗಿದೆ. ನಾವು 110 ಕೋಟಿ ಖರ್ಚು ತೋರಿಸಿದ್ದೇವೆ. ಈ ಫ್ಯಾಕ್ಟ್ಸ್ ಅವರು ಸ್ವಲ್ಪ ತಿಳಿದುಕೊಂಡಿದ್ದರೆ ಬಹಳ ಅನುಕೂಲವಾಗುತ್ತದೆ. ಗುತ್ತಿಗೆದಾರರು ಅಲ್ಲಿ ಇಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ ಎಂಬುದು ನಿಜ. ನಾನು ಇಲ್ಲವೆಂದು ಹೇಳುವುದಿಲ್ಲ. ನಾವು ಕೆಲಸ ಜಾಸ್ತಿ ಮಾಡಿದ್ದೇವೆ. ತುಮಕೂರು ಕೆನಾಲ್‌ನಲ್ಲಿ ನಾವು ಜಾಸ್ತಿ ಮಾಡಿದ್ದೇವೆ. ವಿ.ಸಿ. ನಾಲೆ ಆಧುನೀಕರಣ ಕಾರ್ಯಕ್ಕೆ 42 ಕೋಟಿ ರೂ. ನಿಗದಿ ಮಾಡಿದ್ದನ್ನು ಮೀರಿ ನಾವು 70 ಕೋಟಿ ರೂ.ಗಳವರೆಗೆ ಖರ್ಚು ಮಾಡಿ ಕೆಲಸ ಮಾಡಿದ್ದೇವೆ. ಕಾವೇರಿ ಬೇಸಿನ್‌ನಲ್ಲೂ ಕೂಡ ನಾವು ಜಾಸ್ತಿ ಕೆಲಸ ಮಾಡಿದ್ದೇವೆ. ಯು.ಕೆ.ಪಿ.ನಲ್ಲೂ ನಾವು ಕೆಲಸ ಮಾಡಿದ್ದೇವೆ. ಘಟಪ್ರಭಾ ಮತ್ತು ಮಲಪ್ರಭಾ ಕ್ಯಾನಲ್ ವರ್ಕ್ಸ್‌ಗೆ ನಾವು ಎಷ್ಟು ಮಾಡಿದ್ದೇವೆ ಎಂಬುದು ಮಾನ್ಯ ಉಪಾಧ್ಯಕ್ಷರಿಗೆ ಗೊತ್ತಿದೆ. ನಾವು ಅಲ್ಲಿ ಎಷ್ಟು ಟನಲ್ ವರ್ಕ್ಸ್ ಮಾಡಿದ್ದೇವೆ? ಬೆಣ್ಣೆತೊರೆಯಲ್ಲಿ ಎಷ್ಟು ಕೆಲಸ ಕಂಪ್ಲೀಟ್ ಮಾಡಿದ್ದೇವೆ? ಲೋಯರ್

ಮುಲ್ಲಾದಲ್ಲಿ ಎಷ್ಟು ಕೆಲಸ ಮಾಡಿದ್ದೇವೆ ಎಂಬುದು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗೊತ್ತಿದೆ. ನಾವು ಹಾಕಿದ್ದ ಪ್ರೋಗ್ರಾಮ್‌ಗಿಂತ ಐದರಷ್ಟು ಜಾಸ್ತಿ ಕೆಲಸ ಮಾಡಿ ಅಚೀವ್‌ಮೆಂಟ್ ಮಾಡಿದ್ದರಿಂದ ಪೆಂಡಿಂಗ್ ಬಿಲ್ಸ್ ಇವೆ. ಈ ಆರ್ಥಿಕ ವರ್ಷ ಏಪ್ರಿಲ್ ಒಂದರಿಂದ ಶುರುವಾಗುತ್ತಿದೆ. ಅವರಿಗೆ ನಾವು ಪೇಮೆಂಟ್ ಅನ್ನು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಕೆಲವು ರೆಕಾರ್ಡ್ಸ್ ಸರಿ ಇರಲಿ ಎಂಬ ಉದ್ದೇಶದಿಂದ ನಾನು ಕೆಲವು ಮಾತುಗಳನ್ನು ಹೇಳಲಿಚ್ಛಿಸುತ್ತೇನೆ. ಮಾನ್ಯ ನಾಗೇಗೌಡರು ಇಲ್ಲಿ ಕೆಲವು ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಗುಲ್ಬರ್ಗಾದಲ್ಲಿ ಅವರು ಯಾವ ದೃಷ್ಟಿಯಿಂದ ಹೇಳಿಕೆ ನೀಡಿದ್ದಾರೋ ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು : ಮಾನ್ಯ ಖರ್ಗೆಯವರೇ, ನೀವು ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸುವಾಗ ಎಲ್ಲಾ ವಿಚಾರಗಳನ್ನೂ ಇಲ್ಲಿ ಹೇಳಬಹುದು. ಆಗ ನಿಮಗೆ ಸಾಕಷ್ಟು ಸಮಯವೂ ಸಿಗುತ್ತದೆ. ಈಗ ಅದೆಲ್ಲಾ ಏಕೆ ಹೇಳುತ್ತಿದ್ದೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳಿಂದ ಕೆಲವೊಂದು ಸ್ಪಷ್ಟೀಕರಣವನ್ನು ಕೇಳಬಯಸಿದ್ದೇನೆ. ನಾನು ಹೆಚ್ಚಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ತುಂಬಾ ದೂರ ಒಯ್ಯಲು ಅವಕಾಶ ಕೊಡುವುದಿಲ್ಲ ಎಂಬುದು ನನಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಕೊನೆಗೆ ಎಲ್ಲಿಯಾದರೂ ಬೇಗನೆ ಮುಗಿಸಿ ಬಿಡುತ್ತಾರೆ. ಇನ್ನು ಮಾನ್ಯ ನಾಗೇಗೌಡರ ಮಾತಿನಲ್ಲಿಯೇ ಹೇಳುವುದಾದರೆ, ಅವರು ಈ ಹೇಳಿಕೆಯನ್ನು ಹಗಲಲ್ಲಿ ಕೊಟ್ಟರೋ, ರಾತ್ರಿಯಲ್ಲಿ ಕೊಟ್ಟರೋ ನನಗೆ ಗೊತ್ತಿಲ್ಲ, ಮಾನ್ಯ ನಾಗೇಗೌಡರು ದಿನಾಂಕ 13.4.98ರಂದು ಗುಲ್ಬರ್ಗಾದಲ್ಲಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಅದೇನೆಂದರೆ, for the third successive year the State Government has failed to spend the targeted fund for the World Bank aided Upper Krishna Project, the Government plan to spend Rs. 1249 crores but in 1997-98 actual spending was only Rs. 771 crores, ಇದರಿಂದ ಏನು ಗೊತ್ತಾಗುತ್ತದೆ ಎಂದರೆ, ಸುಮಾರು 500 ಕೋಟಿ ರೂ.ಗಳಷ್ಟು ಕೆಲಸ ಮಾಡಿಸುವಂಥಾದ್ದು ಬಾಕಿ ಉಳಿದಿರಬೇಕು ಅಥವಾ ಅಷ್ಟು ಹಣವಾದರೂ ನಿಮ್ಮಲ್ಲಿ ಇರಬೇಕು.

(ಗೊಂದಲ)

ಮಾನ್ಯ ನಾಗೇಗೌಡರೇ, ನಾನು ಈಗ ಯೀಲ್ಡ್ ಆಗುವುದಿಲ್ಲ. ತಾವು ಆಗಲೇ ಮಾತನಾಡುತ್ತಿದ್ದಾಗ ನಾನು ಒಮ್ಮೆ ಕೂಡ ಎದ್ದು ನಿಂತು ತಮ್ಮ ಭಾಷಣಕ್ಕೆ ಅಡ್ಡಿ ಪಡಿಸಿಲ್ಲ. 500 ಕೋಟಿ ರೂ.ಗಳಿಗೆ ಮೀರಿ ಹಣ ನಿಮ್ಮಲ್ಲಿ ಉಳಿತಾಯದ ರೂಪದಲ್ಲಿ ಇರಬೇಕು. ಆ ರೀತಿ ನಿಮ್ಮ ಬಳಿ 500 ಕೋಟಿ ರೂ.ಗಳ ಹಣ ಉಳಿತಾಯ ಇರುವುದಾದರೆ, ಇವತ್ತು 226 ಕೋಟಿ ರೂ.ಗಳಷ್ಟು ಹಣದ ಬಿಲ್ಸ್ ನಿಮ್ಮಲ್ಲಿ

ಪೆಂಡಿಂಗ್ ಹೇಗೆ ಉಳಿಯಿತು? 226 ಕೋಟಿ ರೂ.ಗಳನ್ನು ಪಾವತಿ ಮಾಡುವುದಕ್ಕೆ ನಿಮ್ಮಲ್ಲಿ ಹಣ ಇರಲಿಕ್ಕಿಲ್ಲ ಅಥವಾ 500 ಕೋಟಿ ರೂ.ಗಳ ಸಂಪನ್ಮೂಲಗಳನ್ನು ಕ್ರೋಢೀಕರಿಸಿ 1249 ಕೋಟಿ ರೂ.ಗಳನ್ನು ನಾವು ಖರ್ಚು ಮಾಡುತ್ತೇವೆ ಎಂದು ನೀವೇನು ಈ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದೀರಿ. ಅದನ್ನು ಈಡೇರಿಸಲಿಕ್ಕೆ ನಿಮ್ಮಲ್ಲಿ ಶಕ್ತಿ ಇಲ್ಲ ಎನ್ನುವಂಥಾದ್ದು ಆದರೂ ಆಗಿರಬೇಕು. ಈ ಎರಡರಲ್ಲಿ ಯಾವುದೋ ಒಂದು ಆಗಿರಬೇಕು. Either you have failed to mobilise resources or you are not able to pay this 226 crores.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಖರ್ಗೆಯವರೇ, ದಯವಿಟ್ಟು ತಾವು ಯೀಲ್ಡ್ ಆಗಬೇಕು...

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಬಜೆಟ್ ಅಮೌಂಟ್ ಯಾವುದು, ಕೆಬಿಜೆಎಲ್ ಅಮೌಂಟ್ ಯಾವುದು ಎಂಬುದು ಮಾನ್ಯ ಖರ್ಗೆಯವರಿಗೆ ಗೊತ್ತಾಗುತ್ತಿಲ್ಲ..........

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಕೆಬಿಜೆಎಲ್ ಬಾಂಡ್‌ಗಳ ಮೂಲಕ ಅಥವಾ ಇತರ ಯಾವುದೇ ರೂಪದಲ್ಲಾದರೂ ಸಂಪನ್ಮೂಲ ಕ್ರೋಢೀಕರಣ ಮಾಡಿ. That was the promise given to this House to mobilise that much of resources... ಮಾನ್ಯ ಸಿದ್ಧರಾಮಯ್ಯನವರು ಟೋಟಲ್ ಪ್ಲಾನ್ ಔಟ್ಲೆಯಲ್ಲಿ 226 ಕೋಟಿ ರೂ.ಗಳನ್ನು ಕಟ್ ಮಾಡಿದ್ದೇವೆಂದು ಒಪ್ಪಿಕೊಂಡಿದ್ದಾರೆ. ಅಂದರೆ ನಿಮ್ಮ ಒರಿಜಿನಲ್ ಪ್ಲಾನ್‌ನಲ್ಲಿ ಅಷ್ಟರಮಟ್ಟಿಗೆ ಹಣ ಖೋತಾ ಆಯಿತು. ಅಂದರೆ ಅಷ್ಟು ಹಣ ನೀವು ಕಡಿಮೆ ಖರ್ಚು ಮಾಡಿದಂತಾಯಿತು. ಇಷ್ಟೆಲ್ಲಾ ಆದಮೇಲೂ ಕೂಡ ನಿಮ್ಮ ಹೇಳಿಕೆಯ ಪ್ರಕಾರವೇ ಲೋಕೋಪಯೋಗಿ ಇಲಾಖೆಯೊಂದರಲ್ಲೇ ನಾನ್ ಪ್ಲಾನ್‌ನಲ್ಲಿ 19 ಕೋಟಿ ರೂ.ಗಳ ಪೆಂಡಿಂಗ್ ಬಿಲ್ಸ್ ಇವೆ. ಸಣ್ಣ ಮತ್ತು ಮಧ್ಯಮ ನೀರಾವರಿಗಳ ಬಗ್ಗೆ ನೀವು ಹೇಳಿದಂತಹ ಅಂಕಿ ಅಂಶಗಳನ್ನು ತೆಗೆದುಕೊಂಡರೂ ಕೂಡ ಅದು 70-80 ಕೋಟಿ ರೂ.ಗಳಾಗುತ್ತಿದೆ. ನೀವು ಇದರ ಬಗ್ಗೆ ಶ್ವೇತಪತ್ರ ಹೊರಡಿಸಿ. ಲೋಕೋಪಯೋಗಿ ಇಲಾಖೆಯೊಂದರಲ್ಲೇ 60 ಕೋಟಿ ರೂ.ಗಳ ಬಿಲ್ಸ್ ಪೆಂಡಿಂಗ್ ಇವೆ, ನೀವು ಬೇಕಾದರೆ ಇಲಾಖೆಯವರನ್ನೇ ಕೇಳಿಕೊಳ್ಳಿ.....

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ನಾನು ಬಹಳ ಸ್ಪಷ್ಟವಾಗಿ ಹೇಳಿದೆ, 96 ಕೋಟಿ ರೂ.ಗಳು ಪೆಂಡಿಂಗ್ ಇದೆ, ಆ 96 ಕೋಟಿ ರೂ.ಗಳಲ್ಲಿ ಈಗ ನೋಡಬೇಕಾಗಿರತಕ್ಕದ್ದು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಉಪಾಧ್ಯಕ್ಷರೆ, that is above budgeted ಬಜೆಟೆಡ್ ಮೇಲೆ ನೀವು ಬಿಡುಗಡೆ ಮಾಡಲಿಲ್ಲ. ಬರೀ ಜಿ.ಓ. ಇಶ್ಯೂ ಮಾಡಿರಬೇಕು ಅಷ್ಟೆ.

ಶ್ರೀ ಸಿದ್ಧರಾಮಯ್ಯ : ಅಂತಹದ್ದೇನನ್ನೂ ಕೂಡ ನಾವು ಇಶ್ಯೂ ಮಾಡಿಲ್ಲ. ಪ್ಲಾನ್ ಮತ್ತು ನಾನ್ ಪ್ಲಾನ್ ಸೇರಿ 204 ಕೋಟಿ ರೂ.ಗಳ ಗ್ರಾಂಟ್‌ನಲ್ಲಿ ನಾವು 184 ಕೋಟಿ 85 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. 19 ಕೋಟಿ ರೂ.ಗಳು ಮಾತ್ರ ಬಾಕಿ ಇದೆ. ಅದು ಬಿಟ್ಟರೆ ಬೇರೆ ಯಾವುದೂ ಇಲ್ಲ. ಆ 19 ಕೋಟಿ ರೂ.ಗಳನ್ನೂ ಕೂಡ ನಾವು ಈಗ ಬಿಡುಗಡೆ ಮಾಡುತ್ತಿದ್ದೇವೆ, ಆಗಲೇ ನಾನು ಬಿಡುಗಡೆ ಮಾಡಲು ಸೂಚನೆ ಕೊಟ್ಟಿದ್ದೇನೆ, ಬಿಡುಗಡೆ ಮಾಡಿದ್ದೇನೆ. ನಾನೇನು ಹೇಳುತ್ತಿದ್ದೇನೆ ಎಂದರೆ, ಉಳಿದ ದುಡ್ಡು ಇದೆಯಲ್ಲಾ, ಅದು ನಾನು ಈಗಾಗಲೇ ಎಕ್ಸ್‌ಪ್ಲೈನ್ ಮಾಡಿರುವ ರೀತಿಯಲ್ಲಿ ನಾವು ಹೆಚ್ಚು ಕೆಲಸ ಮಾಡಿದ್ದೇವೆ. ಹೆಚ್ಚು ಕೆಲಸ ಮಾಡಿರತಕ್ಕದ್ದನ್ನೂ ಕೂಡ ನಾವು ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತಿದ್ದೇವೆ. ಅದನ್ನು ಇವರು ನೋಡಬೇಕಾಗಿದೆ, both plan and non-plan out of which we have spent Rs. 184 crores, ಎಂಬುದನ್ನು ನೋಡಬೇಕೇ ಹೊರತು...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ವರ್ಷ ನಿಗದಿ ಪಡಿಸತಕ್ಕ...

ಶ್ರೀ ಸಿದ್ಧರಾಮಯ್ಯ : ಮಾನ್ಯ ಖರ್ಗೆಯವರೇ, ನೀವೂ ಕೂಡ ಸರ್ಕಾರ ನಡೆಸಿರುವವರೇ, ಹಾಗಾದರೆ ನಿಮ್ಮ ಕಾಲದಲ್ಲಿ ಅಂದರೆ 1993-94ರಲ್ಲಿ 112 ಕೋಟಿ ರೂ.ಗಳು ಏಕೆ ಬಾಕಿ ಇತ್ತು? ಅಷ್ಟೊಂದು ಹಣ ನೀವು ಏಕೆ ಬಾಕಿ ಉಳಿಸಿಕೊಂಡಿದ್ದೀರಿ?...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಆಗ ಕೇಳಿದ್ದರೆ ನಾನು ಉತ್ತರ ಕೊಡುತ್ತಿದ್ದೆ. ಈಗ ಇವತ್ತು ಇದಕ್ಕೆ ನೀವು ನನಗೆ ಉತ್ತರ ಹೇಳಿಬಿಡಿ. ಹೌಸಿಂಗ್‌ನಲ್ಲೂ ಕೂಡ ನೀವು ಬಿಡುಗಡೆ ಮಾಡಿದ ಹಣ ಇವತ್ತೂ ಕೂಡ ಡಿ.ಸಿ. ಹತ್ತಿರ ಬಂದಿಲ್ಲ. ಹಣ ಇದ್ದರೆ ತಾನೇ ತಾವು ಬಿಡುಗಡೆ ಮಾಡುವುದು? ಇವತ್ತು ನೀವು ಸುಮ್ಮನೆ ಇಲ್ಲಿ ಕುಳಿತುಕೊಂಡು, ನಮ್ಮ ಸರ್ಕಾರವೇನೂ ದಿವಾಳಿ ಎದ್ದಿಲ್ಲ, ನಮ್ಮದು ಸರಿ ಇದೆ ಎಂದು ಹೇಳಿಕೊಳ್ಳತಕ್ಕದ್ದು ಸರಿಯಿಲ್ಲ. ಇದನ್ನೆಲ್ಲಾ ನೋಡಿದರೆ ನಿಮಗೆ ಹಣ ಬಿಡುಗಡೆ ಮಾಡುವ ಶಕ್ತಿಯಿಲ್ಲ ಎಂಬುದು ಗೊತ್ತಾಗುತ್ತದೆ. ನೀವು ಸುಮ್ಮನೆ ಒಳಗೊಂದು, ಹೊರಗೊಂದು ಹೇಳುತ್ತೀರಿ, ಎಲ್ಲಾ ಕಡೆ ಎಗ್ಸಿಕ್ಯೂಟಿವ್ ಇಂಜಿನಿಯರ್‌ರವರ ಕಛೇರಿಗಳಿಗೆ ಜನ ಇವತ್ತು ಬೀಗ ಹಾಕುತ್ತಿದ್ದಾರೆ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಹಣಕಾಸು ಸಚಿವರೇ, ಇನ್ನೊಂದು ತಿಂಗಳಿನಲ್ಲಿ ಮಳೆಗಾಲ ಪ್ರಾರಂಭವಾಗುತ್ತಿದೆ. ಅಷ್ಟರೊಳಗೆ ರಸ್ತೆಗಳ ಅಸ್ಫಾಲ್ಟಿಂಗ್ ಕೆಲಸ ಮುಗಿಯಬೇಕು. ದುಡ್ಡು ಇಲ್ಲದೇ ಅದು ನಿಂತಿದೆ. ತಕ್ಷಣ ಅದಕ್ಕೆ ನೀವು ಹಣ ಕೊಡಲು ಏರ್ಪಾಡು ಮಾಡುತ್ತೀರೋ?

ಶ್ರೀ ಸಿದ್ಧರಾಮಯ್ಯ : ಅಸ್ಫಾಲ್ಟಿಂಗ್‌ಗೆ ಹಣ ಬಿಡುಗಡೆ ಮಾಡುವ ವಿಚಾರ ಬೇರೆ, ಅದಕ್ಕೆ ನಾವು ಏರ್ಪಾಡು ಮಾಡುತ್ತೇವೆ. ಸರ್ಕಾರ ದಿವಾಳಿಯಾಗಿದೆ, ಹಣಕಾಸಿನ ನಿರ್ವಹಣೆ ಸರಿಯಿಲ್ಲ, ಖಜಾನೆ ಖಾಲಿ ಆಗಿದೆ ಎಂದೇನು ಇವರು ಹೇಳುತ್ತಿದ್ದಾರೆ, ಇದೆಲ್ಲವೂ ರಾಜಕೀಯ ಪ್ರೇರಣೆಯಿಂದ ಜನರನ್ನು ತಪ್ಪು ದಾರಿಗೆ ಎಳೆಯುವಂತಾದ್ದು ಆಗಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾರ್ಚ್ 15ರವರೆಗೆ ಟ್ರೆಜರಿಯಲ್ಲಿ ಖಾಲಿ ಇರತಕ್ಕ ಎಲ್ಲಾ ಬಿಲ್ಲುಗಳನ್ನೂ ಕೂಡ ಹಣ ಬಿಡುಗಡೆ ಮಾಡಬೇಕೆಂದು ನಾನು ಇವತ್ತು ಅರ್ಡರ್ಸ್ ಮಾಡಿದ್ದೇನೆ.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಎಂ.ಎಲ್.ಎ.ಗಳಿಗೆ ಬೇಕಾದರೆ ಕೇಳಿ. 2 ಲಕ್ಷ ರೂ.ಗಳಿಗಿಂತ ಹೆಚ್ಚಿಗೆ ಇರತಕ್ಕ ಬಿಲ್‌ಗಳನ್ನು ಟ್ರೆಜರಿಯಲ್ಲಿ ಪಾಸ್ ಮಾಡಬಾರದೆಂದು ನೀವು ಓರಲ್ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದೀರಿ.........

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾವು ಯಾವ ಬಿಲ್ಲುಗಳ ಪಾವತಿಯನ್ನೂ ಸಹ ತಡೆ ಹಿಡಿಯುವುದಿಲ್ಲ. ಮಾರ್ಚ್ 15ರವರೆಗೆ ಪೆಂಡಿಂಗ್ ಇರತಕ್ಕ ಎಲ್ಲಾ ಬಿಲ್ಲುಗಳನ್ನೂ ಕೂಡ ಹಣ ಬಿಡುಗಡೆ ಮಾಡುತ್ತೇವೆ. ಸರ್ಕಾರದಲ್ಲಿ ಹಣದ ಕೊರತೆ ಇಲ್ಲ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರಸ್ತೆಗಳೆಲ್ಲಾ ಗುಂಡಿ ಬಿದ್ದು ಹಾಳಾಗಿವೆ. ದಯಮಾಡಿ ಆಸ್ಫಾಲ್ಟಿಂಗ್‌ಗೆ ಸ್ವಲ್ಪ ಹಣ ಬಿಡುಗಡೆ ಮಾಡಿ ಕೆಲಸ ಮಾಡಿಸದಿದ್ದರೆ ಬಹಳ ಕಷ್ಟವಾಗುತ್ತದೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಯಾವ ವಿಷಯಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಯಡಿಯೂರಪ್ಪನವರು ಸಂಶಯ ಅಥವಾ ಟೀಕೆ ಮಾಡಿ ಏನು ಹೇಳಿದರೋ ಅದು ಹೊರಗಡೆ ಮಾತನಾಡುವಾಗ ಅವರು ಆ ರೀತಿ ಹೇಳುವುದು ಸರಿ. ಅವರು ಸದನದ ಒಳಗೆ ಅವರು ಇವತ್ತು ಜವಾಬ್ದಾರಿಯುತವಾದ ಕೆಲವು ಅಂಕಿ ಅಂಶಗಳನ್ನು ಕೇಳಿದರು, ನಾವು ಆ ಅಂಕಿ ಅಂಶಗಳನ್ನು ಅವರಿಗೇ ಹೇಳಿದ್ದೇವೆ. ಈ ಒಂದು ಪ್ರಜಾತಂತ್ರೀಯ ವ್ಯವಸ್ಥೆಯಲ್ಲಿ ಪ್ಲಾನ್ ಅಂದರೆ ಏನು? ಪ್ಲಾನಿನ ಚೌಕಟ್ಟಿನೊಳಗೆ ಬಜೆಟ್ ಅನ್ನು ನಾವು ಎಷ್ಟು ಮಾಡುತ್ತೇವೆ? ಪರ್‌ಫಾರ್ಮೆನ್ಸ್ ಆಧಾರದ ಮೇಲೆ ರಿವೈಸ್ಡ್ ಎಸ್ಟಿಮೇಟ್ ಎಷ್ಟು ಮಾಡುತ್ತೇವೆ? ಕೆಲಸ ಆಗಿದ್ದರ ಆಧಾರದ ಮೇಲೆ ನಾವು ರಿವೈಸ್ಡ್ ಎಸ್ಟಿಮೇಟ್ ಕೊಡುತ್ತೇವೆ. ಖರ್ಗೆಯವರು ಏನು ಹೇಳಿದ್ದು, ಬಡ್ಜೆಟ್‌ನಲ್ಲಿ ರಿವೈಸ್ಡ್ ಎಸ್ಟಿಮೇಟ್‌ನಲ್ಲಿ ಆದ ಗ್ರ್ಯಾಂಟನ್ನು ನೀವು ಖರ್ಚು ಮಾಡಿಲ್ಲ, ಅದು ಅಲ್ಲ. Whatever Government intended might not have been spent, in the frame work of cut in the plan sanctioned.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 30 ಕೋಟಿ ರೂಪಾಯಿ ನಿಮ್ಮ ಇಲಾಖೆಯಲ್ಲಿ ಬಾಕಿ ಇದೆ.

ಶ್ರೀ ಜೆ.ಹೆಚ್. ಪಟೇಲ್ : ಇದು ಕ್ಲಾಸ್ ರೂಮ್ ಅಲ್ಲ. You cannot go on questioning me....

SRI M. MALLIKARJUNA KHARGE : After all, we are speaking in public interest.

ಶ್ರೀ ಜೆ.ಹೆಚ್. ಪಟೇಲ್ : ಪಬ್ಲಿಕ್ ಅಂದರೆ ಅವರಿಗೆ ಒಬ್ಬರಿಗೆ ಗೊತ್ತಿದೆ, ನಾವೆಲ್ಲಾ ಪ್ರೈವೇಟ್, ರಾಜ್ಯದ ಜನರ ಹಿತದೃಷ್ಟಿಯಿಂದ ನಾವು ಹೋಗುತ್ತೇವೆ. ಇವರು ಯಾರ ಪರವಾಗಿ ಬಂದಿದ್ದಾರೆ, ಗುತ್ತಿಗೆದಾರರ ಪರವಾಗಿ ಬಂದಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ನಾಚಿಕೆಯಾಗಬೇಕು, ಹೀಗೆ ಹೇಳುವುದಕ್ಕೆ ಗುತ್ತಿಗೆದಾರರ ಪರವಾಗಿ ಬಂದಿದ್ದೀರಿ ಎಂದು ಹೇಳುತ್ತಿದ್ದೀರಿ. ನನಗೆ ಏನೆಂದು ತಿಳಿದುಕೊಂಡಿದ್ದೀರಿ, ಡೆವಲಪ್‌ಮೆಂಟ್ ವರ್ಕ್ ನಿಂತಿದೆ ಎಂದರೆ ಗುತ್ತಿಗೆದಾರರ ಪರವಾಗಿ ಬಂದಿದ್ದೀರಿ ಎಂದು ಹೇಳುತ್ತಿದ್ದೀರಿ. ನೀವು ಗುತ್ತಿಗೆದಾರರ ಪರವಾಗಿದ್ದೀರೋ?

(ಗೊಂದಲ)

ನಾನು ಗುತ್ತಿಗೆದಾರರ ಪರವಾಗಿ ಇದ್ದೇನೆ ಇಲ್ಲ ಎನ್ನುವುದು ಜನರಿಗೆ ಗೊತ್ತಿದೆ. ಹಗುರವಾಗಿ ಮಾತನಾಡಬೇಡಿ.

(ಗೊಂದಲ)

ನಾನು ಪಿಡಬ್ಲ್ಯೂಡಿ ಏಜೆಂಟಾ, ಇವರ ಫೈನಾನ್ಸ್ ಮಿನಿಸ್ಟರ್ ಇದ್ದಾರೆ, ಯಾವುದಾದರೂ ಗುತ್ತಿಗೆದಾರರ ಪರವಾಗಿ ಹೇಳಿದ್ದೇನಾ? ಇದು ಹೇಳುವ ರೀತಿ ಏನು? ಗುತ್ತಿಗೆದಾರರ ಪರವಾಗಿ ಮಾತನಾಡುತ್ತೇನೆಂದು ಹೇಳಿದರೆ ಏನು ಅರ್ಥ? ಇವತ್ತಿನ ದಿವಸ ಎಲ್ಲಾ ಕಡೆ ಕೆಲಸ ನಿಂತು ಹೋಗಿದೆ. ಯಾವ ಕಂಟ್ರ್ಯಾಕ್ಟರ್ ಪರವಾಗಿ ನಿಮ್ಮ ಹತ್ತಿರ ಬಂದಿದ್ದೆ, ಯಾರದಾದರೂ ಶಿಫಾರಸ್ ತೆಗೆದುಕೊಂಡು ಬಂದಿದ್ದೇನೆಯೇ

ಶ್ರೀ ಸಿದ್ಧರಾಮಯ್ಯ : ಕಂಟ್ರ್ಯಾಕ್ಟರ್ಸ್ ಚಳುವಳಿ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಭಿವೃದ್ಧಿ ಕಾರ್ಯ ನಿಂತಿದೆ ಎಂದರೆ, ನೀವು ಗುತ್ತಿಗೆದಾರರ ಪರವಾಗಿ ಮಾತನಾಡುತ್ತಿದ್ದೀರಿ ಎಂದು ಹೇಳುತ್ತೀರೋ? ದಯಮಾಡಿ ನೀವು ಆ ಮಾತನ್ನು ವಾಪಸ್ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜ್ಯದ ಹಿತದೃಷ್ಟಿಯಿಂದ ನಾವು ಮಾತನಾಡಿದರೆ ನೀವು ಏನು ಹೇಳುತ್ತೀದ್ದೀರಿ, ಗುತ್ತಿಗೆದಾರರು ಕಮಿಷನ್ ಕೊಡಲಿಲ್ಲ ಎನ್ನುವ ಕಾರಣಕ್ಕಾಗಿ ಇಟ್ಟೀದ್ದೀರಿ ಎಂದು ನಾವು ಹೇಳಬೇಕಾಗುಗಿತ್ತೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗುತ್ತಿಗೆದಾರರ ಪರವಾಗಿ ಬಂದಿದ್ದೀರಿ ಎಂದರೆ ಏನು ಅರ್ಥ ?

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಆವೇಶದಲ್ಲಿ ಮಾತನಾಡಿರಬಹುದು, ಅದನ್ನು ವಾಪಸ್ ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನೀವು ಅವರ ಪರವಾಗಿ ವಕಾಲತ್ ಹಾಕಿದ್ದರಿಂದ ಅವರು ಹೇಳಿದ್ದುದು. ಕಂಟ್ರ್ಯಾಕ್ಟರ್ಸ್ ಗಲಾಟೆ ಮಾಡುತ್ತಿದ್ದಾರೆಂದು ಹೇಳಿದ್ದರಿಂದ. ಇದು ರೋಟೀನ್ ವರ್ಕ್ ಕಂಟಿನ್ಯೂಯಸ್ ಪ್ರಾಜೆಕ್ಟ್ಸ್. ಇವರ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದೀರಿ ಎಂದು ಹೇಳಿದ್ದುದು.

ಶ್ರೀ ಜೆ.ಹೆಚ್. ಪಟೇಲ್ : ರೆಕಾರ್ಡ್ಸ್ ತರಿಸಿ ನೋಡಿ.

ಶ್ರೀ ಕೆ.ಎಸ್ ಈಶ್ವರಪ್ಪ : ಸರ್ಕಾರಕ್ಕೆ ಬರುವ ಕಮೀಷನ್ ಕೊಡಲಿಲ್ಲ ಎಂಬ ಕಾರಣಕ್ಕೋಸ್ಕರ ಬಿಡುಗಡೆ ಮಾಡಿಲ್ಲ ಎಂದ್ದು ನಾವು ಹೇಳುತ್ತೇವೆ, ನಿಮ್ಮ ಪರವಾಗಿ.

ಶ್ರೀ ಸಿದ್ದರಾಮಯ್ಯ : ಛಾಲೆಂಜ್ ತೆಗೆದುಕೊಳ್ಳುತ್ತೀರೋ?

ಶ್ರೀ ಕೆ.ಎಸ್ ಈಶ್ವರಪ್ಪ : ತೆಗೆದುಕೊಳ್ಳಿ ಛಾಲೆಂಜ್. ನಿಮಗೆ ಕಮಿಷನ್ ಕೊಡಲಿಲ್ಲ ಅದಕ್ಕೋಸ್ಕರ ಹಣ ಬಿಡುಗೆಡ ಮಾಡಲಿಲ್ಲ. ಇಲ್ಲಿ ಅಭಿವೃದ್ಧಿ ಕಾರ್ಯ ಆಗಲಿಲ್ಲ. ಪರಿಶಿಷ್ಟ ಜನಾಂಗ ಮತ್ತು ಪರಿಶಿಷ್ಟ ಪಂಗಡಗಳಿಗೆ ಬಿಡುಗಡೆ ಮಾಡಬೇಕಾದ 800 ಕೋಟಿ ರೂಪಾಯಿ ಬಿಡುಗಡೆ ಮಾಡಲಿಲ್ಲ. ಮೈನಾರಿಟಿ ಡೆವಲಪ್‌ಮೆಂಟ್ ಬೋರ್ಡ್‌ಗೆ ಕೊಡಬೇಕಾದ ಹಣ ಬಿಡುಗಡೆ ಮಾಡಲಿಲ್ಲ. ಬಿದುಗಡೆ ಆಗದೇ ಇರುವುದಕ್ಕೆ ಉತ್ತರ ಕೊಡಲಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬೋರ್ಡ್‌ಗೆ ಒಂದು ಪೈಸೆಯೂ ಬಿಡುಗಡೆ ಮಾಡಿಲ್ಲ. ಅದು ಕೊಟ್ಟರೆ ನಾನು ಇಲ್ಲೇ ರಾಜೀನಾಮೆ ಕೊಡುತ್ತೇನೆ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : 1997-98ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನವನ್ನೂ ಸಹ ಬಿಡುಗಡೆ ಮಾಡದೆ ಇರುವುದರಿಂದ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ ಮತ್ತು ಇತರೇ ಇಲಾಖೆಗಳ ಕಾಮಗಾರಿಗಳು ಪೂರ್ಣಗೊಂಡಿದರೂ ಸಹ ಸಂಬಂಧಪಟ್ಟ ಬಿಲ್‌ಗಳನ್ನು ಪಾವತಿ ಮಾಡದೆ ಇದ್ದು ರಾಜ್ಯ ಸರ್ಕಾರ ಹಣಕಾಸಿನ ಮುಗ್ಗಟ್ಟು ಇದೆ ಎಂದು ಅದನ್ನು ಹೇಳುವಾಗ... ಖರ್ಗೆಯವರು ಏನು ಹೇಳಿದರು, ಇಲ್ಲಿ ಈ ಜಿಲ್ಲೆಯಲ್ಲಿ ಎಲ್ಲಿ ಬಿಲ್ ಕೊಟ್ಟಿಲ್ಲ, ಆ ಆಫೀಸಿಗೆ ಬೀಗ, ಇನ್ನೊಂದು ಜಿಲ್ಲೆಗೆ ಇನ್ನು ಯಾರೋ ಕಂಟ್ರ್ಯಾಕ್ಟರ್ಸ್ ದುಡ್ಡು ಕೊಟ್ಟಿಲ್ಲ, ಅದಕ್ಕೆ ಬೀಗ. ವಿಕ್ಟೋರಿಯಾ ಆಸ್ಪತ್ರೆ ಎದುರುಗಡೆ ಕೆಲಸ ಮಾಡುವ ಕಂಟ್ರ್ಯಾಕ್ಟರ್ಸ್ ಅವರು ಉಪವಾಸ ಸತ್ಯಾಗ್ರಹ. ಖರ್ಗೆಯವರು ಅವರ ಭಾಷಣದಲ್ಲಿ ಅವರ ಪರ ವಕೀಲಿ ಮಾಡಿದರು ಎಂದು ಹೇಳಿದ್ದಲ್ಲ, ಅವರು ಹೇಳಿದ್ದು ಯಾರ್‍ಯಾರಿಗೆ ಕಂಟ್ರ್ಯಾಕ್ಟರ್ಸ್‌ಗೆ ದುಡ್ಡು ಕೊಡದೇ ಇದ್ದುದ್ದರಿಂದ ಈ ರಾಜ್ಯದ ಹಣಕಾಸಿನ ವ್ಯವಸ್ಥೆ ಸರಿ ಇಲ್ಲ, ಹಣ ಇದ್ದರೆ ನೀವು ಕೊಡುತ್ತಿದ್ದಿರಿ, ಹಣ ಇಲ್ಲ ಎಂದು

ಹೇಳಿದ್ದು, ಅದಕ್ಕೆ ನಾನು ಹೇಳಿದ್ದು, ರಾಜ್ಯದ ಹಿತರಕ್ಷಣೆ ಆದಲ್ಲ, ಬಿಲ್ ಕೊಟ್ಟಿಲ್ಲ ಅವರಿಗೆ ಅಷ್ಟೇ ಹೇಳಿದ್ದು. ಅದಕ್ಕೆ ಇಲ್ಲಿ ಮೋಟಿವ್ ಅಟ್ರಿಬ್ಯೂಟ್ ಮಾಡುವುದು ನೀವು ಯಾರದೋ ಪರವಾಗಿ ಬಂದಿದ್ದೀರಿ......., ಇಲ್ಲಿ ಬಂದಿದ್ದೇನು. ಇದು ಬಡ್ಜೆಟ್ ಅಧಿವೇಶನ, ನಿಮಗೆ ಕರೆದು ಇದಕ್ಕೆ ಈ ವಿಷಯಗಳ ಮೇಲೆ ಈ ಒಂದು ಇಲಾಖೆಯ ಮೇಲೆ ಇವತ್ತು ಅದನ್ನು ಜನರಲ್ ಡಿಬೇಟ್ ಮಾಡಿ ಅದರಲ್ಲಿ ಆ ಪ್ರಾವಿಷನ್ ಕೆಳಗೆ ಬರುವ ಹಾಗಿಲ್ಲ, This is not of recent occurrence; This is neither a public interest; It is not admissible under this rule... ಆದರೂ ಚರ್ಚೆ ಮಾಡಲಿ ಎಂದು ಹೇಳಿದರೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಹೇಳುವುದು ಇಲ್ಲಿ ವಿರೋಧ ಪಕ್ಷದ ನಾಯಕರು ಅಥವಾ ನಾವೆಲ್ಲರೂ ರಾಜ್ಯದ ಹಣಕಾಸಿನ ಪರಿಸ್ಥಿತಿ ಬಗ್ಗೆ ನಮಗೆ ಸಿಕ್ಕಿರುವ ಮಾಹಿತಿ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದೇವೆ. ವೈಟ್ ಪೇಪರ್ ಡಿಮ್ಯಾಂಡ್ ಮಾಡಿದ್ದೇವೆ. ಆ ಸಮಯದಲ್ಲಿ ಹಣಕಾಸಿನ ಸಚಿವರು, ನೀರಾವರಿ ಸಚಿವರು ಉತ್ತರ ಕೊಟ್ಟಿದ್ದಾರೆ. ನಾವು ಕೆಲವು ಅಂಶ ನಿಮ್ಮ ಗಮನಕ್ಕೆ ತಂದಿದ್ದೇವೆ. ಹರಿಜನ ಗಿರಿಜನರಿಗೆ ಬಿಡುಗಡೆ ಆಗಬೇಕಾದ ಹಣ ಬಿಡುಗಡೆ ಮಾಡಿಲ್ಲ. ಮತ್ತೆ ಮಲೆನಾಡು ಅಭಿವೃದ್ಧಿಯಲ್ಲಿ 6-7 ಕೋಟಿ ರೂಪಾಯಿ ಬಿಡುಗಡೆ ಮಾಡಿಲ್ಲ. ಟಾರ್ ಇಲ್ಲದೆ ಕೆಲಸ ನಿಂತಿದೆ, ಈ ತರಹ ಸಮಯದಲ್ಲಿ ತಾವು ಒಬ್ಬರೇ ಜವಾಬ್ದಾರಿಯಿಂದ ಕುಳಿತಿರುವವರಾ? ನಾವೂ ಜವಾಬ್ದಾರಿಯಿಂದ ಕುಳಿತಿರುವವರೇ. ನೀವು ಕಂಟ್ರಾಕ್ಟರ್ ಪರ ಬಂದಿದ್ದೀರಿ ಎಂದು ಹೇಳುವ ಮಾತು ಮುಖ್ಯಮಂತ್ರಿಗಳ ಬಾಯಿಯಿಂದ ಬಂದರೆ ನಾವು ಇಲ್ಲಿ ಕೆಲಸ ಮಾಡುವುದು ಕಷ್ಟವಾಗುತ್ತದೆ. ನಿಮ್ಮಿಂದ ನಾವು ಇದನ್ನು ನಿರೀಕ್ಷೆ ಮಾಡಿರಲಿಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಇದು ಪುನಃ ಯಾವ ಭಾಷೆಯಲ್ಲಿ ಹೇಳಲಿ? ನನಗೆ ಸಾಕಷ್ಟು ಪಾರ್ಲಿಮೆಂಟರಿ ಲೈಫ್ ಎಕ್ಸ್‌ಪೀರಿಯನ್ಸ್ ಇದೆ. ನಾನೂ ವಿರೋಧ ಪಕ್ಷದಲ್ಲಿ ಕುಳಿತು ಮಾತನಾಡಿದ್ದೇನೆ, ನೀವು ಹೇಳಿದ್ದು ಏನು Adjournment motion was for what- That the Government has not cleared these bills, ಅದಕ್ಕೋಸ್ಕರ ಅಜಿಟೇಷನ್ ನಡೆಯುತ್ತಿದೆ. May be connected with the welfare of the State. I am not attributing motives; ಆ ಕಾರಣದಿಂದ ಅವರ ಪರವಾಗಿ ಬಂದಿದ್ದೀರಿ, ನೀವು ಹೇಳಿದ್ದು ಪಬ್ಲಿಕ್ ಇಂಟರೆಸ್ಟ್ ದೃಷ್ಟಿಯಿಂದ, ಇದು ಅಡ್ಜರ್ನ್‌ಮೆಂಟ್ ಮೋಷನ್ ತರುವುದು ಅಲ್ಲ. ಕಂಟ್ರಾಕ್ಟರ್ಸ್‌ಗೆ ನೀವು ಬಿಲ್ ಕೊಟ್ಟಿಲ್ಲ ಎಂದು ಹೇಳಿದ್ದೀರಿ, ಆದರೆ ಭಾಷೆಯಲ್ಲಿಯೇ ಅವರು ಮಾತನಾಡುವುದು? ನಾನು ಅವರಿಗಿಂತ ವಯಸ್ಸಿನಲ್ಲಿ ಹಿರಿಯ, ಅನುಭವದಲ್ಲಿ ಹಿರಿಯ, ನಾನು ಯಾವುದೇ ಅನ್‌ಪಾರ್ಲಿಮೆಂಟರಿ ಶಬ್ದಗಳನ್ನು ಉಪಯೋಗಿಸಿಲ್ಲ. ಬೇಕಾದರೆ ನಿಮಗೆ ತಿಳಿಯಬೇಕಾದರೆ ಹೇಳಬಲ್ಲೆ. Is this the way to behave? No.,.... ಇದರಲ್ಲಿ ಯಾವುದೇ ಉದ್ದೇಶ ಅಥವಾ ಕಳಂಕ ಇಟ್ಟುಕೊಂಡು ನಾನು ಆ ಮಾತನ್ನು ಹೇಳಲಿಲ್ಲ. ನಮ್ಮ ಹಣಕಾಸಿನ ಸಚಿವರು ಎಲ್ಲಾ ವಿವರಗಳನ್ನು ಹೇಳುತ್ತಾ ನಮ್ಮ ಪ್ಲಾನ್ ಏನು? ಎಷ್ಟು ಕಟ್ ಆಯಿತು? ಬಜೆಟ್ ಏನು, ರಿವೈಸ್ಡ್ ಎಸ್ಟಿಮೇಟ್ ಏನು, ಆಕ್ಚುಯಲ್ ಪರ್‌ಫಾರ್ಮೆನ್ಸ್ ಏನು ಎಂಬುದನ್ನೆಲ್ಲಾ

ಬಿಡಿಸಿ ಬಿಡಿಸಿ ಹೇಳಿದರೂ ಕೂಡ ನೀವು ಇಲ್ಲ, ಇಲ್ಲ. ಎಂದರೆ ಹೇಗೆ? ನಮ್ಮ ನೀರಾವರಿ ಇಲಾಖಾ ಮಂತ್ರಿಗಳೂ ಕೂಡ ವಿವರಿಸುತ್ತಾ ನಾವು ನಿರೀಕ್ಷೆಗಿಂತ ಹೆಚ್ಚು ಖರ್ಚು ಮಾಡಿದುದ್ದರಿಂದ ಕೆಲವೊಂದು ಕಡೆ ಬಿಲ್‌ಗಳು ಉಳಿದಿವೆಯೆಂದು ಸ್ಪಷ್ಟವಾಗಿ ಹೇಳಿದ್ದಾರೆ. ನನಗೆ ಇವೊತ್ತು ಆರೋಗ್ಯ ಸರಿಯಿಲ್ಲದ ಕಾರಣ ನಾನು ಮಧ್ಯೆ ಮಧ್ಯೆ ಮಾತನಾಡುವುದಕ್ಕೆ ಹೋಗಿಲ್ಲ. ಈಗ ದೋಷಾರೋಪಣೆ ಇಲ್ಲ. I never doubt your bonafides. Similarly, you should have some minimum respect for the Leader of the House. ಉಪಾಧ್ಯಕ್ಷರೇ, ಈ ವಿಷಯದಲ್ಲಿ ರಾಜಕೀಯವಾಗಿ ಬಹಿರಂಗ ಭಾಷಣದಲ್ಲಿ ಹೇಳಬಹುದು. ಸರ್ಕಾರದಲ್ಲಿ ದುಡ್ಡಿಲ್ಲ, ಅವರ ಸರ್ಕಾರವಿದ್ದಾಗ ಸಂಬಳ ಕೊಡುವುದಕ್ಕೆ ದುಡ್ಡು ತಂದರು, ಹೀಗೆ ಅಲ್ಲಿ ಹೇಳಬಹುದು. ಆದರೆ ಈ ಸದನದಲ್ಲಿ ನಾವು ಮಾತನಾಡುವಾಗ ಅದರಲ್ಲಿ ಪ್ರತಿಯೊಂದು ಆಧಾರದ ಮೇಲೆ ಇರಬೇಕು ಮತ್ತು ಸತ್ಯಾಂಶವಿರಬೇಕಾಗುತ್ತದೆ. ತಪ್ಪು ಇದ್ದರೆ ತಿದ್ದಿಕೊಳ್ಳಬೇಕು. ಯಾವುದೋ ಪೇಪರ್‌ನಲ್ಲಿ ಒಂದು ಸುದ್ಧಿ ಬಂದಿರುತ್ತದೆ, ಅವರು ಏನೋ ಹೇಳಿರುತ್ತಾರೆ, ಅವರಿಗೆ ಆಧಾರ ಏನೂ ಗೊತ್ತಿರುವುದಿಲ್ಲ, ಆದರೆ ನಾವು ಪೇಪರ್ ಸುದ್ಧಿಯನ್ನೇ ಆಧಾರವನ್ನಾಗಿ ಇಟ್ಟುಕೊಳ್ಳಬಾರದು; ಗೊತ್ತಿಲ್ಲದೇ ಇರುವವರು ಯಾರೋ ಪೇಪರ್‌ನವರಿಗೆ ಕೊಟ್ಟಿರುತ್ತಾರೆ. ನಿಮಗೆ ನೇರವಾಗಿ ಸರ್ಕಾರಿ ಆದೇಶವೇನಾದರೂ ಗೊತ್ತಿದ್ದರೆ ಅಥವಾ ಅದರ ಡಾಕ್ಯುಮೆಂಟ್ಸ್ ಏನಾದರೂ ಇದ್ದರೆ there is a rule that we cannot make use of the news appearing in a Daily. It cannot be authentic proof, even in the courts. ಅದಕ್ಕೇ ನಾನು ಆ ಆಧಾರದ ಮೇಲೆ ನೀವು ಪೇಪರ್‌ನಲ್ಲಿ ಆ ರೀತಿ ಹೇಳಿದ್ದೀರಿ ಎಂದು ನಾನು ಹೇಳಿದ್ದು. ಸರ್ಕಾರದಲ್ಲಿ ಖಜಾನೆ ಖಾಲಿಯಾಗಿದೆ. "Government is bankrupt : Mr. Kharge" ಎಂದರೆ ನಾನು ಸುಮ್ಮನೆ ಕುಳಿತುಕೊಳ್ಳಲೇನು? ನಮ್ಮ ಖಜಾನೆ ಖಾಲಿಯಾಗಿಲ್ಲ. Much more than what it was done previously ಕೆಲಸ ನಡೆಯುತ್ತಿದೆ, ಒಂದು ವೇಳೆ ಖಾಲಿಯಾಗಿದ್ದರೆ ಪಾಪ ಅವರದ್ದೂ ಖಾಲಿಯಾಗಿರಬಹುದು, ಕಾಂಗ್ರೆಸ್ ಪಕ್ಷದ್ದು ಖಾಲಿಯಾಗಿರಬಹುದು, ಏಕೆಂದರೆ ಮೊನ್ನೆ ಚುನಾವಣೆಯಾಯಿತಲ್ಲಾ, ಅದರ ನಂತರ ಅವರ ಜೇಬು ಖಾಲಿಯಾಗಿರಬಹುದು. ಅದರೊಳಗೇನೂ ವ್ಯಂಗ್ಯವಿಲ್ಲ. ಅದು ವಾಸ್ತವಿಕವಾದುದೇ. ಹಾಗೆ ಹೇಳಿದರೂ ವ್ಯಂಗ್ಯವಾಗುತ್ತದೆ. ಈಗ ನೀವು ಹೇಳಬಹುದು ನಮ್ಮದೇನೂ ಖಾಲಿಯಾಗಿಲ್ಲವೆಂದು, ಇದ್ದರೂ ಇರಬಹುದು. ಆದರೆ ಅವರದ್ದೂ ಖಾಲಿಯಾಗಿದೆ, ಅವರ ಪಕ್ಷದ್ದೂ ಖಾಲಿಯಾಗಿದೆ, ನಮ್ಮದಂತೂ ಖಾಲಿಯಾಗಿದೆ. ಅದಕ್ಕೋಸ್ಕರವೇ ನಾನು ಆ ಅರ್ಥದಲ್ಲಿ ಹೇಳಿದರೆ ಅದನ್ನು ತಿಳಿದುಕೊಳ್ಳುವ ಅರ್ಥದಲ್ಲಿ ಅವರು ನನ್ನ ಭಾಷೆಯನ್ನು ಉಪಯೋಗಿಸಿದರೆ he should have complimented ಅದಕ್ಕೋಸ್ಕರವೇ ಹೇಳುತ್ತಿದ್ದೇನೆ, ಈ ಚರ್ಚೆಯನ್ನು ಇಲ್ಲಿಗೆ ಮುಗಿಸೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಮತ್ತೆ ನೀವು ಕೇಳುವುದು, ಅದಕ್ಕೆ ಅವರು ಉತ್ತರ ಹೇಳುವುದು. ಹೀಗೆ ಇನ್ನು ಎಷ್ಟು ಹೊತ್ತು ಹೇಳಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ನಾನು ಮುಖ್ಯಮಂತ್ರಿಯವರಿಗೆ ಹೇಳುತ್ತಿಲ್ಲ. ತಮಗೆ ಮತ್ತು ಈ ಸದನಕ್ಕೆ ಹೇಳುತ್ತಿದ್ದೇನೆ. ನಾವು ಯಾವಾಗಲೂ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಮಧ್ಯೆ ಮಾತನಾಡುವುದಿಲ್ಲ. ಅವರು ಮಾತನಾಡಲಿ ಎಂದು ಸುಮ್ಮನಿರುತ್ತೇವೆ. ಆದರೆ ಅವರು ಮಾತನಾಡುವಾಗ ನಾವು ಈ ಅಡ್ಜರ್ನ್‌ಮೆಂಟ್ ಮೋಷನನ್ನು ಕಾಂಟ್ರಾಕ್ಟರ್ ಪರವಾಗಿ, ಗುತ್ತಿಗೆದಾರರ ಪರವಾಗಿ ತಂದಿದ್ದೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಅಂದರೆ ನಾವು ಕಾಂಟ್ರಾಕ್ಟರ್ ಪರವಾಗಿ ಇಲ್ಲಿ ಏಜೆಂಟ್‌ರಾಗಿ ಕೆಲಸ ಮಾಡುತ್ತಿದ್ದೇವೆ ಎನ್ನತಕ್ಕಂಥ ಅರ್ಥದಲ್ಲಿ ಅವರು ಹೇಳಿದರು. ಇದನ್ನು ನಾವು ಅವರಿಂದ ಅಪೇಕ್ಷೆ ಮಾಡಿಲ್ಲ. ಯಾವ ರೀತಿಯಾಗಿ ನಾನು ಚಿಕ್ಕವನಾಗಿ ಜೋರಾದ ಧ್ವನಿಯಲ್ಲಿ ಮಾತನಾಡುವುದನ್ನು ಅವರು ಹೇಗೆ ಅಪೇಕ್ಷೆ ಮಾಡುವುದಿಲ್ಲವೋ ಅದೇ ರೀತಿಯಾಗಿ ನನಗೆ ಹೇಗೆ ನೋವಾಯಿತು ಎಂದರೆ ನಾನು ಯಾವೊತ್ತೇ ಆಗಲೀ ಮುಖ್ಯಮಂತ್ರಿಗಳನ್ನಾಗಲೀ, ಉಪ ಮುಖ್ಯಮಂತ್ರಿಗಳನ್ನಾಗಲೀ ಅಥವಾ ನೀರಾವರಿ ಸಚಿವರಾದ ನಾಗೇಗೌಡರನ್ನಾಗಲೀ ಯಾವುದಾದರೂ ಕಾಂಟ್ರಾಕ್ಟರ್ ಬಿಲನ್ನು ಪೇಮೆಂಟ್ ಮಾಡಿ ಎಂದು ಆಗಲೀ ಅಥವಾ ಇಂಥ ಕೆಲಸ ನಿಂತುಹೋಗಿದೆಯಾದ ಕಾರಣ ತಾವು ದಯವಿಟ್ಟು ನೋಡಿ ಎಂದು ಈ ಮೂರು ವರ್ಷಗಳಲ್ಲಿ ಒಂದು ದಿವಸವಾದರೂ ಅವರ ಬಾಗಿಲನ್ನು ತುಳಿದಿದ್ದರೆ ನನಗೆ ಏನು ಬೇಕಾದರೂ ಶಿಕ್ಷೆ ಕೊಡಲಿ, ನಾನು ಅನುಭವಿಸುವುದಕ್ಕೆ ತಯಾರಾಗಿದ್ದೇನೆ. ನನ್ನ ಮೇಲೆ ಏನೋ ಸಿಟ್ಟು ಇತ್ತೋ ಏನೋ ಗೊತ್ತಿಲ್ಲ, ಆ ಕಾರಣದಿಂದ ಇದನ್ನು ಡೈವರ್ಟ್ ಮಾಡಬೇಕು ಎಂದೇನೋ ಮಾಡಿದರೇನೋ. ಇದನ್ನು ನಾನು ಹೇಗೆ ಸಹಿಸಿಕೊಳ್ಳಲಿ? ನಿಮಗೆಷ್ಟು ಸ್ವಾಭಿಮಾನ ಇದೆಯೋ ಅಷ್ಟೇ ಸ್ವಾಭಿಮಾನ ನನಗೂ ಇದೆ. ಅಷ್ಟೇ ನೋವು ನನಗೂ ಆಗುತ್ತದೆ. ಆದುದರಿಂದ ನಾನು ನಿಮಗೆ ನೋವು ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಮಾತನಾಡಲಿಲ್ಲ. ನಾನು ಮಾತನಾಡುವ ಧಾಟಿಯೇ ಹಾಗೆ. ಆದರೆ ನನಗೆ ನೋವು ಮಾಡತಕ್ಕಂಥ ಹಾಗೆ ಮಾತನಾಡಿದರೆ ನನಗೂ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ ದಯವಿಟ್ಟು ನೀವು ಇದನ್ನು ಕಾಂಟ್ರಾಕ್ಟರ್ ಪರವಾಗಿ ತಂದಿದ್ದೇವೆ ಎಂದು ನೀವು ತಿಳಿದುಕೊಳ್ಳಬೇಡಿ. ರಾಜ್ಯದ ಹಿತದೃಷ್ಟಿಯಿಂದ ಇವೊತ್ತು ಹಣಕಾಸಿನ ಪರಿಸ್ಥಿತಿ ಸರಿ ಇಲ್ಲದೇ ಇರುವ ಕಾರಣ ಅನೇಕ ಕಡೆ ಬಾಕಿ ಕೊಡಬೇಕಾಗಿದೆ. ಇದನ್ನು ನಾನು ಹೇಳುವುದೊಂದೇ ಅಲ್ಲ, ನ್ಯಾಚುರಲಿ ಗೊತ್ತಾಗುತ್ತದೆ. ಈಗ ಅವರು ಹೇಳಿದ್ದಾರೆಂದರೆ ಪೇಪರ್ ಆಧಾರದ ಮೇಲೆ ಹೇಳಿದ್ದಾರೆ ಎಂದು ನೀವು ಹೇಳುತ್ತೀರಿ. ಪೇಪರ್ ಆಧಾರ ಬೇಡವೇ ಬೇಡ. ಈ ಸದನದಲ್ಲಿ ಸ್ಟೇಟ್‌ಮೆಂಟನ್ನು ಮಾಡಿದರು. ಇಷ್ಟು ಹಣವನ್ನು ಕೊಡಬೇಕಾಗಿದೆಯೆಂದು ಹೇಳಿದ್ದಾರೆ. ಆಧಾರಗಳಲ್ಲಿ ಕೆಲವು ಪತ್ರಿಕಾ ಆಧಾರಗಳು ಇರುತ್ತವೆ, ಇನ್ನು ಕೆಲವನ್ನು ನೀವೇನು ಗೌವರ್ನ್‌ಮೆಂಟ್ ಆರ್ಡರನ್ನು, ಸರ್ಕ್ಯುಲರನ್ನು ಟ್ರೆಜರಿಗೆ ಕಳುಹಿಸಿರುತ್ತೀರಿ ಅದರ ಆಧಾರದ ಮೇಲೂ ಹೇಳಿರುತ್ತೇವೆ. ಆ ರೀತಿಯಲ್ಲಿ ಎಲ್ಲೆಲ್ಲಿ ಯಾವ್ಯಾವ ಆಧಾರದ ಪ್ರಕಾರ ಉಪಯೋಗ ಮಾಡಿಕೊಂಡು ಹೇಳಬೇಕೋ ಹೇಳುತ್ತೇವೆ. ಆದರೆ ನಿಮ್ಮ ಪ್ರೆಸ್ಟೀಜ್ ಗೋಸ್ಕರ ನೀವು ಅದನ್ನು ಅಲ್ಲಗಳೆಯುತ್ತೀರಿ. ಆದರೆ ನಮ್ಮ ದೃಷ್ಟಿಯಲ್ಲಿ ಇವೊತ್ತಿಗೂ ಕೂಡ ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರ ಕೊಡಬೇಕಾದ ಬಾಕಿ ಇದೆ. ಈ ಕಾರಣದಿಂದಲೇ ರಾಜ್ಯದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿದೆ. ಅದು

ಎಸ್.ಸಿ.ಪಿ.ಯೇ ಇರಬಹುದು, ಅಂಬೇಡ್ಕರ್ ಹೌಸಸ್‌ದೇ ಇರಬಹುದು, ಸಣ್ಣ ಅಥವಾ ದೊಡ್ಡ ನೀರಾವರಿಯದೇ ಇರಬಹುದು, ರಸ್ತೆ ಮತ್ತು ಸೇತುವೆಯದೇ ಇರಬಹುದು, ಇಷ್ಟೇ ಅಲ್ಲದೇ ಬೇರೆ ಸಂಘ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಬೇಕಾದುದು ಇರಬಹುದು ಅಥವಾ ಸಣ್ಣ ಕೈಗಾರಿಕೆಗಳಿಗೆ ಕೊಡತಕ್ಕಂಥ ಸಬ್ಸಿಡಿಯೂ ಇರಬಹುದು. ಈ ರೀತಿಯದು ಅನೇಕವಿವೆ. ಅದಕ್ಕಾಗಿಯೇ ನಾನು ಪಟ್ಟಿಯನ್ನು ಮಾಡಿ ಹೇಳುವುದಕ್ಕೆ ಹೋಗುವುದಿಲ್ಲ. ಪುನಃ ಇದು ಬಜೆಟ್ ಸೆಷನ್‌ನಲ್ಲಿ ಬರುತ್ತದೆ ಆಗ ನಾನು ಹೇಳುತ್ತೇನೆ. ಅದಕ್ಕಾಗಿಯೇ ನಾವು ಇವೊತ್ತು ಶ್ವೇತಪತ್ರವನ್ನು ಸದನದಲ್ಲಿ ಇಡಬೇಕೆಂದು ಸರ್ಕಾರವನ್ನು ಡಿಮ್ಯಾಂಡ್ ಮಾಡಿದ್ದೇವೆ. ತಾವು ಗ್ರ್ಯಾಂಟ್ಸ್ ಎಷ್ಟಿದೆ, ಎಷ್ಟು ಪ್ರಾವಿಷನ್ ಇತ್ತು ಎಷ್ಟು ಪ್ಲಾನ್‌ನಲ್ಲಿ ಕಟ್ ಆಗಿದೆ, ಕಟ್ ಆದ ಪ್ರಕಾರವೇ ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿ ಖರ್ಚಾಗದೇ ಉಳಿದಿದೆ ಎಂಬುದನ್ನು ಮಾರ್ಚ್ 31ಕ್ಕೆ ಅಂತ್ಯವಾಗುವ ಹಾಗೆ ಹೇಳಬೇಕು. ಏಕೆಂದರೆ ಪುನಃ ನೀವು ಹೊಸ ರಿಸೋರ್ಸಸ್ ಮೊಬಿಲೈಸ್ ಮಾಡಿ ಹಳೆಯದನ್ನು ಕೊಡತಕ್ಕಂಥದ್ದು ಒಂದು ತರಹ. ನಾನು ಅದಕ್ಕೆ ಹೋಗುವುದಿಲ್ಲ. ಆದರೆ 31ರ ಮಾರ್ಚ್ ಪ್ರಕಾರ ಬಜೆಟ್‌ನಲ್ಲಿ ತಾವು ಮಾಡಿದ ಪ್ರಾವಿಷನ್ ಪ್ರಕಾರ ತಾವು ಒಂದು ಶ್ವೇತಪತ್ರವನ್ನು ಪಬ್ಲಿಷ್ ಮಾಡಿ. ಅದನ್ನು ಬಿಟ್ಟು ನೀವು ಶ್ವೇತಪತ್ರವನ್ನು ಪಬ್ಲಿಷ್ ಮಾಡುವುದಕ್ಕೆ ಆಗುವುದಿಲ್ಲ, ನಾವು ಹೇಳಿದ್ದೇ ಸರಿ ಎಂದರೆ ನಾವು ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ. ಇದರಿಂದ ಏನು ಗೊತ್ತಾಗುತ್ತದೆಂದರೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಮತ್ತು ಅದಕ್ಕೆ ನೀವು ಸ್ಪಂದಿಸುತ್ತಿಲ್ಲವೆಂದು ಹೇಳಿ ಪ್ರತಿಭಟನೆಯನ್ನು ವ್ಯಕ್ತಪಡಿಸಿ ನಾವು ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಉಪಾಧ್ಯಕ್ಷರೇ, ಎಮ್. ಐ.ಡಿ.ಬಿ.ನಲ್ಲಿ ಸ್ಪೆಷಲ್ ಕಾಂಪೋನೆಂಟ್‌ಗೆ 8 ಕೋಟಿ ರೂ.ಗಳನ್ನು ಕೊಟ್ಟಿಲ್ಲ. ಇನ್ನು 15 ಕೋಟಿ ಬಿಡುಗಡೆ ಮಾಡಬೇಕು. ಇಡೀ ರಾಜ್ಯದಲ್ಲಿ ಆಸ್ಫಾಲ್ಟ್ ಕೆಲಸಗಳು ನಿಂತಿವೆ. ಇಂಥ ಸಂದರ್ಭದಲ್ಲಿ ನಾವು ಅವುಗಳನ್ನು ಸರಿಪಡಿಸುತ್ತೇವೆ ಎನ್ನುವಂಥ ಭರವಸೆಯನ್ನು ನಮಗೆ ಅವರು ಕೊಡದಿದ್ದರೆ ನಾವೂ ಕೂಡ ಅನಿವಾರ್ಯವಾಗಿ ಸಭಾತ್ಯಾಗವನ್ನು ಮಾಡುತ್ತೇವೆ.

(ಬಿ.ಜೆ.ಪಿ.ಯ ಶಾಸಕರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಲೋಕೋಪಯೋಗಿ ರಸ್ತೆಗಳಂತೂ ಕುಲಗೆಟ್ಟು ಹೋಗಿವೆ. ಇಡೀ ರಾಜ್ಯದಲ್ಲಿ ಎಲ್ಲಾ ರಸ್ತೆಗಳು ಕೆಟ್ಟಿವೆ. ಈ ರೀತಿಯಾದರೆ ಅದು ನಿಮಗೂ ಕೆಟ್ಟ ಹೆಸರಾಗುತ್ತದೆ. ಈ ಬಗ್ಗೆ ನಿಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು) : ಈಗಾಗಲೇ ಜನರಲ್ ಬಜೆಟ್ ಮೇಲೆ ಇವೆಲ್ಲವನ್ನೂ ಹೇಳಿದರು. ಬಜೆಟ್ ಮಂಡಿಸಿರುವುದು ಡಾಕ್ಯುಮೆಂಟ್ ಅಲ್ಲವೇ? ಸದನದಲ್ಲಿ ಎಲ್ಲಾ ಅಂಕಿಅಂಶಗಳನ್ನೊಳಗೊಂಡ ಬಜೆಟ್ ಇಟ್ಟಿದ್ದರೂ ಕೂಡ ಅದರ ಮೇಲೆ ಮತ್ತೆ ಶ್ವೇತಪತ್ರ ಇವರಿಗೆ

ಬೇಕಂತೆ; ಬಜೆಟ್‌ಗಿಂತ ಶ್ವೇತಪತ್ರ ಇವರಿಗೆ ಬೇಕು. ಕಾನೂನು ಪ್ರಕಾರವಾಗಿ ಕಳೆದ ತಿಂಗಳು ಬಜೆಟನ್ನು ಸದನದ ಮುಂದಿಟ್ಟು ಅದರ ಬಗ್ಗೆ ಚರ್ಚೆಯಾಗಿ ಅಪ್ರೂವ್ ಆಗಿದೆ. ವಿರೋಧ ಪಕ್ಷದವರೇ ಅಪ್ರೂವ್ ಮಾಡಿ ಕೊಟ್ಟಿದ್ದಾರೆ. ಇಷ್ಟಾಗಿದ್ದರೂ ಈಗ ಶ್ವೇತ ಪತ್ರ ಇವರಿಗೆ ಬೇಕಂತೆ! ನಾವು ಗ್ರ್ಯಾಂಟ್ಸ್ ಮೇಲೆ ಇಟ್ಟಿರತಕ್ಕಂಥ ಹಣವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿದ್ದೇವೆ. ಇವೊತ್ತು ಪೆಂಡಿಂಗ್ ಬಿಲ್ಸ್ ಉಳಿದುಕೊಂಡಿರುವುದು ಏಕೆಂದರೆ ನಾವು ಅಪ್ರೂವ್ ಮಾಡಿದ ಕೆಲಸಗಳಿಗಿಂತ ಹೆಚ್ಚು ಕೆಲಸ ಮಾಡಿರುವುದರಿಂದ. ಗ್ರ್ಯಾಂಟ್ಸ್‌ಗಿಂತ ಹೆಚ್ಚು ಕೆಲಸ ಮಾಡುವುದರಿಂದ ಆ ಪೆಂಡಿಂಗ್ ಬಿಲ್ಸ್‌ಗಳು ಪ್ರತಿವರ್ಷ ಉಳಿದುಕೊಂಡು ಬರುತ್ತವೆ. ಅವನ್ನು ನಾವು ಇನ್ನು ಮೂರ್‍ನಾಲ್ಕು ತಿಂಗಳುಗಳಲ್ಲಿ ತೀರಿಸುತ್ತೇವೆ. ಟ್ರೆಜರಿಯವರಿಗೆ 15ರೊಳಗೆ ಉಳಿದಿರತಕ್ಕಂಥ ಎಲ್ಲಾ ಬಿಲ್ಸ್‌ಗಳನ್ನು ಕ್ಲಿಯರ್ ಮಾಡಬೇಕೆಂದು ಹೇಳಿದ್ದೇವೆ. ಆದುದರಿಂದ ಸರ್ಕಾರದಲ್ಲಿ ಇವೊತ್ತು ಆರ್ಥಿಕ ಮುಗ್ಗಟ್ಟು ಇಲ್ಲ. ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆ. ಇದನ್ನು ನಾನು ಹೇಳುತ್ತಿಲ್ಲ. ವಿಶ್ವಬ್ಯಾಂಕ್‌ನವರೇ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ಎಂದು ಹೇಳಿದ್ದಾರೆ. ಆದುದರಿಂದ ಇವರು ಅದನ್ನು ಒಪ್ಪಿಕೊಳ್ಳತಕ್ಕಂಥ ಮನಸ್ಸು ತೋರದೇ ಕೇವಲ ಪ್ರಚಾರಕ್ಕೋಸ್ಕರ ಈ ರೀತಿ ಮಾಡಿದರೆ ಅದನ್ನು ಜನರು ಒಪ್ಪಿಕೊಳ್ಳುವುದಿಲ್ಲ. ಆದುದರಿಂದ ಅವರು ಹೇಳಿರತಕ್ಕಂಥ ವಿಚಾರದಲ್ಲಿ ಸತ್ಯಾಂಶವಿಲ್ಲ.

ಉಪಾಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ತಂದಂಥ ನಿಲುವಳಿ ಸೂಚನೆಯನ್ನು ನಿರಾಕರಿಸಲಾಗಿದೆ. ಈಗ ಸಭೆಯನ್ನು ಮುಂದೂಡಿ ಮತ್ತೆ 4 ಗಂಟೆಗೆ ಪುನರ್‌ಸಮಾವೇಶಗೊಳ್ಳುವುದು.

(ಸದನ ಭೋಜನ ವಿರಾಮಕ್ಕಾಗಿ 3 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 4 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು).

ಸದನವು ನಂತರ ಪುನಃ 4.21ಕ್ಕೆ ಸಮಾವೇಶಗೊಂಡಿತು

(ಉಪಸಭಾಪತಿಗಳು, (ಶ್ರೀ ಚಂದ್ರಶೇಖರ ಎಂ. ಮಾಮನಿರವರು) ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ

ಬೆಳ್ತಂಗಡಿ ತಾಲ್ಲೂಕಿನಲ್ಲಿ ಬಿರುಗಾಳಿಯಿಂದ ಆಗಿರತಕ್ಕ ಹಾನಿ

+ ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಏಪ್ರಿಲ್ ಒಂದನೇ ತಾರೀಖಿನಿಂದ ಬೆಳ್ತಂಗಡಿ ತಾಲ್ಲೂಕಿನ ಕೆಲವು ಗ್ರಾಮಗಳು ಮುಖ್ಯವಾಗಿ, ಕಣಿಯೂರು, ಕರಾಯ, ಮಚ್ಚಿನ, ಕೊಯೂರ್, ಬಾರ್‍ಯ, ತೆಕ್ಕಾರು ಇತ್ಯಾದಿ ಗ್ರಾಮಗಳಲ್ಲಿ ರೈತರಿಗೆ ಮತ್ತು ರೈತ ಕಾರ್ಮಿಕರಿಗೆ ಅಲ್ಲಿ ವಿಪರೀತವಾದ ಬಿರುಗಾಳಿಯಿಂದಾಗಿ ವಿಪರೀತವಾದ ತೊಂದರೆಯಾಯಿತು. ದೂರವಾಣಿ, ವಿದ್ಯುತ್ ಕಂಬಗಳು ಎಲ್ಲಾ ಬಿದ್ದು ದೂರವಾಣಿ ಹಾಗೂ ವಿದ್ಯುತ್ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಇದು ನಮ್ಮ ಮುಖ್ಯ ಸಚೇತಕರ ಕ್ಷೇತ್ರ, ಅವರು ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ, ಉಸ್ತುವಾರಿ ಸಚಿವರು